ಪಾರಸಿಕರು

ಶ್ರೀ

BMS
K882
AESBP

ಪ್ರಕಾಶಕರು

ವಿಶ್ವಸಾಹಿತ್ಯ

ಮೈಸೂರು

ಶ್ರೀಕಂಠಮಾಲೆ ೩—ವಿಶ್ವಸಾಹಿತ್ಯಮಾಲೆ ೯

ಪಾರಸಿಕರು

ಶ್ರೀ

14312

SOLE AGENTS
VENKATARAMIAH & SONS.
VIDYANIDHI BOOK DEPOT,
HUNDRED FEET ROAD, MYSORE.

VISVESWARAPURAM, BANGALORE CITY
EASTEND SHOP
BOOK SELLERS &
GENERAL MERCHANTS.

ಪ್ರಕಾಶಕರು
ವಿಶ್ವಸಾಹಿತ್ಯ
ಮೈಸೂರು

ಮೊದಲ ಮುದ್ರಣ—೧೯೪೯

BMS
K882
AESP

9717

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ

ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ
ಗ್ರಂಥ ಭಂಡಾರ
ಕ್ರಮ ಸಂಖ್ಯೆ 14312
ವರ್ಗ
ವರ್ಗ ಸಂಖ್ಯೆ
ಬಂದ ತಾ॥ 19/11/08
ಬೆಲೆ

ಬೆಲೆ : ೧-೪-೦

ಮುದ್ರಣಕಾರರು :
ಜಿ. ಎಚ್. ರಾಮರಾವ್, ಬಿ.ಎಸ್‌ಸಿ.
ಮೈಸೂರು ಪ್ರಿಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್,
ಮೈಸೂರು

ಅರಿಕೆ

ಗುರುವರ್ಯ "ಶ್ರೀ"ಯವರ ಕೃತಿಗಳನ್ನೆಲ್ಲ ವಿಶ್ವಸಾಹಿತ್ಯಮಾಲೆಯಲ್ಲಿ 'ಶ್ರೀಕಂಠಮಾಲೆ' ಎಂಬ ಅಂಕಿತದಲ್ಲಿ ಪ್ರತ್ಯೇಕವಾಗಿ ಪ್ರಕಟಿಸಲು ಸಂಕಲ್ಪಿಸಿ, ಈಗಾಗಲೆ "ಹೊಂಗನಸುಗಳು" ಕವನ ಸಂಕಲನವನ್ನು ಕನ್ನಡಿಗರ ಮುಂದೆ ಇಟ್ಟಿದೆ. ಮಾಲೆಯ ಮೊದಲನೆಯ ಪುಷ್ಪವಾದ "ಇಂಗ್ಲಿಷ್ ಗೀತೆಗಳು" ಇಷ್ಟರಲ್ಲಿಯೇ ಹೊರಬೀಳಲಿದೆ. ಈಗ ಮೂರನೆಯದಾಗಿ "ಪಾರಸಿಕರು" ನಾಟಕವನ್ನು ಪ್ರಕಟಿಸಿದೆ. ಇದನ್ನು ನಮ್ಮ ಮಾಲೆಯಲ್ಲಿ ಸೇರಿಸಿಕೊಳ್ಳಲು ಅವಕಾಶಕೊಟ್ಟಿದ್ದಕ್ಕಾಗಿ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದವರಿಗೆ ನಮ್ಮ ವಂದನೆಗಳು. ಈಸ್ಕಿಲಸ್ಸಿನ ವಿಷಯವಾಗಿ ಪ್ರಬಂಧವನ್ನು ಬರೆದು ಕೊಟ್ಟು ಶ್ರೀ. ಎ. ಎನ್. ಮೂರ್ತಿರಾಯರು ಉಪಕಾರಮಾಡಿದ್ದಾರೆ. "ಸಂಭಾವನೆ" ಗ್ರಂಥದಲ್ಲಿಯ ಗ್ರೀಕ್ ರುದ್ರನಾಟಕವನ್ನು ಕುರಿತ ಪ್ರಬಂಧವನ್ನು ಇಲ್ಲಿ ಬಳಸಿಕೊಂಡಿದೆ. ಸಾಮಾನ್ಯ ವಾಚಕರಿಗೆ ಕೊಂಚ ಸಹಾಯವಾಗಲೆಂದು ಒಂದು ಅರ್ಥಕೋಶವನ್ನು ಕೊಟ್ಟಿದೆ.

ಈ ನಾಟಕ ಹೊರಬೀಳಲು ಸಹಕರಿಸಿದ ಎಲ್ಲರಿಗೂ ನಮ್ಮ ವಂದನೆಗಳು.

ಈ ನಾಟಕವನ್ನು ಬೆಂಗಳೂರು ಸೆಂಟ್ರಲ್ ಕಾಲೇಜಿನ ವಜ್ರ ಮಹೋತ್ಸವ ಸಂದರ್ಭದಲ್ಲಿ ಮೊದಲು ಆಡಿತು.

ಮೈಸೂರು
೨೦-೬-೧೯೪೯

ಕ. ವೆಂ. ರಾಘವಾಚಾರ್
ಸಂಪಾದಕ

ಒಳಪಿಡಿ

ಪೀಠಿಕೆ

ಸಾಹಿತ್ಯದಲ್ಲೂ ಕಲೆಯಲ್ಲೂ ಒಂದು ಶತಮಾನದಿಂದ ಮತ್ತೊಂದಕ್ಕೆ ಸ್ಪಷ್ಟವಾದ ಪ್ರಗತಿ ಕಂಡುಬರುವುದಿಲ್ಲ. ಹಿಂದಿನ ಸಾಹಿತಿಗಳಿಗಿಂತ ಮುಂದಿನವರು ಉತ್ತಮರಾಗುತ್ತಾರೆಂದು ಹೇಳಲಾಗುವುದಿಲ್ಲ. ಈಸ್ಕಿಲಸ್ ಸತ್ತು ೨೪೦೦ ವರ್ಷಗಳು ಕಳೆದಿವೆ. ಆದರೆ ಇಂದೂ ಪ್ರಪಂಚದ ಅತ್ಯುತ್ತಮ ಕವಿಗಳೆಂದು ಐದಾರು ಜನರ ಹೆಸರನ್ನು ಮಾತ್ರ ಆರಿಸಿಕೊಂಡರೆ ಆ ಪಟ್ಟಿಯಲ್ಲಿ ಈಸ್ಕಿಲಸ್ಸನ ಹೆಸರನ್ನು ಸೇರಿಸದೆ ವಿಧಿಯಿಲ್ಲ. ಅದೇನು ಅದ್ಭುತವಾದ ರಾಸಾಯನಿಕ ಕ್ರಿಯೆ ನಡೆದು ಘನವಾದ ಸಾಹಿತ್ಯಕೃತಿಗಳ ಉದಯವಾಗುತ್ತದೆಯೋ ಇದುವರೆಗೆ ಯಾರೂ ತಿಳಿದಿಲ್ಲ. ಯಾವುದೋ ದಿವ್ಯಶಕ್ತಿ ತನಗೆ ಹುಚ್ಚುತೋರಿದ ಘಳಿಗೆಯಲ್ಲಿ ಯಾರೋ ಒಬ್ಬನಮೇಲೆ ತನ್ನ ಪ್ರಭಾವವನ್ನು ಬೀರಿ ಅವನನ್ನು ಆವೇಶಯುಕ್ತನನ್ನಾಗಿ ಮಾಡುತ್ತದೆ. ಈ ಅಲೌಕಿಕ ಶಕ್ತಿಯ ಆದರಕ್ಕೆ ಪಾತ್ರರಾದವರಲ್ಲಿ ಇಪ್ಪತ್ತೈದು ಶತಮಾನಗಳ ಹಿಂದೆ ಗ್ರೀಸಿನಲ್ಲಿ ಬದುಕಿದ್ದ ಈಸ್ಕಿಲಸ್ಸನೂ ಒಬ್ಬ. ಗ್ರೀಸಿನ ರಾಜಕೀಯ ವೈಭವ ಈಗ ಕೇವಲ ಇತಿಹಾಸದ ಮಾತು. ಈಸ್ಕಿಲಸ್ ತನ್ನ ನಾಟಕಗಳನ್ನು ಬರೆದದ್ದು ಪುರಾತನ ಗ್ರೀಕ್ ಭಾಷೆಯಲ್ಲಿ—ಅದು ಈಗ ಎಲ್ಲೂ ಆಡುವ ಭಾಷೆಯಾಗಿಲ್ಲ. ಆ ನಾಟಕಗಳನ್ನು ಪ್ರದರ್ಶಿಸಿದ ರಂಗಸ್ಥಳ ಈಗಿನವರ ದೃಷ್ಟಿಯಲ್ಲಿ ಇನ್ನೂ ಶೈಶವಾವಸ್ಥೆಯಲ್ಲಿರುವಂತೆ ತೋರಬಹುದು. ಅವನ ನಾಟಕ ತಂತ್ರವೂ ಈಗಿನವರಿಗೆ ಹಿಡಿಸದಿರಬಹುದು. ಇಷ್ಟಾದರೂ ಅವನ ಕೀರ್ತಿ ಇಂದಿಗೂ ಮಸಕಾಗಿಲ್ಲ. ಪುರಾತನ ಗ್ರೀಕ್ ಭಾಷೆಯನ್ನು ಇಂದಿಗೂ ಜನರು ಕಲಿಯುವರೆಂದರೆ, ಗ್ರೀಸಿಗೆ ಇನ್ನೂ ಪ್ರಪಂಚದಲ್ಲಿ ಉನ್ನತಸ್ಥಾನವಿರುವುದೆಂದರೆ, ಈಸ್ಕಿಲಸ್ಸನಂಥವರು ಆ ಹಳೆಯ ಸಂಸ್ಕೃತಿಯ ಸಾರಸರ್ವಸ್ವವನ್ನು ತಮ್ಮ ಕೃತಿಗಳಲ್ಲಿ ಹಿಡಿದಿಟ್ಟಿರುವುದರಿಂದ.

ಈಸ್ಕಿಲಸ್ (ಕ್ರಿ. ಪೂ. ೫೨೫-೪೫೬) ಹುಟ್ಟಿದ್ದು ಎಲ್ಯೂಸಿಸ್ ಎಂಬ ಊರಿನಲ್ಲಿ. ಅವನ ತಂದೆ ಯುಫೋರಿಯನ್ ಅಥೆನ್ಸಿನಲ್ಲಿ ಉಚ್ಚ

ವಂಶವೊಂದಕ್ಕೆ ಸೇರಿದವನು. ನಾಟಕಕಲೆ ಈ ಮನೆತನಕ್ಕೆ ಒಲಿದು ಬಂದದ್ದೆಂದು ಹೇಳಬಹುದು. ಈಸ್ಕಿಲಸ್ಸನ ಸಹೋದರಿಯ ಮಗನೂ ರುದ್ರನಾಟಕಕಾರ; ಒಂದು ಸಾರಿ ಡಯೊನೀಸಿಯ ಹಬ್ಬದಲ್ಲಿ ಮೊದಲ ನೆಯ ಬಹುಮಾನ ಪಡೆದವನು. ಸುಮಾರು ಐದು ತಲೆಮಾರಿನವರೆಗೆ ಈ ಮನೆತನದಲ್ಲಿ ನಾಟಕಕಲೆ ನೆಲಸಿದ್ದಂತೆ ತೋರುತ್ತದೆ. ಆದರೆ ಅದು ಪರಮಾವಧಿಯನ್ನು ಮುಟ್ಟಿದ್ದು ಈಸ್ಕಿಲಸ್ಸನಲ್ಲಿ. ಅವನು ತನ್ನ ಜೀವಮಾನದಲ್ಲಿ ಹದಿಮೂರು ಸಾರಿ ಬಹುಮಾನಪಡೆದನೆಂದು ಬಹಳ ಹಿಂದೆಯೇ ಬರೆದ ಅವನ ಜೀವನ ಚರಿತ್ರೆಯಿಂದ ತಿಳಿಯಬರುತ್ತದೆ. ಅವನು ಸತ್ತಮೇಲೂ ಅವನ ನಾಟಕಗಳಿಗೆ ಅನೇಕವೇಳೆ ಬಹುಮಾನ ಬಂತು. ಅವನಿನ್ನೂ ಚಿಕ್ಕ ಹುಡುಗನಾಗಿದ್ದಾಗಲೇ ಡಯೋನಿಸಸ್ ದೇವನು ಅವನಿಗೆ ಕನಸಿನಲ್ಲಿ ಪ್ರತ್ಯಕ್ಷನಾಗಿ ರುದ್ರನಾಟಕಗಳನ್ನು ಬರೆಯುವಂತೆ ಆಜ್ಞೆಮಾಡಿದನೆಂದು ಕಥೆಯಿದೆ. ಇದರ ಸತ್ಯಾಂಶ ಎಷ್ಟೇ ಇರಲಿ, ಅವನ ನಾಟಕಗಳ ವಿಷಯದಲ್ಲಿ ಆಗಿನವರಿಗೆ ಎಷ್ಟು ಗೌರವವಿತ್ತೆಂದು ಈ ಕಥೆಯಿಂದ ವ್ಯಕ್ತವಾಗುತ್ತದೆ.

ಪರಿಪೂರ್ಣವಾದ ಜೀವನ ನಡಸಬೇಕೆಂಬುದು ಪುರಾತನ ಗ್ರೀಕರ ಆದರ್ಶ. ಈಸ್ಕಿಲಸ್ ಕೇವಲ ಕೊಠಡಿಯಲ್ಲಿ ಲೇಖನಿ ಹಿಡಿದು ಕುಳಿತವನಲ್ಲ. ಅವನು ಬದುಕಿದ್ದದ್ದು ಗ್ರೀಕರಿಗೆ ಅತ್ಯಂತ ಕಠಿನಪರಿಸ್ಥಿತಿ ಒದಗಿದ್ದ ಕಾಲದಲ್ಲಿ. ಏಷ್ಯದ ಮೇಲೆ ನೊಗವಿಟ್ಟು ಮಹಾ ಸಾಮ್ರಾಜ್ಯವನ್ನು ಕಟ್ಟಿದ್ದರೂ ದಾಹವಿಂಗದೆ ಪಾರಸಿಕರು ಗ್ರೀಸಿನಮೇಲೆ ದಂಡೆತ್ತಿ ಬಂದರು. ಗ್ರೀಕರ ಅಸ್ತಿತ್ವಕ್ಕೆ ಭಂಗಬರುವಂತಾಗಿ ರಾಷ್ಟ್ರಕ್ಕೆ ರಾಷ್ಟ್ರವೇ ಎದ್ದು ಎಲ್ಲ ತ್ಯಾಗಕ್ಕೂ ಸಿದ್ಧವಾಗಿ ಪರ್ಸದ ಪ್ರಚಂಡ ಶಕ್ತಿಯನ್ನು ಎದುರಿಸಿ ನಿಲ್ಲಬೇಕಾಯಿತು. ಆ ಹೋರಾಟದಲ್ಲಿ ಈಸ್ಕಿಲಸ್ ಪ್ರಶಂಸನೀಯವಾದ ಪಾತ್ರವನ್ನು ವಹಿಸಿದ್ದನೆಂದು ತೋರುತ್ತದೆ. ಮೊರಥಾನ್, ಸಾಲಮಿಸ್, ಪ್ಲಾಟಿಯ ಮುಂತಾದ ಕದನಗಳಲ್ಲಿ ಅವನು ಸ್ವತಃ ಶಸ್ತ್ರಹಿಡಿದು ಕಾದಿದವನು. ಆದ್ದರಿಂದಲೇ ತನ್ನ ನಾಟಕದಲ್ಲಿ ಯುದ್ಧದ ಸನ್ನಿವೇಶವನ್ನು ವರ್ಣಿಸುವಾಗ ಅಷ್ಟೊಂದು ವಿವರಗಳನ್ನು ಕೊಟ್ಟು ಓದುಗರ ಕಣ್ಣಿಗೆ ಕಟ್ಟುವಂತೆ ಚಿತ್ರಿಸುವುದು ಸಾಧ್ಯವಾಯಿತು.

ಅವನ ವರ್ಣನೆ ಚರಿತ್ರಕಾರನಾದ ಹೆರೋಡಟಸ್ಸನ ವರ್ಣನೆಗಿಂತಲೂ ಉತ್ತಮವಾಗಿ ಕಾಣುತ್ತದೆ.

ಈಸ್ಕಿಲಸ್ ಸ್ವಲ್ಪಮಟ್ಟಿಗಾದರೂ ದೇಶಸಂಚಾರಮಾಡಿದವನು. ಆತನು ಸಿಸಿಲಿಗೆ ಕೆಲವು ಬಾರಿ ಹೋಗಿದ್ದನೆನ್ನುವುದಕ್ಕೆ ಆಧಾರವಿದೆ. ಸೈರಕ್ಯೂಸಿನ ದೊರೆ ಹೈರೋನ್ ಎಂಬವನು ಕ್ರಿ. ಪೂ. ೪೭೬ ರಲ್ಲಿ ಈಸ್ಕಿಲಸ್ಸಿಗೆ ಸತ್ಕಾರ ನಡಸಿದನು. ೪೭೨ ರಲ್ಲಿ ಅಥೆನ್ಸಿನಲ್ಲಿ ಪ್ರದರ್ಶಿಸಿದ್ದ 'ಪಾರಸಿಕರು' ನಾಟಕವನ್ನು ಸೈರಕ್ಯೂಸಿನಲ್ಲಿ ಪುನಃ ಆಡಿದರು. ಒರಿಸ್ಟಿಯ ಮುಕ್ಕೂಟವನ್ನು ಬರೆದು ಆಡಿಸಿದ ಮೇಲೂ ಅವನು ಮತ್ತೊಂದು ಸಾರಿ ಸೈರಕ್ಯೂಸಿಗೆ ಹೋಗಿದ್ದನು.

ಬಹುಶಃ ಅವನ ಮೊದಲನೆಯ ನಾಟಕ ೫೦೦ ರಲ್ಲಿ ಹೊರಕ್ಕೆ ಬಂದಿರಬಹುದು. ಅವನು ಡಯೊನೀಸಿಯ ಹಬ್ಬದಲ್ಲಿ ಮೊದಲ ಬಾರಿ ಬಹುಮಾನ ಪಡೆದದ್ದು ೪೮೪ ರಲ್ಲಿ. 'ಪಾರಸಿಕರು' ನಾಟಕದ ಪ್ರದರ್ಶನ ಮೊದಲು ನಡೆದದ್ದು ೪೭೨ ರಲ್ಲಿ. ೪೬೮ ರಲ್ಲಿ ಅವನಿಗಿಂತ ಕಿರಿಯನಾದ ಸೋಫೊಕ್ಲೀಸ್ ಅವನನ್ನು ನಾಟಕಸ್ಪರ್ಧೆಯಲ್ಲಿ ಸೋಲಿಸಿದನು. ಅವನ ಒರಿಸ್ಟಿಯ ಮುಕ್ಕೂಟ ೪೫೮ ರಲ್ಲಿ ರಂಗಸ್ಥಳಕ್ಕೆ ಬಂತು. ಒಂದು ಸಾರಿ ಈಸ್ಕಿಲಸ್ ತನ್ನ ನಾಟಕದಲ್ಲೇ ಅಭಿನಯಿಸುತ್ತಿದ್ದಾಗ, ಡಿಮಿಟರ್ ದೇವತೆಗೆ ಸಂಬಂಧಪಟ್ಟ ಕೆಲವು ವಾಕ್ಯಗಳನ್ನು ರಂಗಸ್ಥಳದಿಂದ ಕೇಳಿ ಪ್ರೇಕ್ಷಕರು ಸಿಟ್ಟಿಗೆದ್ದರು. ಸಾಮಾನ್ಯರಿಗೆ ತಿಳಿಯದಂತೆ ರಹಸ್ಯವಾಗಿಡಬೇಕಾದ ವಿಷಯಗಳನ್ನು ಈಸ್ಕಿಲಸ್ ಹೊರಗೆಡವಿದನೆಂದು ಭಾವಿಸಿ ಜನರು ಉದ್ರೇಕಗೊಂಡರು. ಆಪಾದನೆಗೆ ಉತ್ತರಕೊಡಲು ಈಸ್ಕಿಲಸ್ ಎರಿಯಾಪೇಗಸ್ ನ್ಯಾಯಾಸ್ಥಾನದಲ್ಲಿ ನಿಲ್ಲಬೇಕಾಯಿತು. ಆ ವಿಷಯಗಳು ರಹಸ್ಯವೆಂಬ ಅರಿವು ತನಗಿರಲಿಲ್ಲವೆಂದು ಈಸ್ಕಿಲಸ್ ವಾದಿಸಿದನು. ಆತ ಮಾರಥಾನ್ ಯುದ್ಧದಲ್ಲಿ ತೋರಿಸಿದ್ದ ಪರಾಕ್ರಮವನ್ನು ನೆನೆದೋ ಏನೊ, ಅವನನ್ನು ಬಿಡುಗಡೆ ಮಾಡಿದರು.

ಈಸ್ಕಿಲಸ್ ಸತ್ತದ್ದು ಕ್ರಿ.ಪೂ. ೪೫೬ ರಲ್ಲಿ. ಯಾವುದೋ ಗಿಡುಗ ಆಮೆಯೊಂದನ್ನು ಎತ್ತಿಕೊಂಡು ಹಾರಿಹೋಗುತ್ತಿದ್ದಾಗ ಆಮೆ ಅವನ

ತಲೆಯ ಮೇಲೆ ಬಿದ್ದು ಅವನ ಮರಣಕ್ಕೆ ಕಾರಣವಾಯಿತೆಂದು ಕಥೆಯಿದೆ. ಅವನ ಗೋರಿಕಲ್ಲಿನ ಮೇಲೆ ಈ ವಾಕ್ಯಗಳನ್ನು ಬರೆದಿದ್ದರಂತೆ: "ಗೋಥಿಯ ಬಸಿರಿನ ಈ ಗೇಲಾ ಪ್ರಾಂತದಲ್ಲಿ ಮರಣಹೊಂದಿದ ಅಥೆನ್ಸಿನ ಪುತ್ರ, ಯುಫೋರಿಯನ್ನನ ಮಗ, ಈಸ್ಕಿಲಸ್ ಇಲ್ಲಿ ಮಲಗಿದ್ದಾನೆ. ಅವನ ಅನುಪಮಶೌರ್ಯದ ಕಥೆಯನ್ನು ಮಾರಥಾನಿನ ತೋಪುಗಳು ಹೇಳಬಲ್ಲವು; ಅಥವಾ ಆ ಶೌರ್ಯದ ಅನುಭವವನ್ನು ಚೆನ್ನಾಗಿ ಪಡೆದಿದ್ದ ದೀರ್ಘಕೇಶಿಯಾದ ಪಾರಸಿಕ ಹೇಳಬಲ್ಲ." ಈ ವಾಕ್ಯಗಳನ್ನು ಗೇಲಾದವರೇ ಬರಸಿದರೋ ಏನೊ. ಕೆಲವರೇನೋ ಈಸ್ಕಿಲಸ್ಸೇ ಅವನ್ನು ಬರೆದಿಟ್ಟಿದ್ದನೆಂದು ಅಭಿಪ್ರಾಯಪಡುತ್ತಾರೆ. ಯುದ್ಧದಲ್ಲಿ ಅವನು ವಹಿಸಿದ ಪಾತ್ರವನ್ನು ಮಾತ್ರ ಉಲ್ಲೇಖಿಸಿ ಕವಿತಾ ಸಾಮರ್ಥ್ಯದ ಮಾತೇ ಎತ್ತದಿರುವುದನ್ನು ನೋಡಿದರೆ ಈ ಊಹೆ ಸರಿಯಿದ್ದರೂ ಇರಬಹುದು ಎನ್ನಿಸುತ್ತದೆ.

ಗ್ರೀಸಿನ ಮೂರು ಜನ ಪ್ರಸಿದ್ಧ ನಾಟಕಕಾರರಲ್ಲಿ* ಈಸ್ಕಿಲಸ್ಸೇ ಮೊದಲಿಗ. ಆತನನ್ನು ರುದ್ರನಾಟಕದ ಸೃಷ್ಟಿಕರ್ತನೆಂದೇ ಕರೆಯುತ್ತಾರೆ. ಹಾಗೆಂದರೆ ಅವನಿಗಿಂತ ಹಿಂದೆ ಯಾರೂ ರುದ್ರನಾಟಕಗಳನ್ನು ಬರೆಯಲಿಲ್ಲವೆಂದಲ್ಲ. 'ಪಾರಸಿಕರು' ಎಂಬ ಹೆಸರಿನ ನಾಟಕವನ್ನೇ ಫ್ರಿನಿಕಸ್ ಎಂಬಾತ ಬರೆದಿದ್ದ. ಇನ್ನೂ ಹಿಂದಕ್ಕೆ ಹೋದರೆ ನಮಗೆ ಥೆಸ್ಪಿಸ್ ಎಂಬಾತನ ಹೆಸರು ಮೊದಲು ಸಿಕ್ಕುತ್ತದೆ. ಈಸ್ಕಿಲಸ್ಸಿಗೆ ಸಲ್ಲತಕ್ಕ ಕೀರ್ತಿ ರುದ್ರನಾಟಕಗಳನ್ನು ಮೊದಲು ಬರೆದನೆಂಬ ಕೀರ್ತಿಯಲ್ಲ; ಅದಕ್ಕಿಂತಲೂ ಹೆಚ್ಚಿನದು. ಈಗ 'ರುದ್ರನಾಟಕ', 'ರುದ್ರಸನ್ನಿವೇಶ', 'ರುದ್ರವಾತಾವರಣ' ಎಂಬ ಪದಗಳನ್ನು ಉಪಯೋಗಿಸಿದರೆ ನಮ್ಮ ಮನಸ್ಸಿನಲ್ಲಿ ಯಾವ ಕಲ್ಪನೆ ಮೂಡಿಬರುತ್ತದೋ, ಯಾವ ಭಾವಕ್ಷೇತ್ರ ಸೃಷ್ಟಿಯಾಗುತ್ತದೋ, ಆ ಕಲ್ಪನೆಯೂ ಭಾವಕ್ಷೇತ್ರವೂ ಮೊದಲು ಸೃಷ್ಟಿಯಾದದ್ದು ಈಸ್ಕಿಲಸ್ಸನ ನಾಟಕಗಳಲ್ಲಿ.

ಆಡಿನ ವೇಷಧರಿಸಿದ ಭಕ್ತರು ಸ್ತೋತ್ರ ಗೀತೆಗಳಿಂದಲೂ ನೃತ್ಯ

---

* ಈಸ್ಕಿಲಸ್, ಸೋಫೊಕ್ಲೀಸ್, ಯುರಿಪಿಡೀಸ್.

ದಿಂದಲೂ ಡಯೋನಿಸಸ್ ದೇವತೆಗೆ ಪೂಜೆಸಲ್ಲಿಸುವ ಸನ್ನಿವೇಶದಿಂದ ರುದ್ರನಾಟಕ ಬೆಳೆದು ಬಂತು. ' Tragedy ' ಎಂಬ ಪದಕ್ಕೆ 'ಅಜಗೀತೆ' ಎಂದೇ ಮೂಲಾರ್ಥ. ಈ ಗೀತನೃತ್ಯಗಳ ಪ್ರದರ್ಶನ ನಡೆಯುತ್ತಿದ್ದುದ್ದು ಅಥೆನ್ಸಿನ ಡಯೊನೀಸಿಯ ಹಬ್ಬದಲ್ಲಿ. ಗ್ರೀಕ್ ರಂಗಸ್ಥಳದ ಸಂಪ್ರದಾಯ ಈ ಧಾರ್ಮಿಕ ವಾತಾವರಣಕ್ಕೆ ಹೊಂದಿಕೊಂಡದ್ದು. ಅಲ್ಲಿ ಪ್ರದರ್ಶಿಸಿದ ನಾಟಕಗಳಲ್ಲಿ ಸಾಧಾರಣವಾಗಿ ವೀರಪೂಜೆಗೆ ಮತ್ತು ಧರ್ಮಕ್ಕೆ ಸಂಬಂಧಪಟ್ಟ ವಿಷಯಗಳೇ ಮೊದಮೊದಲು ಕಥಾವಸ್ತುವಾಗುತ್ತಿದ್ದವು. ಅನಂತರ ಹಿಂದಿನಿಂದ ಸಾಂಪ್ರದಾಯಿಕವಾಗಿ ಬಂದ ಕಥೆಗಳೂ ಉಪಯೋಗಕ್ಕೆ ಬಂದವು. ಪ್ರದರ್ಶನ ಮುಗಿಯುವವರೆಗೂ ರಂಗಸ್ಥಳವನ್ನು ಬಿಟ್ಟು ಕದಲದಿದ್ದ ಮೇಳಕ್ಕೆ, ಮತ್ತು ಅವರ ಗೀತಕ್ಕೇ ಈ ಪ್ರದರ್ಶನದಲ್ಲಿ ಪ್ರಾಶಸ್ತ್ಯ. ಕ್ರಮೇಣ ಮೇಳನಾಯಕನು ತನ್ನ ಜೊತೆಯವರಿಂದ ಬೇರೆಯಾಗಿ ಮುಂದೆ ಬಂದನು. ಅನಂತರ ಒಬ್ಬ, ಸ್ವಲ್ಪ ಕಾಲದ ಮೇಲೆ ಇಬ್ಬರು, ಕೊನೆಗೆ ಮೂವರು ನಟರು ಸೇರಿ, ಗೀತದಿಂದ ಸಂಭಾಷಣೆ ಬೆಳೆದು, ರುದ್ರನಾಟಕ ಪೂರ್ಣರೂಪವನ್ನು ತಳೆಯಿತು. ಈ ರೂಪನ್ನು ಮೊದಲು ಕೊಟ್ಟವನು ಈಸ್ಕಿಲಸ್. ಅವನಿಗಿಂತ ಹಿಂದೆಯೇ ರಂಗಸ್ಥಳಕ್ಕೆ ಬಂದಿದ್ದ ಒಂಟಿನಟನ ಜೊತೆಗೆ ಈಸ್ಕಿಲಸ್ ಮತ್ತೊಬ್ಬನನ್ನು ಸೇರಿಸಿದನು. ತರುವಾಯ ಬಂದ, ಆದರೂ ಸಮಕಾಲೀನನಾದ, ಸೋಫೊಕ್ಲೀಸ್ ಮೂರನೆಯ ನಟನೊಬ್ಬನನ್ನು ಸೇರಿಸಿದನು. ಈ ಸುಧಾರಣೆ ಈಸ್ಕಿಲಸ್ಸನ ಮನಸ್ಸಿಗೆ ಒಪ್ಪಿ ಅವನೂ ತನ್ನ ಮುಂದಿನ ನಾಟಕಗಳಲ್ಲಿ ಈ ಪದ್ಧತಿಯನ್ನು ಆಚರಣೆಗೆ ತಂದುಕೊಂಡನು. ಹೀಗೆ ನಟರು ಹೆಚ್ಚಿದ್ದರಿಂದ ಮೇಳದ ಪ್ರಾಶಸ್ತ್ಯ ಕಡಮೆಯಾಗಿ ಸಂಭಾಷಣೆಯ ಪ್ರಾಶಸ್ತ್ಯ ಹೆಚ್ಚಿತು. ಆದರೆ ಮೇಳವೂ ಉಳಿದುಕೊಂಡು ನಾಟಕಕ್ಕೆ ಗೀತ, ಅಥವಾ ಗೀತಭಾವವು ಕೊಡಬಹುದಾದ ಅಲೌಕಿಕವಾದ ಸೌಂದರ್ಯವನ್ನು ಒದಗಿಸುತ್ತಲೇ ಇತ್ತು. ದುರ್ಭರವಾದ ಸನ್ನಿವೇಶವೊಂದರಿಂದ ದಾಪು ತೆಗೆದುಕೊಂಡು ಮೇಳವು ನಮ್ಮನ್ನು ಗಾನಸಾಮ್ರಾಜ್ಯಕ್ಕೆ ಒಯ್ದು ಆ ಸನ್ನಿವೇಶದ ಸಂಕಟವನ್ನು ಸ್ವಲ್ಪ ಮಟ್ಟಿಗೆ ಮರೆಯಿಸುವುದು ಮಾತ್ರವಲ್ಲದೆ ಅದನ್ನು ಆನಂದವಾಗಿ

ಮಾರ್ಪಡಿಸುತ್ತಿತ್ತು. ನಮ್ಮ ಇಪ್ಪತ್ತನೆಯ ಶತಮಾನದ ನಾಟಕಗಳಲ್ಲಿ ಈ ಗೀತಭಾವ ಮರೆಯಾಗಿರುವುದೊಂದು ದೊಡ್ಡ ನಷ್ಟ.

ಜನರಿಂದಲೂ ಘಟನೆಗಳಿಂದಲೂ ತುಂಬಿತುಳುಕುವ ರಂಗಸ್ಥಳ, ಸುಲಭವಾಗಿ ನಡಸಬಹುದಾದ ಸ್ಥಾನ ಬದಲಾವಣೆ, ಆಶ್ಚರ್ಯಕರವಾದ 'ಸೀನರಿ'ಗಳು, ಕಿಡಿಯಿಂದ ಕಿಡಿ ಹಾರಿದಂತೆ ಸಾಗುವ ಸಂಭಾಷಣೆ, ನಾಟಕದಲ್ಲಿನ ಕ್ರಿಯಾಬಾಹುಳ್ಯ,—ಇವೆಲ್ಲದರ ಪರಿಚಯವುಳ್ಳ ಆಧುನಿಕರಿಗೆ ಈಸ್ಕಿಲಸ್ ಮಾಡಿದ ಮಾರ್ಪಾಟುಗಳು ಅಲ್ಪವಾಗಿ ಕಾಣಬಹುದು. ಆದರೆ ಅವನ ಕಾಲಕ್ಕೆ ಅವೆಲ್ಲಾ ಸಾಹಸದ ಬದಲಾವಣೆಗಳು. ಅವುಗಳಿಂದ ನಾಟಕದ ಬೆಳೆವಳಿಗೆಯ ಮೇಲೂ ಅದರ ವ್ಯಾಪ್ತಿಯ ಮೇಲೂ ಎಷ್ಟೊಂದು ಪರಿಣಾಮವಾಯಿತೆಂದು ವರ್ಣಿಸಹೋದರೆ ಅದೇ ದೊಡ್ಡ ಕಥೆಯಾದೀತು. ಈಗ ನಮಗೆ ಅಲ್ಪವೆಂದು ಕಾಣಬಹುದಾದ ಸಾಧನೆಗಳಿಂದ, ಕೇವಲ ಶೈಶವಾವಸ್ಥೆಯಲ್ಲಿದ್ದ ರಂಗಸ್ಥಳದ ಮೇಲೆ ಪ್ರದರ್ಶಿತವಾದ ಆ ನಾಟಕಗಳು ಇಂದಿಗೂ ಸಾಹಿತ್ಯರತ್ನಗಳೆಂದು ಗಣಿಸಲ್ಪಟ್ಟಿವೆ. ನಾಟಕದ ಮೇಲೆ ರಂಗಸ್ಥಳದ ಪರಿಣಾಮ ಬೇಕಾದಷ್ಟಿದೆಯೆನ್ನುವುದು ಸುಳ್ಳಲ್ಲ. ಆದರೆ ಬಾಹ್ಯಪರಿಕರಣಗಳೂ ರಂಗಸ್ಥಳದ ಸೌಲಭ್ಯಗಳೂ ಹೆಚ್ಚಿದಂತೆ ನಾಟಕದ ಔನ್ನತ್ಯವೂ ಹೆಚ್ಚುತ್ತದೆಂದು ಭಾವಿಸುವುದು ತಪ್ಪು. ಈಸ್ಕಿಲಸ್ಸನ ಮತ್ತು ಷೇಕ್ಸ್‌ಪಿಯರನ ನಾಟಕಗಳು ಅತಿ ಸರಳರೀತಿಯ ರಂಗಸ್ಥಳಕ್ಕಾಗಿ ಬರೆದವು.

ನಾಟಕದ ತಂತ್ರಕ್ಕೆ ಮತ್ತು ಬೆಳೆವಳಿಗೆಗೆ ಸಂಬಂಧಪಟ್ಟಂತೆ ಈಸ್ಕಿಲಸ್ ಮಾಡಿದ ಸುಧಾರಣೆಗಳಿಗೆ ರುದ್ರನಾಟಕದ ಇತಿಹಾಸದ ದೃಷ್ಟಿಯಿಂದ ಮನ್ನಣೆ ದೊರೆಯಬೇಕು. ಪುರಾತನ ಗ್ರೀಕರು ಇದನ್ನು ಮರೆಯಲಿಲ್ಲ. ಆದರೆ ಜೊತೆಗೆ ಅವರು ಆತನ ಗಂಭೀರವಾದ ಶೈಲಿಯನ್ನೂ ಕವಿತಾ ಸಾಮರ್ಥ್ಯವನ್ನೂ ಮನಗಂಡಿದ್ದರು. ಅವನು ಪದಗಳಿಂದ ಭವ್ಯವಾದ ಗೋಪುರಗಳನ್ನು ಕಟ್ಟಿದನೆಂದೂ, ತನ್ನ ನಾಟಕಗಳಲ್ಲಿ ಸುವ್ಯವಸ್ಥಿತವಾದ ವಿಶ್ವವನ್ನು ರಚಿಸಿದನೆಂದೂ ಅರಿಸ್ಟೋಫೆನೀಸ್ ಆತನನ್ನು ಹೊಗಳಿದ್ದಾನೆ. ಈ ಕೊನೆಯ ಮಾತು ಗಮನಿಸಬೇಕಾದ್ದು. ಮಾನವ ಜೀವನ, ಮಾನವನಿಗೂ ದೈವಕ್ಕೂ ಇರುವ

ಸಂಬಂಧ, ಸ್ವರೂಪ, ವಿಧಿವಿಲಾಸದ ಮರ್ಮ, ವಿಶ್ವದ ವ್ಯವಸ್ಥೆ—ಇವುಗಳನ್ನು ದಿವ್ಯಚಕ್ಷುಸ್ಸಿನಿಂದ ನೋಡಿ ಅದ್ಭುತ ಗಾಂಭೀರ್ಯವುಳ್ಳ ವಾಣಿಯಿಂದ ನಿರೂಪಿಸುವುದು ಸಾಧಾರಣದ ಕೆಲಸವಲ್ಲ; ಅದಕ್ಕೆ ದೈವದತ್ತವಾದ ಪ್ರತಿಭೆ ಬೇಕು. ದೀರ್ಘವಾದ ತಪಸ್ಸು ಬೇಕು. ಈಸ್ಕಿಲಸ್ಸನ ಸ್ಫೂರ್ತಿ ಉಕ್ಕುವುದು ಈ ಬಗೆಯ ತಪಸ್ಸಿನಿಂದ, ಕೇವಲ ಇಂದ್ರಿಯಗಳ ಮೂಲಕ ಸೌಂದರ್ಯಗ್ರಹಣ ಮಾಡುವುದರಿಂದಲ್ಲ. ಅವನ ನಾಟಕಗಳು ಸಾಹಿತ್ಯಕ್ಕೆ ಸಹಜವಾದ ರೀತಿಯಲ್ಲಿ ನಮ್ಮ ವಿಚಾರಶಕ್ತಿಯನ್ನೂ ಧರ್ಮಶ್ರದ್ಧೆಯನ್ನೂ ಕೆರಳಿಸುತ್ತವೆ.

ಗ್ರೀಕ್ ನಾಟಕಕಾರರು ಬಹುಮಟ್ಟಿಗೆ ತಮ್ಮ ದೇಶದ ಮಹಾಕಾವ್ಯಗಳಲ್ಲಿಯೂ ಮತಪುರಾಣಗಳಲ್ಲಿಯೂ ಬರುವ ಅದ್ಭುತ ಪ್ರಸಂಗಗಳನ್ನೇ ನಾಟಕಗಳ ವಸ್ತುವಾಗಿ ಆರಿಸಿಕೊಂಡರು. ಆದರೆ ಕಣ್ಣೆದುರಿನ ಇತಿಹಾಸವನ್ನೇ ಕುರಿತ ನಾಟಕಗಳು ಇರಲೇ ಇಲ್ಲವೆಂದು ಭಾವಿಸಲಾಗದು. ಫ್ರಿನಿಕಸ್ ಎಂಬ ನಾಟಕಕಾರ ಈಸ್ಕಿಲಸ್ಸಿಗಿಂತ ಮೊದಲೇ 'ಪಾರಸಿಕರು' ಎಂಬ ನಾಟಕವನ್ನು ಬರೆದು ಪ್ರದರ್ಶಿಸಿದ್ದನು. ಅದಾದ ನಂತರ ವರ್ಷ ವರ್ಷವೂ ಗ್ರೀಕರ ವಿಜಯದ ನೆನಪಿಗಾಗಿ ಈ ಬಗೆಯ ಪ್ರದರ್ಶನಗಳು ನಡೆಯುತ್ತಿದ್ದಿರಬಹುದೆಂದು ಒಂದು ಊಹೆಯಿದೆ. ಈಸ್ಕಿಲಸ್ಸನ ನಾಟಕವನ್ನು ಪ್ರದರ್ಶಿಸಿದ್ದು ೪೭೨ ರಲ್ಲಿ. ಆ ವೇಳೆಗೆ ಗ್ರೀಕರು ಪಾರಸಿಕರನ್ನು ಹೊಡೆದೋಡಿಸಿ ಆರೇಳು ವರ್ಷಗಳಾಗಿದ್ದವು. ವಿಪತ್ತಿನ ಕಡಲನ್ನು ದಾಟಿ ಸುರಕ್ಷಿತವಾಗಿ ದಂಡೆಯ ಮೇಲೆ ನಿಂತು ಹಿಂದಿನ ಘಟನೆಗಳನ್ನು ಸ್ಮರಿಸಿಕೊಂಡಾಗ ಗ್ರೀಕರಿಗೆ ತಮ್ಮ ಸಾಹಸವೆಲ್ಲಾ ಕನಸಿನ ಕಥೆಯಂತೆ ಕಂಡಿರಬೇಕು. ಸಣ್ಣದೊಂದು ಪಟ್ಟಣದವರಾದ ತಾವು ಏಷ್ಯದ ಮಹಾಸಾಮ್ರಾಜ್ಯವನ್ನು ನಿಜವಾಗಿ ಸದೆಬಡಿದೆವೆ ಎಂಬ ಭ್ರಾಂತಿ ಬಂದು ಆ ಅದ್ಭುತವಾದ ವಿಜಯ ಅತಿಮಾನುಷವಾದದ್ದು, ದೈವದ ಅನುಗ್ರಹ, ಎಂದು ತೋರಿರಬೇಕು. ಕಾಲದ ಚಕ್ರ ಉರುಳಿ ಆ ವಿಜಯಕ್ಕೆ ಅಂಥ ಮೆರುಗುಕೊಟ್ಟಿತ್ತು. ಆದ್ದರಿಂದ ಚರಿತ್ರೆ ಸಾಹಿತ್ಯದ ವಸ್ತುವಾಗಬೇಕಾದರೆ ಅದರಲ್ಲಿ ಆಗಬೇಕಾದ ಮಾರ್ಪಾಟು ಸ್ವಲ್ಪಮಟ್ಟಿಗೆ ನಡೆದಿತ್ತೆಂದು ಹೇಳಬಹುದು. 'ಪಾರಸಿಕರು' ಐತಿಹಾಸಿಕ ನಾಟಕವೂ ಹೌದು, ಸಾಹಿತ್ಯವೂ ಹೌದು.

ಪಾರಸಿಕರ ಸೋಲು ಗ್ರೀಕರ ಮನಸ್ಸಿಗೆ ಹಿತವಾದ, ಮತ್ತು ಅವರ ಆಸಕ್ತಿಯನ್ನು ಕೆರಳಿಸುವಂಥ ವಿಷಯ; ಅಲ್ಲದೆ ಈಸ್ಕಿಲಸ್ ಸ್ವತಃ ಸಾಲಮಿಸ್ ಕದನದಲ್ಲಿ ಹೋರಾಡಿದ್ದವನು. ಆದ್ದರಿಂದ ಅವನು ಆ ವಿಷಯವನ್ನು ಆರಿಸಿಕೊಂಡಿದ್ದೇನೂ ಆಶ್ಚರ್ಯವಲ್ಲ. ಆದರೆ ಪೌರಾಣಿಕ ವ್ಯಕ್ತಿಗಳ ವಿಷಯ ಬರೆಯುತ್ತಿದ್ದಾಗ ಅವನ ಶಕ್ತಿ ಯಾವ ಮಟ್ಟಕ್ಕೆ ಏರಿತೋ ಅದೇ ಮಟ್ಟಕ್ಕೆ ಇಲ್ಲಿ ಏರಲಾರದೆ ಹೋಯಿತು. ಸಾಧಾರಣವಾಗಿ ಕಾವ್ಯವಸ್ತು ತೀರ ಹತ್ತಿರದ ಅನುಭವ ವಾದರೆ ಕವಿಯ ಪ್ರತಿಭೆ ವಾಸ್ತವಜೀವನದ ಬಂಧನಕ್ಕೆ ಸಿಕ್ಕಿ, ಸುಲಭವಾಗಿ ಗರಿಗೆದರಿ ಗಗನಕ್ಕೇರದಿರುವ ಸಂಭವವುಂಟು. ಈಸ್ಕಿ ಲಸ್ ಅತಿಮಾನುಷವಾದ ಆವರಣದಲ್ಲಿರಬೇಕಾದವನು. ಅವನ ಪ್ರತಿಭೆ ಪರ್ವತಪಂಕ್ತಿಯ ಮೇಲೆ ಶಿಖರದಿಂದ ಶಿಖರಕ್ಕೆ ಹೆಜ್ಜೆ ಯಿಟ್ಟು ಲೀಲಾಜಾಲವಾಗಿ ಸಾಗುವಂಥಾದ್ದು. ಪಾರವಿಲ್ಲದ ಕಡಲು, ಗಗನವನ್ನು ಭೇದಿಸುವ ಗಿರಿ ಶಿಖರಗಳು, ಗರುಡನನ್ನು ಸಹ ನಡುಗಿ ಸುವ ಪ್ರಪಾತಗಳು, ಪ್ರಕೃತಿಯ ದಿವ್ಯಶಕ್ತಿಗಳು, ಒಲಿಂಪಿಯದ ದೇವತೆಗಳು, ವಿಶ್ವಕ್ಕೆ ಒಡೆಯನಾದ ಸ್ಯೂಸನನ್ನು ಸಹ ಸರಿಗಟ್ಟಿ ನಿಂತ ಟೈಟನ್ ಪ್ರೊಮಿಥಿಯಸ್, ಪಾಪದ ಪ್ರಾಯಶ್ಚಿತ್ತವೇ ಮೂರ್ತಿ ಮತ್ತಾಗಿ ಬಂದ ಘೋರರೂಪಿಗಳಾದ ಸೇಡುಮಾರಿಯರು-ಇಂಥ ಆವ ರಣದಲ್ಲಿಯೆ ಈಸ್ಕಿಲಸ್ಸನ ಪ್ರತಿಭೆಗೆ ಸ್ವತಂತ್ರ ಸಂಚಾರ. ಆದ್ದರಿಂದ ಯಾವುದೋ ಒಂದು ಸಂದರ್ಭಕ್ಕಾಗಿ ಆರಿಸಿಕೊಂಡ ಈ ಐತಿಹಾಸಿಕ ವಸ್ತು ಅವನ ಕೈಯನ್ನು ತಡೆಯಿತೆಂದರೂ ಎನ್ನಬಹುದು. ಅಲ್ಲದೆ ಈ ನಾಟಕವನ್ನು ಬರೆದಾಗ ಈಸ್ಕಿಲಸ್ಸನ ಕೈ ಸಾಕಾದಷ್ಟು ಕುದುರಿರ ಲಿಲ್ಲ, ಕಲೆ ಪೂರ್ಣವಾಗಿ ಹವಕ್ಕೆ ಬಂದಿರಲಿಲ್ಲ.

ನಾಟಕದ ಕ್ರಿಯೆ ನಡೆಯುವುದು ಅಥೆನ್ಸಿನಲ್ಲಲ್ಲ. ವಿಷಯ ರುದ್ರ ನಾಟಕವಾಗುವುದು ಪರ್ಸದವರ ದೃಷ್ಟಿಯಿಂದಲೇ ತಾನೆ! ಅಷ್ಟೇ ಅಲ್ಲದೆ ಅದು ರುದ್ರವಾಗಿರುವುದು ಕ್ಷಯಾರ್ಷನಿಗೂ ಅವನ ಸೈನಿಕರಿಗೂ ಮಾತ್ರವಲ್ಲ, ಇಡೀ ಚಕ್ರಾಧಿಪತ್ಯಕ್ಕೆ. ಆದ್ದರಿಂದ ನಾಟಕದ ಕ್ರಿಯೆ ಚಕ್ರಾಧಿಪತ್ಯದ ರಾಜಧಾನಿಯಾದ ಸೂಸದಲ್ಲಿ ನಡೆಯುತ್ತದೆ—ಫ್ರಿನಿ

ಕಸ್ಸನ 'ಪಾರಸಿಕರು' ನಾಟಕದಲ್ಲೂ ಇದೇ ರೀತಿಯ ಸ್ಥಾನನಿರ್ದೇಶ ವಿತ್ತು. ದೂರದ ನಗರವನ್ನು ಸ್ಥಾನವಾಗಿ ಮಾಡಿಕೊಂಡದ್ದರಿಂದ ಕವಿಗೆ ಇತರ ಪ್ರಯೋಜನಗಳೂ ಲಭಿಸಿದವು. ಚಾರಿತ್ರಿಕ ವಿಷಯ ವನ್ನು ಆರಿಸಿಕೊಂಡದ್ದರಿಂದ ಉಂಟಾದ ಅನನುಕೂಲಗಳನ್ನು ಸ್ವಲ್ಪ ಮಟ್ಟಿಗೆ ನಿವಾರಿಸಿಕೊಂಡು ಕಾಲವಲ್ಲಿ ಹತ್ತಿರವಾದ ವಿಷಯವನ್ನು 'ದೇಶ'ದಲ್ಲಾದರೂ ದೂರಮಾಡಿಕೊಂಡಂತಾಯಿತು. ವಾಸ್ತವಿಕತೆಯ ಕಟ್ಟು ಇದರಿಂದ ಪೂರ್ತಿ ತಪ್ಪದಿದ್ದರೂ ಸ್ವಲ್ಪ ಸಡಿಲವಾದರೂ ಆಯಿತು. ಅಲ್ಲದೆ ಏಷ್ಯಾ ಚಕ್ರಾಧಿಪತ್ಯದ ರಾಜಧಾನಿಗೆ ಸಹಜವಾದ ವೈಭವದ ದೃಶ್ಯಗಳನ್ನು ಒದಗಿಸಿದರೆ ನಾಟಕದ ಕಳೆ ಹೆಚ್ಚಬಹುದೆಂದು ಈಸ್ಕಿಲಸ್ ಬಲ್ಲ; ಅಂಥ ದೃಶ್ಯಗಳ ವಿಷಯದಲ್ಲಿ ಆತನಿಗೆ ಅಸಡ್ಡೆ ಯಿಲ್ಲ. ಈ ನಾಟಕ ಪ್ರದರ್ಶನದ ಖರ್ಚನ್ನು ಪೆರಿಕ್ಲೀಸನೇ ಒದಗಿಸುವ ಏರ್ಪಾಟಿದ್ದುದರಿಂದ ಈ ವೈಭವದ ದೃಶ್ಯಗಳನ್ನು ರಚಿಸುವುದೂ ಕಷ್ಟವಾಗಿರಲಾರದು. ಇಷ್ಟೇ ಅಲ್ಲದೆ ಕ್ಷಯಾರ್ಷನ ಸೋಲನ್ನು ಈ ವೈಭವದ ಹಿನ್ನೆಲೆಯಲ್ಲಿಟ್ಟರೆ ಅದರ ಅರ್ಥವೂ ವ್ಯಾಪ್ತಿಯೂ ಮತ್ತಷ್ಟು ಸ್ಪಷ್ಟ ವಾಗಬಹುದು. ಆದರೆ ಈಸ್ಕಿಲಸ್ಸನ ದೃಷ್ಟಿಯಲ್ಲಿ ಇವೆಲ್ಲ ಪ್ರಯೋಜನ ಗಳಿಗಿಂತಲೂ ಹೆಚ್ಚಿನದೆಂದರೆ ಆ ಸನ್ನಿವೇಶದಿಂದ ಹೊರಪಡುವ ಧಾರ್ಮಿಕ ತತ್ತ್ವ.

ಪಾರಸಿಕ ಸೈನ್ಯವು "ಬೀಸಿ ಬರ್ಪ ಕಡಲ ಪೊನಲ್ ನೆಲವನುಂಗಿ ಕೊಳುವುದೆನಲ್" ಗ್ರೀಕರ ಮೇಲೆ ದಾಳಿಯಿಟ್ಟು ಕೆಲಕಾಲವಾಗಿದೆ. ಪರ್ಸದ ಹಿರಿಯ ಮಂತ್ರಿಗಳು—ಈ ನಾಟಕದಲ್ಲಿ ಇವರೇ ಮೇಳದವರು —ನಿಂತು ದಂಡಯಾತ್ರೆಯ ವಿಷಯವನ್ನೇ ಯೋಚಿಸುತ್ತಿದ್ದಾರೆ. ಅವರ ಮನಸ್ಸಿಗೆ ನೆಮ್ಮದಿಯಿಲ್ಲ. ಪಾರಸಿಕ ವೀರರೇನೋ ನೆಚ್ಚಿನ ವೀರರು. ಪರ್ಸದೆದೆ ವಜ್ರದೆದೆ. ಆದರೂ ದೈವವೇನಾದರೂ ವಂಚಿಸಿದರೆ ಅವರ ಶಕ್ತಿಯಿಂದೇನಾದೀತು! ಮೇಳದವರ ಮನಸ್ಸಿನಲ್ಲಿ ಈ ಅಳುಕು; ತಮ್ಮ ಪಡೆ ಮರಳಿ ಬಾರದೇನೋ ಎಂಬ ಭಯದ ಇರಿತ. ಅವರು ಹೀಗೆ ನಿಂತಿರುವಾಗ ಚಕ್ರವರ್ತಿಯ ತಾಯಿ ಹುತೌಶ ಅಲ್ಲಿಗೆ ಬರುತ್ತಾಳೆ. ಅವಳ ಮನಸ್ಸಿಗೂ ನೆಮ್ಮದಿಯಿಲ್ಲ. ಹಿಂದಿನ ರಾತ್ರಿ

ಅವಳೊಂದು ಕೆಟ್ಟ ಕನಸು ಕಂಡಿದ್ದಾಳೆ. ಒಂದೇ ಕುಲದಲ್ಲಿ ಹುಟ್ಟಿ ಬೆಳೆದ ಹೆಣ್ಣುಮಕ್ಕಳಿಬ್ಬರು ಹೊಳೆಹೊಳೆಯುವ ತೊಡಿಗೆಗಳನ್ನು ತೊಟ್ಟು ಅವಳೆದುರಿನಲ್ಲಿ ಕಾಣಿಸಿಕೊಂಡರು. ಇಬ್ಬರೂ 'ಕಣ್ಮಲೆವ ಚೆಲುವೆಯರು'. ಹೆಲಸಿನಲ್ಲಿ ಬಾಳುವವಳೊಬ್ಬಳು, ಮತ್ತೊಬ್ಬಳು ಏಷ್ಯದವಳು. ಅವರೊಳಗೆ ಕಲಹ ಮೊದಲಾಗಲು ಕ್ಷಯಾರ್ಷನು ಅವರಿಬ್ಬರನ್ನೂ ಎಳೆತಂದು ರಥಕ್ಕೆ ಹೂಡಿ, ನೊಗವಿಟ್ಟು, ರಥವನ್ನೇರಿದನು. ಆಗ ಏಷ್ಯದವಳೇನೋ ಹಿಗ್ಗಿ ಕುಣಿದಾಡಿದಳು. ಆದರೆ ಹೆಲಸಿನವಳು ಜಗ್ಗಿ ಒದೆದಾಡಿ, ಕಡಿವಾಣವನ್ನು ಕಡಿದು ಮೂಕಿಯನ್ನು ಮುರಿದು ಕ್ಷಯಾರ್ಷನನ್ನು ನೆಲಕ್ಕೆ ಉರುಳಿಸಿದಳು. ಈ ಕನಸು ಹರಿದು ಬೆಳಗಾದ ಮೇಲೆ ಹುತಾಶ ಕೈತೊಳೆದು ದೇವರಿಗೆ ಮಧುಪರ್ಕಧೂಪಗಳನ್ನಿಡುತ್ತಿರುವಾಗ, ಗರುಡನೊಂದು ಮಿಥ್ರದೇವನ ವೇದಿಯಲ್ಲಿ ಬಿತ್ತು. ಕಿರುಗಿಡುಗವೊಂದು ಬೆನ್ನಟ್ಟಿ ಬಂದು ಗರುಡನನ್ನು ಕುಕ್ಕಿ ನಡುಗಿಸಿತು. ರಾತ್ರಿಯ ಕನಸೂ ಬೆಳಗಿನ ಉತ್ಪಾತವೂ ಹುತಾಶಳನ್ನು ಅಂಜಿಸಿವೆ. ತನ್ನ ಮಗನ ಪಾಡೇನಾಗಿದೆಯೋ, ಚಕ್ರಿಯೆನಿಸಿ ಮೆರೆದ ತನ್ನ ಪತಿಯಾದ ದರ್‍ಯವುಷನ ಸಿರಿಯನ್ನು ಈ ದುಡುಕು ಹೆಮ್ಮೆಯ ಕ್ಷಯಾರ್ಷ ಎಲ್ಲಿ ಮಣ್ಣುಪಾಲುಮಾಡುವನೋ ಎಂಬ ಶಂಕೆಯಿಂದ ಹೃದಯ ಭಾರವಾಗಿದೆ. ಆದರೂ . . . "ಸಾಸಿರ ಸತ್ರಪರ ಮೊರೆ" ಶ್ರೀಕ್ಷಯಾರ್ಷನಿಗೆ ಈ ಬಡ ಅಥೆನ್ಸಿನವರಿಂದ ಸೋಲಾಗುವುದೆಂದರೇನು! ಯಾರು ಈ ಅಥೆನ್ಸಿನವರು? ಸ್ವಲ್ಪ ತಿರಸ್ಕಾರದಿಂದಲೇ ಮೇಳದವರನ್ನು ಕೇಳುತ್ತಾಳೆ: "ಆ ಹಿಂಡಿಗೆ ಕುರುಬನಾರು? ಒಡೆಯ? ಆಳ್ವ ಪೆರ್ದೊರೆ?" ಮೇಳದವರ ಉತ್ತರ—ಕವಿಯ ಸ್ವಾತಂತ್ರ್ಯಪ್ರೇಮದಿಂದ ಉಕ್ಕಿದ ಮಾತು: "ದೊರೆಗೆ ಆಳ್ಗಳಲ್ಲ ಅವರು; ತಮ್ಮ ತಾವೆ ಆಳ್ವರು." "ಹುತಾಶಳಿಗೆ ಇದು ಅರ್ಥವಾಗದ ಮಾತು. ಮತ್ತೆ ಕೇಳುತ್ತಾಳೆ: "ಒಡೆಯರಾಳ್ವ ಪಡೆಯನವರದೆಂತು ತಡೆಯಲಾಪರು?" "ದರ್‍ಯವುಷನೆ ಬಲ್ಲನದನು."—ಹಿಂದೆ ಮಾರಥಾನ್ ಯುದ್ಧದಲ್ಲೇ ದರ್‍ಯವುಷನು ಅಥೆನ್ಸಿನವರು ಇಟ್ಟ ಕಹಿಯೂಟವನ್ನು ಉಂಡಿದ್ದನು.

ಈ ಸಂಭಾಷಣೆ ನಡೆಯುತ್ತಿರುವಾಗ ರಣಕ್ಷೇತ್ರದಿಂದ ಚಿಂದಿ

ಬಟ್ಟೆಗಳನ್ನು ಧರಿಸಿ ಬಳಲಿ ಬಂದ ದೂತನು ಕ್ಷಯಾರ್ಷನ ಸೋಲಿನ ವರ್ತಮಾನವನ್ನು ತರುತ್ತಾನೆ. "ಕುಣಿಕುಣಿಯುತ ಪೋದ" ಪಾರಸಿಕರ ಪಡೆ ನುಚ್ಚು ನೂರಾಯಿತು. ಸಂಖ್ಯೆಯಲ್ಲೇನೋ ಪಾರಸಿಕರ ಬಲವೇ ಹೆಚ್ಚು. ಆದರೆ "ದೈವಂ ಕೆಡಿಸಿಮದು ಸರಿಯಾಗಿ ತೂಗದೆಯೆ ತೊಲೆಯಾನ್. ಪಲ್ಲಸ್ ಅಥೀನೆ ಕಾಪಾಡಿದಳ್ ತನ್ನ ಪೊಳಲನ್." ಶ್ರೀಕ್ಷಯಾರ್ಷನು ಗ್ರೀಕರ ಹೂಟವನ್ನೂ ದೈವದ ಹಂಚಿಕೆಯನ್ನೂ ಅರಿಯದೆ ಹೆಮ್ಮೆಯಿಂದ ಕೈಬೀಸಿದನು. ಅವನ ತಿಳಿಗೇಡಿತನ ಬೇಗಲೇ ವ್ಯಕ್ತವಾಯಿತು. ಯಾರನ್ನು ಹೇಡಿಗಳೆಂದು ಎಣಿಕೆಗೇ ತೆಗೆದುಕೊಂಡಿರಲಿಲ್ಲವೋ ಆ ಗ್ರೀಕರ ವೀರವಾಣಿಯ ಘೋಷದಿಂದ ಆಕಾಶವೆಲ್ಲಾ ಮೊಳಗಿತು. ಅವರ ಹೊಡೆತವನ್ನು ತಾಳಲಾರದೆ ಪಾರಸಿಕರ ಹಡಗುಗಳು ಪುಡಿಪುಡಿಯಾದವು. ಹಲಗೆ ಮುರುಕುಗಳಿಂದ, ತೇಲು ಹೆಣಗಳ ಒಡ್ಡಿನಿಂದ, ಕಡಲು ಮರೆಯಾಯಿತು. "ಪರ್ಸದ ಪೊಸ ಅರಳು, ಪೂವು" ಸುಟ್ಟು ಕರಿಕಾಯಿತು. ಸೊಕ್ಕಿದ ಪಾರಸಿಕರು ದೈವವನ್ನು ಕೆಣಕಿದ್ದಾರೆ: "ದೇವಾಧಿದೇವಾ, ಮಹಾದೇವ, ನೀನ್ ಮುರಿದೆ ಪಾರಸಿಕರುಕ್ಕನ್ . . . ಮುಸಿದೀಗ ನೀನ್ ಮುರಿದೆ ಸೊಕ್ಕನ್."

ಕಂಗೆಟ್ಟ ಪಾರಸಿಕರು ತಮ್ಮ ಹಿಂದಿನ ದೊರೆ ದರ್ಯವುಷನ ಆತ್ಮಕ್ಕೆ ತನಿಯೆರೆದು ಈ ವಿಷಮಪರಿಸ್ಥಿತಿಯಲ್ಲಿ ಅವನ ಸಲಹೆ ಬೇಡುತ್ತಾರೆ. ದರ್ಯವುಷ ಸಮಾಧಿಯಿಂದೆದ್ದು ಕ್ಷಯಾರ್ಷನ ಹುಚ್ಚುತನವನ್ನು ಸ್ಪಷ್ಟಗೊಳಿಸುವುದಲ್ಲದೆ ಪಾರಸಿಕರ ವಿಪತ್ತು ಸಾಲಮಿಸ್‌ನಲ್ಲಾದ ಸೋಲಿನಲ್ಲೇ ಕೊನೆಗಾಣವುದಿಲ್ಲವೆಂದು ಸಹ ಎಚ್ಚರಿಕೆ ಕೊಡುತ್ತಾನೆ.

ಅನಂತರ, ಸೋತು ನಿಸ್ತೇಜನಾಗಿ ಬರುವ ಕ್ಷಯಾರ್ಷನ ಪ್ರವೇಶ. ಮೇಳದವರು ಆತನೊಡನೆ ಸ್ವಲ್ಪ ಕಠಿನವಾಗಿಯೇ ವರ್ತಿಸುತ್ತಾರೆ. ಅವರ ಮನಸ್ಸಿನಲ್ಲಿ ಸಹಾನುಭೂತಿಯಿರಬಹುದು. ಆದರೆ ದೇಶದ ನಷ್ಟದಿಂದಲೂ ಪಾರಸಿಕ ವೀರರ ಮರಣದಿಂದಲೂ ಉದ್ಭವಿಸಿದ [illegible] ಆ ಸಹಾನುಭೂತಿಯನ್ನು ಹಿಂದುಮಾಡುತ್ತದೆ.

ಅಯೊ, ಅಯೊ, ಏನ್ ಕೇಳ್ವಯ್ !
ಕೂರಲಗಿಂದಂ ಕೊರಳನ್ ಕೊರೆವಯ್ !

ಎಂದು ಅಂಗಲಾಚಿಕೊಂಡರೂ ಬಿಡದೆ ಅವರು ಮತ್ತೆ ಮತ್ತೆ ಪರ್ಸದ ವೀರರ ಹೆಸರನ್ನೆತ್ತಿ ಮೊನೆಯುಳ್ಳ ಪ್ರಶ್ನೆಗಳಿಂದ ಕ್ಷಯಾರ್ಷನನ್ನು ಇರಿಯುತ್ತಾರೆ. ಅವನಿಗೆ ಸಾಂತ್ವವಚನಗಳನ್ನು ಹೇಳಿ ಭವಿಷ್ಯದ ವಿಷಯದಲ್ಲಿ ಭರವಸೆಯೇನನ್ನೂ ಕೊಡಲಾರರು.

ಮತ್ತೆ ಸೂಸ ಮೆರೆವುದೆ ಪೇಳ್ ?

ನಮ್ಮ ಪರ್ಸ ಬೆಳೆವುದೆ ಪೇಳ್ ?

ಎಂಬ ಪ್ರಶ್ನೆಗಳಿಗೆ " ಮೆರೆವುದು, ಬೆಳೆವುದು " ಎಂದು ಉತ್ತರಕೊಡುವ ಧೈರ್ಯವಿಲ್ಲದೆ, " ಮೆರೆಯಲಿ, ಬೆಳೆಯಲಿ " ಎಂಬ ಆಶೆಯನ್ನು ಮಾತ್ರ ವ್ಯಕ್ತಪಡಿಸುತ್ತಾರೆ.

ಘಳಿಗೆ ಘಳಿಗೆಗೂ ಹೊಸ ಘಟನೆಗಳನ್ನು ತಂದೊಡ್ಡಿ, ಪಕ್ಷ ಪ್ರತಿ ಪಕ್ಷಗಳ ಹೋರಾಟವು ಬೆಳೆದು ವಿಷಮಘಟ್ಟವನ್ನು ಮುಟ್ಟುವಂತೆ ಮಾಡಿ, ಅನಂತರ ನಾಯಕನ ಸೋಲಿನಲ್ಲಿ ಕೊನೆಗಾಣುವಂತೆ ನಾಟಕದ ಕ್ರಿಯೆಯನ್ನು ಹೆಣೆಯುವುದು ಸಾಧಾರಣವಾಗಿ ರುದ್ರನಾಟಕಗಳ ತಂತ್ರ. ಆ ಬಗೆಯ ಕ್ರಿಯಾರಚನೆಗೆ ಇಲ್ಲಿ ಅವಕಾಶವಿಲ್ಲ. ಗ್ರೀಕರ ಮತ್ತು ಪಾರಸಿಕರ ಯುದ್ಧವೇ ನಾಟಕದ ಮುಖ್ಯವಸ್ತುವಾಗಿದ್ದರೆ, ಪಾರಸಿಕರ ಸೋಲನ್ನು ನಿರೂಪಿಸುವುದರಿಂದ ಗ್ರೀಕರ ವಿಜಯವನ್ನು ಮೆರಸುವುದೇ ಈಸ್ಕಿಲಸ್ಸನ ಉದ್ದೇಶವಾಗಿದ್ದರೆ, ಮೇಲೆ ಹೇಳಿದ ತಂತ್ರವನ್ನೇ ಉಪಯೋಗಿಸಬಹುದಾಗಿತ್ತು. ಈಸ್ಕಿಲಸ್ಸಿಗೆ ಆ ತಂತ್ರದ ಮೇಲೆ ವ್ಯಾಮೋಹವಿಲ್ಲ ; ಅವನ ಉದ್ದೇಶಕ್ಕೆ ಅದು ತಕ್ಕದ್ದೂ ಅಲ್ಲ. ಅವನ ಅತ್ಯುತ್ತಮ ನಾಟಕವಾದ " ಆಗಮೆಮ್ನನ್ "ದಲ್ಲಿಯೂ ಅವನು ಈ ಬಗೆಯ ರಚನೆಗೆ ಕೈ ಹಾಕಿಲ್ಲ. ಈ ಸಂದರ್ಭದಲ್ಲಂತೂ ನಾಟಕವು ಹೋರಾಟದ ಫಲವಾಗಿಯಾಗಲಿ ಘಟನೆಗಳ ಸಂಯೋಜನೆಯಿಂದಾಗಲಿ ದುರಂತದ ಕಡೆಗೆ ಸಾಗುವುದಿಲ್ಲ. ನಡೆಯಬೇಕಾದ ದುರಂತ ಮೊದಲೇ ನಡೆದುಹೋಗಿದೆ; ನಾಟಕ ಪ್ರಾರಂಭವಾಗುವ ವೇಳೆಗೆ ಯುದ್ಧ ಮುಗಿದು ಪರ್ಸಕ್ಕೆ ಸೋಲಾಗಿ ಹೋಗಿದೆ. ಇಲ್ಲಿ ಕಾಣುವುದು ಸೋಲಿನ ನಿರೂಪಣೆ ಮಾತ್ರ. ಇಲ್ಲಿಯ ತಂತ್ರ ಅತಿ ಸರಳವಾದದ್ದು. ಬಾಹ್ಯವಾಗಿ ನಡೆಯುವ ಕ್ರಿಯೆ ಅತ್ಯಲ್ಪ. ಮೊದಲು ಮೇಳದವರ ಮನಸ್ಸಿ

ನಲ್ಲಿರುವ ಶಂಕೆ, ಆ ಶಂಕೆಗೆ ಪುಷ್ಟಿಕೊಡುವಂತೆ ಹುತಾಶಗಳಿಗೆ ಬಿದ್ದ ಕನಸು, ಬೆಳಗಿನ ಉತ್ಪಾತ, ಜೊತೆಗೆ ಪಾರಸಿಕರ ಹೆಮ್ಮೆ, ಅನಂತರ ಶಂಕೆ ನಿಷ್ಕಾರಣವಲ್ಲವೆಂದು ಸ್ಪಷ್ಟಪಡಿಸಲು ಬರುವ ದೂತ, (ಅವನು ಹೇಳುವ ವಿಷಾದದ ಕಥೆಯೂ ಘಟ್ಟದಿಂದ ಘಟ್ಟಕ್ಕೆ ಪರಿಣಾಮಕಾರಿಯಾಗುತ್ತ ಹೋಗುತ್ತದೆ) ಸತ್ತ ವೀರರ ಹೆಸರುಗಳು, ಯುದ್ಧದ ವರ್ಣನೆ, ಪಾರಸಿಕರ ಭಯಂಕರ ಕೊಲೆ, ಸೈನ್ಯ ಮರಳಿ ಬರುವಾಗ ಸಂಭವಿಸಿದ ವಿಪತ್ತುಗಳು—ಎಲ್ಲವೂ ಒಂದಾದ ಮೇಲೊಂದು ಬೆನ್ನು ಹತ್ತಿದ ವಿಧಿಯ ಪೆಟ್ಟುಗಳಂತೆ ರಾಣಿಯ ಮತ್ತು ಮಂತ್ರಿಗಳ ಮೇಲೆ ಬಂದೆರಗುತ್ತವೆ. ದರ್ಯವುಷನ ಪ್ರೇತ ಅದೃಶ್ಯವಾದ ಮೇಲೆ ಕ್ಷಯಾರ್ಷನ ಪ್ರವೇಶ. ಅವನ ನಿರ್ವೀರ್ಯ ಸ್ಥಿತಿಯೇ ಪರ್ಸಕ್ಕೆ ಕೊನೆಯ ಪೆಟ್ಟು.

ಈ ಬಗೆಯ ಕ್ರಿಯಾರಚನೆ ಆಧುನಿಕ ನಾಟಕಕಾರರಿಗೆ ಒಪ್ಪಿಗೆಯಾಗಲಾರದು. ಆದರೆ ಅದು ನಾಟಕಕ್ಕೆ ಹೊಂದುವುದೇ ಇಲ್ಲವೆಂದು ಹೇಳುವುದು ಕಷ್ಟ. ಎಲ್ಲರ ಮೆಚ್ಚಿಕೆಯನ್ನೂ ಪಡೆದಿರುವ "ಅಗಮೆಮ್ನನ್" ನಾಟಕದಲ್ಲಿಯೂ ಈಸ್ಕಿಲಸ್ ಸ್ವಲ್ಪಮಟ್ಟಿಗೆ ಈ ಬಗೆಯ ರಚನೆಯನ್ನೇ ಅನುಸರಿಸಿದ್ದಾನೆ. ಆದರೆ ಆ ನಾಟಕವನ್ನು ಬರೆಯುವ ವೇಳೆಗೆ ಕವಿ ಅದ್ಭುತವಾದ ಕೈಚಳಕವನ್ನು ಪಡೆದಿದ್ದನು. ಅವನ ಕಲೆ ಪರಿಪಕ್ವವಾಗಿತ್ತು; ಅನುಭವ ಆಳವಾಗಿತ್ತು, ವಿಶಾಲವಾಗಿತ್ತು; ಅವನ ತತ್ವಜ್ಞಾನ ಅಗಾಧವಾದ ತಪಸ್ಸಿನ ತಳಹದಿಯ ಮೇಲೆ ದೃಢವಾಗಿ ನಿಂತಿತ್ತು. ಆ ನಾಟಕಕ್ಕೂ ಇದಕ್ಕೂ ಬೇಕಾದಷ್ಟು ಅಂತರವಿದೆ. ಇವೆರಡನ್ನೂ ಹೋಲಿಸಿ "ಪಾರಸಿಕರ"ನ್ನು ಅಲ್ಲಗಳೆಯುವುದು ಅಲ್ಪತರದ ವಿಮರ್ಶೆ. ಆದರೆ ಹಾಗೆ ಹೋಲಿಸಿ ನೋಡಿದರೆ ಸರಳವಾದ ರಚನೆಯಿಂದ ಈಸ್ಕಿಲಸ್ ಎಷ್ಟು ಅದ್ಭುತವಾದ ಪರಿಣಾಮವುಂಟುಮಾಡಬಲ್ಲನೆಂದು ನಾವು ತಿಳಿಯುಬಹುದು.

ಮೊದಮೊದಲು ಬಹುಮಟ್ಟಿಗೆ ಶ್ರವಣೇಂದ್ರಿಯಕ್ಕೇ ಹೆಚ್ಚು ಆನಂದವನ್ನು ಕೊಡುವ ಈ ನಾಟಕ ಮತ್ತಷ್ಟು ರಂಜಕವಾಗುವಂತೆ ಪ್ರೇಕ್ಷಕರ ಗಮನವನ್ನು ಸೆಳೆದು ಹಿಡಿಯುವ ದೃಶ್ಯವೊಂದನ್ನು ಈಸ್ಕಿಲಸ್ ತಂದು ಒಡ್ಡಿದ್ದಾನೆ—ಇದೇ ದರ್ಯವುಷ್ ಸಮಾಧಿಯಿಂದೆದ್ದು

ಬರುವ ಪ್ರಕರಣ. ಭಯಂಕರವಾದ ವಿಪತ್ತು ಒದಗಿರುವ ಸನ್ನಿವೇಶ, ಗೋರಿಯ ಸುತ್ತಲೂ ನೆರೆದಿರುವ ರಾಷ್ಟ್ರದ ಹಿರಿಯರು, ಪತಿಯ ಆತ್ಮಕ್ಕೆ ತನಿಯೆರೆದು ಆತನನ್ನು ಮತ್ತೆ ಮರ್ತ್ಯಪ್ರಪಂಚಕ್ಕೆ ಆಹ್ವಾನಿಸಿ ಸಲಹೆ ಬೇಡುತ್ತಿರುವ ಚಕ್ರವರ್ತಿನಿ ಹುತೌಶ—ಇವಿಷ್ಟೇ ಆ ದೃಶ್ಯಕ್ಕೆ ಪ್ರಾಮುಖ್ಯ ಕೊಡಬಲ್ಲವು. ಈ ಪ್ರಕರಣ ರಂಗಸ್ಥಳದ ಮೇಲೆ ಆಕರ್ಷ ಕವಾದ ಮತ್ತು ಪರಿಣಾಮಕಾರಿಯಾದ ದೃಶ್ಯವಾಗುತ್ತದೆಯೆಂಬು ದೇನೋ ಸತ್ಯ; ಇಂಥ ಪರಿಣಾಮ ಈಸ್ಕಿಲಸ್ಸಿಗೆ ಪ್ರಿಯವಾದದ್ದೂ ಹೌದು. ಆದರೆ ಅದರ ಪ್ರಯೋಜನ ಅಷ್ಟರಲ್ಲೇ ಪರ್ಯವಸಾನ ವಾಗುವುದಿಲ್ಲ. ಕವಿಯ ಮೂಲೋದ್ದೇಶಕ್ಕೆ ಈ ಪುನರುತ್ಥಾನ ಅವಶ್ಯಕ ವಾದದ್ದು. ಆಗ ಅಲ್ಲಿ ನೆರೆದಿರುವವರಲ್ಲಿ ಯಾರೂ ಪರ್ಸಕ್ಕೆ ಒದಗಿದ ದುರಂತದ ಅರ್ಥವನ್ನು ತಿಳಿಯಲು ಶಕ್ತರಲ್ಲ. ಈ ಕೆಲಸ ಮೇಳದವರಿಗೆ ಸಾಧ್ಯವಾಗಬೇಕಾಗಿತ್ತು; ಆದರೆ ಇಲ್ಲಿಯ ಮೇಳ ಅಂಥದಲ್ಲ. ಅವರು ರಾಷ್ಟ್ರದ ಅವನತಿಯನ್ನು ಕಂಡು ಶೋಕಾವಿಷ್ಟರಾಗಿದ್ದಾರೆ; ಹುತೌಶಳ ಮನಸ್ಸಿನಲ್ಲಿ ಈ ಶೋಕದ ಜೊತೆಗೆ ತನ್ನ ಮಗನ ವಿಷಯವಾದ ಚಿಂತೆ—ತಾಯಿಗೆ ಸಹಜವಾದ ಚಿಂತೆ—ಸೇರಿಕೊಂಡಿದೆ; ದೂತನಾ ದರೋ, ರಣರಂಗದಲ್ಲಿ ಪಾರಸಿಕರ ರಕ್ತ ಕೋಡಿ ಹರಿದದ್ದನ್ನು ಸ್ವತಃ ನೋಡಿದವನು; ತಾನೂ ಗ್ರೀಕರಿಂದ ಪೆಟ್ಟು ತಿಂದವನು. ಇವರಲ್ಲಿ ಯಾರೂ ಶೋಕಕ್ರೋಧಗಳನ್ನು ಮೆಟ್ಟಿ ನಿಂತು ಆತ್ಮಪರೀಕ್ಷೆಗೆ ಮನಸ್ಸುಕೊಟ್ಟು "ಈ ಸೋಲಿನ ಅರ್ಥವೇನು? ನಮ್ಮ ವಿಷಯ ದಲ್ಲಿ ದೈವ ಮುನಿದದ್ದೇಕೆ?" ಎಂದು ನಿಷ್ಪಕ್ಷಪಾತವಾದ ಪ್ರಶ್ನೆ ಹಾಕಿಕೊಳ್ಳಲು ಸಮರ್ಥರಲ್ಲ. ನಡೆದಿರುವ ಅನಾಹುತದಲ್ಲಿ ಅವರ ವಿಚಾರಶಕ್ತಿ ಮುಳುಗಿಹೋಗಿದೆ—ಸಂಭವಿಸಿದ ವಿಪತ್ತು ಅವರಿಗೆ ತೀರ ಹತ್ತಿರದ ಅನುಭವ. ಆದರೆ ದರ್ಯವುಷನ ಮಾತು ಬೇರೆ. ಚರಿತ್ರೆಯ ದರ್ಯವುಷ ಎಂಥವನೆಂಬ ಮಾತು ಈಗ ಪ್ರಕೃತವಲ್ಲ. ಅವನನ್ನೂ ಈಸ್ಕಿಲಸ್ ಔನ್ನತ್ಯಕ್ಕೇರಿಸಿದ್ದಾನೆ. ಆದರೆ ಈಗ ಸಮಾಧಿಯಿಂದೇಳುವ ದರ್ಯವುಷ ಮರಣದ ಬಾಗಿಲನ್ನು ದಾಟಿ ಭೌತದೇಹಕ್ಕೆ ಅನಿವಾರ್ಯವಾದ ಕಟ್ಟುಗಳನ್ನು ನೀಗಿಕೊಂಡವನು; ಪತ್ನೀಪುತ್ರರಲ್ಲಿ ವಿಶ್ವಾಸವಿದ್ದರೂ

ಅದನ್ನು ಒತ್ತಟ್ಟಿಗಿಟ್ಟು ನಡೆದ ವಿಷಯಗಳನ್ನು ನಿಷ್ಪಕ್ಷಪಾತದೃಷ್ಟಿಯಿಂದ, ಬೇರೊಂದು ಲೋಕದಲ್ಲಿ ಪಡೆದ ವಿಶೇಷಜ್ಞಾನದಿಂದ, ಧರ್ಮದೃಷ್ಟಿಯಿಂದ, ಪರಿಶೀಲಿಸಬಲ್ಲವನು. ಈಸ್ಕಿಲಸ್ಸನ ಉದ್ದೇಶ ಸಾಧನೆಯಾಗಬೇಕಾದರೆ ಇಂಥ ವ್ಯಕ್ತಿಯೊಬ್ಬನನ್ನು ರಂಗಸ್ಥಳಕ್ಕೆ ತರದೆ ವಿಧಿಯಿಲ್ಲ.]

ಈಸ್ಕಿಲಸ್ ಯುದ್ಧದ ಕಥೆಯನ್ನು ತೆಗೆದುಕೊಂಡು ಅದನ್ನು ಉದಾತ್ತವಾದ ಧಾರ್ಮಿಕತತ್ತ್ವದ ಬೋಧನೆಗಾಗಿ ಅಳವಡಿಸಿಕೊಂಡಿದ್ದಾನೆ. ಕ್ರಿಯೆಗೆ ಹೊಸದೊಂದು ಬೆಳಕುಕೊಟ್ಟು, ಅದರ ಬೆಳವಣಿಗೆ ಹೀಗೇ ಆಗಬೇಕೆಂದು ನಿರ್ಧರಿಸಿ, ಅದರ ಎಲ್ಲ ಸೂತ್ರಗಳನ್ನೂ ಬಿಗಿಹಿಡಿದು ಆಳುವುದೆಂದರೆ ಈ ತತ್ತ್ವ. ದೊಡ್ಡದೊಂದು ಚಕ್ರಾಧಿಪತ್ಯ ಉರುಳಿ ಬಿದ್ದುದನ್ನು ಮಾತ್ರ ರೂಪಿಸಿದ್ದರೆ ಆ ಚಿತ್ರ ಕರುಣಾಜನಕವಾಗಬಹುದಾಗಿತ್ತು; ಆದರೆ ರುದ್ರನಾಟಕವಾಗುತ್ತಿರಲಿಲ್ಲ. 'ಹ್ಯೂಬ್ರಿಸ್'ನ ಕ್ರಿಯೆ ,ಅದಕ್ಕೆ ಆಗಲೇಬೇಕಾದ ಪ್ರಾಯಶ್ಚಿತ್ತ—ಇವು ನಾಟಕದ ಮುಖ್ಯ ವಸ್ತು; ಎರಡು ರಾಷ್ಟ್ರಗಳ ಹೋರಾಟವಲ್ಲ. ನಾಟಕದ ಮೊದಲಲ್ಲೇ ಪರ್ಸ್ಸದವರ ಹೆಮ್ಮೆಯ ಮತ್ತು ಮೇರೆ ಮೀರಿದ ಸಾಮ್ರಾಜ್ಯದಾಹದ ಸೂಚನೆಯಿದೆ. ದೈವವು ಪರ್ಸ್ಸದವರಿಗೆ ಏಷ್ಯದ ಆಧಿಪತ್ಯವನ್ನು ಕೊಟ್ಟಿತು. ಅಷ್ಟಕ್ಕೆ ತೃಪ್ತರಾಗದೆ ಅವರು ಯೂರೋಪಿನ ಮೇಲೆ ದಾಳಿಯಿಟ್ಟರು. ಆದ್ದರಿಂದ ದೈವ ಗ್ರೀಕರ ಪರವಾಗಿ ನಿಂತಿತೆನ್ನುವುದಕ್ಕಿಂತ ಪಾರಸಿಕರ ಅಧರ್ಮಕ್ಕೆದುರಾಗಿ ನಿಂತಿತೆನ್ನಬೇಕು. ಕ್ಷಯಾರ್ಷಪೂರ್ವದೇಶದ ಚಕ್ರವರ್ತಿಯೆನ್ನುವುದಕ್ಕಿಂತ, ಪಾಪಕ್ಕೆ ಎಡೆಗೊಟ್ಟು ಅದರ ಫಲವನ್ನು ಅನುಭವಿಸುವವನು ಎಂದರೆ ಸತ್ಯವಾದ ಮಾತಾಗುತ್ತದೆ. ಹುತೌಶ ಹೇಳುತ್ತಾಳೆ: "ಸಿರಿಯೊ ನಮಗೆ ತುಂಬಿರುವುದು" ಎಂದು. ಆ ಸಿರಿಯೇ ಹ್ಯೂಬ್ರಿಸ್ಸಿಗೆ ಮೂಲ. ಕೇವಲ ನಮ್ಮ ಅಭ್ಯುದಯವನ್ನು ಸಹಿಸಲಾರದೆ ದೈವ ನಮ್ಮನ್ನು ಮುರಿಯುತ್ತದೆಂಬ ವಾದ ಗ್ರೀಕರಿಗೆ ಪರಿಚಿತವಾದದ್ದು. ಆದರೆ ಈಸ್ಕಿಲಸ್ ಇದನ್ನು ಒಪ್ಪುವವನಲ್ಲ. ಈ ವಾದವನ್ನು ಸಮರ್ಥಿಸುವಂಥ ವಾಕ್ಯಗಳೇನೋ ನಾಟಕದಲ್ಲಿ ಕಂಡುಬರುತ್ತವೆ. ದೂತನಿಗೆ ದೈವವು "ಆವುದೋ ಮತ್ಸರದ

ದೇವತೆ." ಹುತೌಶಳಿಗೆ ಅದು ಪಾರಸಿಕರ ಬುದ್ಧಿಯನ್ನು ಮುನಿದು ಕೆಡಿಸಿದ "ದುಷ್ಟ ದೈವ". ಮೇಳದವರೂ ಅದನ್ನು "ಓ ಕ್ರೂರಿ, ಮತ್ಸರದ ದೈವವೇ! ಓ ರಾಕ್ಷಸರ ಚಂಡಶಕ್ತಿ" ಎಂದು ಹಳಿದು ಸಂಬೋಧಿಸುತ್ತಾರೆ. ಆದರೆ ಇವೆಲ್ಲಾ ಸರ್ವನಾಶವನ್ನು ಅನುಭವಿಸಿದವರ ಮನಸ್ಸಿನಲ್ಲಿ ಸಹಜವಾಗಿ ಉಂಟಾಗುವ ಉದ್ವೇಗದ ಮಾತುಗಳು; ಭಯಂಕರವಾದ ಸಂಕಟದಿಂದ ದೃಷ್ಟಿ ಮಸಕಾಗಿ ಸತ್ಯವನ್ನು ನೋಡಲಾರದವರ ಉದ್ಗಾರ. ಈ ಮಾತುಗಳಿಗೆ ವಿರುದ್ಧವಾಗಿ ಅವರ ಬಾಯಿಂದಲೇ ಒಂದೊಂದುವೇಳೆ ಹೊರಬೀಳುವ ಇತರ ವಾಕ್ಯಗಳನ್ನೂ ನಾವು ಗಮನಿಸಬೇಕು. ಹುತೌಶ, "ಹೆಬ್ಬಲದ ಹಮ್ಮಿನಲಿ ಕೈಬೀಸಿದನೊ ನಮ್ಮ ಮಗನು?" ಎಂದು ಕೇಳುತ್ತಾಳೆ. ಆ ಹೆಬ್ಬಲದ ಹಮ್ಮು—ಕ್ಷಯಾರ್ಷನ ಹ್ಯೂಬ್ರಿಸ್— ಅವನನ್ನು ತುಳಿಯಿತು. ಗ್ರೀಕ್ ನಾಟಕದಲ್ಲಿ ಆಗಿಂದಾಗ ಮೇಳದವರು ನಡೆದ ಘಟನೆಗಳ ವಿಷಯವಾಗಿ ಗಾಢವಾದ ಚಿಂತನೆಮಾಡುತ್ತಾ, ಸದ್ಯಸ್ಥಿತಿಯಮೇಲೆ ಗಮನವಿದ್ದರೂ ಅದರಿಂದ ಭವ್ಯವಾದ ಗಾನಸಾಮ್ರಾಜ್ಯಕ್ಕೆ ಹಾರಿ, ಅಲ್ಲಿಂದ ಮರ್ತ್ಯಪ್ರಪಂಚದ ವ್ಯಾಪಾರವನ್ನು ದಿವ್ಯದೃಷ್ಟಿಯಿಂದ ನೋಡುವುದುಂಟು. ಇಂಥದೊಂದು ಘಳಿಗೆಯಲ್ಲಿ ನಮ್ಮ ಮೇಳದವರೂ ಸತ್ಯವನ್ನು ಕಾಣುತ್ತಾರೆ:

ದೇವಾಧಿದೇವಾ, ಮಹಾದೇವ, ನೀನ್ ಮುರಿದೆ ಪಾರಸಿಕರುಕ್ಕನ್,
ಮೊದಲೆತ್ತಿ ಸಾಮ್ರಾಜ್ಯಸುಖವಿತ್ತು, ಮುನಿದೀಗ ನೀನ್ ಮುರಿದೆ ಸೊಕ್ಕನ್.

ಇವರೆಲ್ಲರ ಮಾತುಗಳಿಗಿಂತಲೂ ಹೆಚ್ಚಾಗಿ ನಾವು ದರ್‍ಯವುಷನ ಅಭಿಪ್ರಾಯವನ್ನು ಗಮನಿಸಬೇಕು. ಮೊದಲೇ ಹೇಳಿದಂತೆ, ಪಾರಸಿಕನಾದರೂ ಮರ್ತ್ಯಪ್ರಪಂಚದ ಹೋರಾಟದಿಂದ ದೂರವಾಗಿ ನಿಂತು ಅದನ್ನು ಪೂರ್ತಿ ಕಳೆದ ದೃಷ್ಟಿಯಿಂದ ನೋಡಬಲ್ಲವನು ಅವನೊಬ್ಬನೇ. ದೈವವು ನಿಷ್ಕಾರಣವಾದ ಕ್ರೌರ್ಯದಿಂದ, ಅಥವಾ ಮಾನವನ ಸುಖವನ್ನು ಸಹಿಸಲಾರದ ಕರುಬಿನಿಂದ ಅವನನ್ನು ಪಾತಾಳಕ್ಕೆ ತುಳಿಯುತ್ತದೆಂಬ ವಾದವನ್ನು ದರ್‍ಯವುಷ್ ಒಪ್ಪುವುದಿಲ್ಲ. ದೈವ ತಾನಾಗಿ ನಮ್ಮ ಬುದ್ಧಿಯನ್ನು ಕೆಡಿಸುವುದಿಲ್ಲ.

ಕೇಡಿಗೋಡಲೆಳಸಲೊಬ್ಬ, ದೈವವನ ತಳ್ಳುದು.

ಕ್ಷಯಾರ್ಷ ಕೇಡಿಗೋಡಲೆಳಸಿದ್ದಾನೆ. ಯೌವನದ ಮದದಿಂದ ಸೊಕ್ಕಿದ್ದಾನೆ. ಸಾಗರವೂ ತನ್ನ ಅಧೀನವೆಂದು ತೋರಿಸಲು ನೀರಿಗೆ ಸಂಕಲೆಗಳನ್ನು ಬಿಡಿಸಿ ಪೊಸೈಡನ್ * ದೇವನನ್ನೇ ದಾಸ್ಯಕ್ಕೆಳೆಯುವ ಯತ್ನಮಾಡಿದವನಲ್ಲವೆ, ಈ ಕ್ಷಯಾರ್ಷ !

ಅರಿಯದ ಮಗ, ಸಾಹಸಕ್ಕೆ, ಯೌವನ ಮದ ಸೊಕ್ಕಿಸೆ,
ಕಯ್ಮನಿಟ್ಟು, ದಿವ್ಯ ಹೆಲೆಸ್ಪಾಂಟನೊತ್ತಿ ಕಟ್ಟುವೆ,
ದಾಸನಂತೆ ತೊಡರ್ಗಳಿಂದ, ಬಾಸ್ಪೊರಸಿನ ಶಕ್ತಿಯನ್
ತೆರೆಯ ತಡೆದು ಕುಗ್ಗಿಸುವೆ, ಪಿರಿಯ ಪಡೆಗೆ ತೆರಪುಮಾಡಿ
ಸೃಷ್ಟಿ ಸಹಜ ಭೂತಬಲವ ಮೆಟ್ಟಿ ನಾನು ಮೀರಿಸುವೆ,
ಎಂದು ಪೂಣ್ದು; ಸಾವ ಮರ್ತ್ಯನಾ ಅಮರ್ತ್ಯರೆಲ್ಲರೊಡನೆ,
ಆ ಪೊಸೈಡನೊಡನೆ, ಹುಚ್ಚ, ಸೆಣಸಿ ತಾನೆ ಕೆಟ್ಟನು.

ಹೆಲೆಸ್ಪಾಂಟನ್ನು ದಾಟಿ ಗ್ರೀಸಿಗೆ ಕಾಲಿಟ್ಟಮೇಲೂ ಪಾರಸಿಕರೇನು ಧರ್ಮಯುದ್ಧವನ್ನು ನಡಸಿದರೆ! ಆ ನಿರ್ದೈವಿಗಳ ಮದಕ್ಕೆ ಇನ್ನೂ ಹೆಚ್ಚಿನ ಶಿಕ್ಷೆ ಕಾದಿದೆ :

ಹೆಲಸಿಂಗೆ ಹೋದವರು ಭಯಮ ಮರೆತು ಕೊಬ್ಬಿನಲಿ
ದೇವಾಲಯಂಗಳ್ಗೆ ಕಿಚ್ಚಿಕ್ಕಿ ಸೂರೆಗೆಯ್ದರ್.
ಭಕ್ತಿಯೆಂಬುದ ಕಾಣದೆ—ಬಲಿಪೀಠಗಳನೊಡೆದು,
ಪ್ರತಿಮೆಗಳ ಕಿತ್ತೆಸೆದು, ಪೂಜೆ ಸಾಮಗ್ರಿಗಳ
ನಿಟ್ಟಾಡಿ ಹೊಲೆಗೆಯ್ದರೆಲ್ಲಮನ್. ಮಾಡಿದೀ
ಪಾಪಂಗಳುಣ್ಣದೇ ಪೋಕುಮೇ? ಉಣುತಿರ್ಪರ್,
ಇನ್ನುಮುಣುವರ್, ಕಟ್ಟಿದಾ ಬುತ್ತಿ ಸಮೆಯುಡೆಯೆ.

ಆದ್ದರಿಂದ ಮಾನವನಿಗೆ ಹೆಮ್ಮೆ ಸಲ್ಲದು :

ಅಳ್ಗಲ್ಲ, ಮರ್ತ್ಯಂಗೆ ಹೆಮ್ಮೆ ಬಗೆ........
ಆ ಸೊಕ್ಕು ಹೂವಾಗಿ, ಕೊರಗಿನಲಿ ತೆನೆಯಾಗಿ,

---

* ಸಮುದ್ರದ ಅಧಿದೇವತೆ.

ಅವ ಹಂಬಲುಮಳಿದ ಬೆಳೆಯಾಗಿ, ಕೊಯ್ಯುವುದು
ಪಾಪಫಲವನು, ತಿಳಿ: ನೆನೆ ಅಥೆನ್ಸನ್, ಹೆಲಸನ್.
ಅವೊಸುಂ ಹೆಬ್ಬಯಕೆಗಲವತ್ತು, ಮಿತಿಮೀರಿ,
ಕಯ್ಗೆ ಬಾರದ ಗುರಿಗೆ ಕಟ್ಟೊಲ್ಮೆಯನ್ ತೆತ್ತು,
ಕಳೆಯಬಾರದು ದೇವರಿತ್ತೊಂದು ಭಾಗ್ಯವನ್.
ಗಗನಕ್ಕೆ ನೆಗೆದಡರುವರ ಹಮ್ಮುಗಳ ಮೆಟ್ಟಿ
ತಕ್ಕ ಕಾಲಕೆ ಕೊಬ್ಬನಿಳಿಸದಿರನಾ ಸ್ಯೂಸ್.

ದರ್‍ಯವುಷನ ಈ ಮಾತುಗಳು ಮೇಳದವರ ಕಣ್ಣುಗಳನ್ನು ತೆರೆಯುತ್ತವೆ. ಈ ಮಾತುಗಳನ್ನು ನೆನೆದೇ ಅವರು ನಾಟಕದ ಕೊನೆಯಲ್ಲಿ ಹೇಳುತ್ತಾರೆ:

ಕ್ಷಯಾರ್ಷ— ಐಶ್ವದ ಸಾಮ್ರಾಜ್ಯಕಾರು?
ಮೇಳ — ದೇವರೇ.
ಕ್ಷಯಾರ್ಷ— ಸಾಮ್ರಾಜ್ಯವ ಕಾವರಾರು?
ಮೇಳ — ಧರ್ಮವೇ:
ದೈವ ಕಾವ ಧರ್ಮವೇ.

ಈಸ್ಕಿಲಸ್ಸನ ಅತ್ಯುತ್ತಮ ಕೃತಿಯಾದ 'ಆಗಮೆಮ್ನನ್' ನಾಟಕದಲ್ಲಿಯೂ ಈ ಬಗೆಯ ತತ್ತ್ವವನ್ನು ಕಾಣುತ್ತೇವೆ. ಈ ಧರ್ಮಶ್ರದ್ಧೆ ಈಸ್ಕಿಲಸ್ಸಿಗೆ ಹಿಂದಿನ ನಾಟಕಕಾರರಿಂದಾಗಲಿ ಗ್ರೀಕರ ಮಹಾಕಾವ್ಯಗಳಿಂದಾಗಲಿ ಬಂದದ್ದೆಂದು ಹೇಳಲಾಗುವುದಿಲ್ಲ. ಆ ಕಾವ್ಯಗಳಲ್ಲಿ ಬಹುಮಟ್ಟಿಗೆ ದೊಡ್ಡತನವೆಂದರೆ ಶೌರ್ಯ. ಇಲ್ಲಿ ಕಾಣುವ ಧರ್ಮದೃಷ್ಟಿ ಈಸ್ಕಿಲಸ್ಸನ ಸ್ವಂತ ತಪಸ್ಸಿನ ಫಲ. ಅವನ ನಾಟಕಗಳಲ್ಲಿರುವ ಅಲೌಕಿಕ ಗಾಂಭೀರ್ಯ ಇದರಿಂದಲೇ ಬಂದದ್ದು. 'ಪಾರಸಿಕರು' ಉತ್ಕೃಷ್ಟ ರುದ್ರನಾಟಕವೆನ್ನುವುದಕ್ಕೂ ಇದೇ ಕಾರಣ. ಈ ಧರ್ಮವನ್ನು ಈಸ್ಕಿಲಸ್ ಬೋಧಕನಂತೆ ವಿಸ್ತಾರಮಾಡುವುದಿಲ್ಲ. ಕಲೆಗಾರನಿಗೆ ಸಹಜವಾದ ರೀತಿಯಲ್ಲಿ, ಮಾನವನ ವರ್ತನೆಯನ್ನು ಚಿತ್ರಿಸುವಾಗ ಅದರಿಂದ ಧರ್ಮ ಹೊರಪಡುವಂತೆ ಮಾಡುತ್ತಾನೆ.

ನಾಟಕವು ದೃಶ್ಯಕಾವ್ಯ. ಆದರೆ ಬಹುಮಟ್ಟಿಗೆ ಈ ನಾಟಕ ಕಥನ

ಕಾವ್ಯವಾಗಲಿಲ್ಲವೆ ಎಂಬ ಪ್ರಶ್ನೆ ಬಹುಶಃ ಅನೇಕರ ಮನಸ್ಸಿನಲ್ಲಿ ಮೂಡುತ್ತದೆ. ಈ ಸಂದೇಹಕ್ಕೆ ಕಾರಣವಿಲ್ಲವೆಂದು ಹೇಳಲಾಗುವುದಿಲ್ಲ. ನಾಟಕದಲ್ಲಿ ಕ್ರಿಯೆ ಸಾಲದು. ಆದರೆ ಅದನ್ನು ವಿಮರ್ಶಿಸುವಾಗ ನಾವು ಕೆಲವಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಮೊದಲೇ ಹೇಳಿರುವಂತೆ, ದರ್‍ಯವುಷನ ಪುನರುತ್ಥಾನ ಪ್ರಕರಣ ಈ ಕುಂದನ್ನು ಸ್ವಲ್ಪಮಟ್ಟಿಗೆ ಸರಿಪಡಿಸುತ್ತದೆ. ಅಲ್ಲದೆ ಈ ನಾಟಕ ಪುರಾತನ ಗ್ರೀಸಿನ ಪ್ರೇಕ್ಷಕರಿಗಾಗಿ ಬರೆದದ್ದು, ಸಾಲಮಿಸ್ ಕದನ ಇನ್ನೂ ಜನರ ನೆನಪಿನಲ್ಲಿ ಹೊಸದಾಗಿದ್ದಾಗಲೇ ಪ್ರದರ್ಶಿಸಿದ್ದು. ಅದರಲ್ಲಿ ಯುದ್ಧದ ವರ್ಣನೆ ವಿವರವಾಗಿಯೇ ಬರುತ್ತದೆ. ಅದರ ಕವಿತಾ ಶಕ್ತಿಯೇನೋ ಈಗಲೂ ನಮ್ಮನ್ನು ಸೆಳೆಯುತ್ತದೆ. ಆದರೆ ಆ ಯುದ್ಧದ ವಿಷಯದಲ್ಲಿ ಆಗಿನ ಪ್ರೇಕ್ಷಕರಿಗಿದ್ದಷ್ಟು ಕುತೂಹಲವೂ ಉತ್ಸಾಹವೂ ನಮಗಿರುವುದು ಸಾಧ್ಯವಿಲ್ಲ. ನಾವು ಪುರಾತನ ಗ್ರೀಕರ ಮನಸನ್ನು ಹೊಕ್ಕು, ಅವರಂತೆ ನಾಟಕವನ್ನು ನೋಡುವ ಪ್ರಯತ್ನ ಮಾಡಬೇಕು. ಅವರ ಪಾಲಿಗೆ ಕದನದ ವರ್ಣನೆ ಕವನ ಮಾತ್ರವಲ್ಲ. ಸಾಲಮಿಸ್ ಪ್ರಸಂಗದ ಪುನಸ್ಸೃಷ್ಟಿ. ಈಸ್ಕಿಲಸ್ಸನ ಕೃತಿಯಲ್ಲಿ ನಮಗೆ ಸಾಲದೆಂದು ತೋರುವ 'ನಾಟಕ' ಗ್ರೀಕರ ಮನಸ್ಸಿನಲ್ಲೇ ನಡೆಯುತ್ತಿದ್ದಿರಬೇಕು. ಕನ್ನಡನಾಡಿನ ಓದುಗರು ಇದನ್ನು ಓದುವಾಗ ಸ್ವಲ್ಪ ಜಡರಾಗಿ ಕುಳಿತು ಕೇಳಬಹುದು. ಆದರೆ ಗ್ರೀಕರ ರಕ್ತ ಆಗ ಅತಿ ವೇಗದಿಂದ ಓಡುತ್ತಿದ್ದಿರಬೇಕು.

ಆದರೆ ಗ್ರೀಕರ ಗೆಲವಿನ ಅಟ್ಟಹಾಸವನ್ನು ಈಸ್ಕಿಲಸ್ ಬಲವಾಗಿ ತಡೆದಿಟ್ಟಿದ್ದಾನೆ. ಕವಿ ತನ್ನ ಮಾಯಾದಂಡವನ್ನು ಬೀಸಿದ ಮೇಲೆ ಈ ಕಥೆ ಕೇವಲ ಎರಡು ಜನಾಂಗಗಳ ಕಲಹವಾಗಿ ಉಳಿಯಲಿಲ್ಲವೆಂದು ಈ ವೇಳೆಗೆ ಸ್ಪಷ್ಟವಾಗಿರಬೇಕು. ಅವನು ಇಲ್ಲಿ ಹಾಡಿರುವುದು ಸೊಕ್ಕಿದ ಮಾನವನ ಚರಮಗೀತೆ. ಎಲ್ಲಕ್ಕಿಂತಲೂ ಮೊದಲು ಈಸ್ಕಿಲಸ್ ದೈವಭಕ್ತ, ಧರ್ಮಾಭಿಮಾನಿ. ಚಕ್ರೇಶ್ವರನಾದರೂ ಅರೆ ಘಳಿಗೆ ಬದುಕಿ ಮಾಯವಾಗುವ ಹುಲುಮನುಜ ತನ್ನ ಶಕ್ತಿಗೆ ಹೆಮ್ಮೆಪಟ್ಟು ದೈವವನ್ನು ಕೆಣಕಿದರೆ ಮುರಿದುಬೀಳುವನೆಂಬುದನ್ನು ಚೆನ್ನಾಗಿ

ಮನಗಂಡವನು. ಆದರಿಂದಲೇ ಅವನು ಈ ನಾಟಕದಲ್ಲಿ ಗ್ರೀಕರ ಶೌರ್ಯಪ್ರತಾಪಗಳನ್ನು ಮೆರಸಲಿಲ್ಲ. ಒಬ್ಬನೇ ಒಬ್ಬ ಗ್ರೀಕ್ ವೀರನ ಹೆಸರನ್ನು ಸಹ ಅವನು ಹೇಳಿಲ್ಲ—ಹಾಗೆ ಹೇಳುವುದು ಲೌಕಿಕವೂ ಅಲ್ಲ; ಯಾರ ಹೆಸರು ಹೇಳಬೇಕು, ಯಾರದ್ದನ್ನು ಬಿಡಬೇಕು, ಎಂಬ ಸಮಸ್ಯೆ ಏಳುತ್ತಿತ್ತು. ಆದರೂ ಕವಿಯ ದೇಶಾಭಿಮಾನಕ್ಕೇನೋ ಇಲ್ಲಿ ಸ್ವಲ್ಪ ಸ್ಥಾನವಿದೆ. ಅಥೆನ್ಸಿನಂಥ ಮಾತೃಭೂಮಿಯ ಕೀರ್ತಿಯಿಂದ ಕವಿಯ ಹೃದಯ ಅರಳದಿರುವುದುಂಟೆ! ದೇಶದ ಸ್ವಾತಂತ್ರ್ಯಕ್ಕಾಗಿ, ದೇವಾಲಯಗಳ ಮತ್ತು ಗೋರಿಗಳ ಪವಿತ್ರತೆಗಾಗಿ, ಹೆಣ್ಣುಮಕ್ಕಳ ಮಾನಕ್ಕಾಗಿ, ತಾನೂ ಯುದ್ಧರಂಗದಲ್ಲಿ ಕಾದಿದವನಲ್ಲವೆ! ಗ್ರೀಕರ ಸ್ವಾತಂತ್ರ್ಯಪ್ರೇಮ, ಶೌರ್ಯ, ಆತ್ಮಗೌರವ, ಮೊದಲಾದ ಸದ್ಗುಣಗಳಿಂದ ಆತನ ಎದೆಯೂ ಉಬ್ಬಿದೆ. ಅವುಗಳನ್ನು ಪಾರಸಿಕರ ಬಾಯಿಂದಲೇ ಹೊಗಳಿಸಿದ್ದಾನೆ. ಮೇಳದವರ ಒಂದೆರಡು ಮಾತಿನಲ್ಲಿ ಅಥೆನ್ಸಿನ ಹಿರಿಮೆ ಹೊರಪಡುತ್ತದೆ. ಅಥೆನ್ಸಿನಲ್ಲಿ "ಬೆಳ್ಳಿ ಹೊನಲ ಬಸಿರಿನಿಂದ ಭೂಮಿ ತಾನ್ ಸುರಿವಳು." ಅಲ್ಲಿಯ ಜನರು ಪಾರಸಿಕರಂತೆ ಯಾವನೊಬ್ಬ ಚಕ್ರವರ್ತಿಯ ದಾಸರೂ ಅಲ್ಲ. ದರ್‍ಯವುಷನ ಮುಂದೆ ಮಾತಾಡಲೂ ಧೈರ್ಯವಿಲ್ಲದೆ ಕುನ್ನಿಗಳಂತೆ ನಿಲ್ಲುವ ಪಾರಸಿಕರಿಗೂ "ತಮ್ಮ ತಾವೆ ಆಳ್ವ" ಗ್ರೀಕರಿಗೂ ಎಷ್ಟು ತಾರತಮ್ಯ!

ಈ ನಾಟಕ ವಿಜಯದ ವಾರ್ಷಿಕೋತ್ಸವಕ್ಕಾಗಿ ಬರೆದದ್ದೆಂದರೂ ಎನ್ನಬಹುದೇನೋ. ಆದ್ದರಿಂದಲೇ ಅದರಲ್ಲಿ ಕೆಲವು ದೋಷಗಳಿಗೆ ಎಡೆ ಸಿಕ್ಕಿರಬಹುದು. ಆದರೆ ಈಗ ಎರಡು ಜನಾಂಗಗಳಿಗೆ ಯುದ್ಧ ಸಂಭವಿಸಿದಾಗ ಒಬ್ಬರ ವಿಷಯವಾಗಿ ಮತ್ತೊಬ್ಬರು ಮಾಡುವ ಅಪಪ್ರಚಾರವನ್ನೂ ಅವರು ಕೆರಳಿಸುವ ದ್ವೇಷವನ್ನೂ ನೋಡಿದರೆ ಈಸ್ಕಿಲಸ್ ಎಂಥ ಉನ್ನತವಾದ ವಾತಾವರಣದಲ್ಲಿದ್ದಾನೆನ್ನುವುದು ಸ್ಪಷ್ಟವಾಗುತ್ತದೆ; ಈಗಿನವರು ನಾಚಿ ತಲೆತಗ್ಗಿಸಬೇಕಾಗುತ್ತದೆ. ಈಸ್ಕಿಲಸ್ ಸ್ವಾಭಿಮಾನವನ್ನು ಕೆರಳಿಸುವ ವಾಗ್ಮಿಯಲ್ಲ. ಅಥೆನ್ಸಿನವರು ತಮ್ಮ ಹೊಗಳಿಕೆಯನ್ನು ಕೇಳಿದಾಗ ಹಿಗ್ಗಿ ಕೋಲಾಹಲವೆಬ್ಬಿಸಿರಬಹುದು.

ಆದರೆ ಪ್ರೇಕ್ಷಕಾಂಗಣವನ್ನು ಬಿಟ್ಟು ಹೊರಡುವಾಗ ನಮ್ರರಾಗಿ ದೈವ ಶಕ್ತಿಗೆ ತಲೆಬಾಗಿ ನಡೆದಿರಬೇಕು.

ಪಾತ್ರರಚನೆಯಲ್ಲಿ ಈಸ್ಕಿಲಸ್ ಸೂಕ್ಷ್ಮವಾದ ವಿಶ್ಲೇಷಣದ ಕೆಲಸಕ್ಕೆ ಕೈಹಾಕುವವನಲ್ಲ. ಹುತೌಶಳಲ್ಲೂ ಸಮಾಧಿಯಿಂದೇಳುವ ದರ್ಯವುಷನಲ್ಲೂ ಚಕ್ರವರ್ತಿತನಕ್ಕೆ ಸಹಜವಾದ ಗಾಂಭೀರ್ಯವಿದೆ. ಹುತೌಶಳಲ್ಲಿ ಕಾಣುವ ದರ್ಪವೂ ತಿರಸ್ಕಾರವೂ ದರ್ಯವುಷನಲ್ಲಿ ಮರೆಯಾಗಿ ಅದಕ್ಕೆ ಬದಲು ಪರಿಪೂರ್ಣವಾದ ಜ್ಞಾನ ಕಂಡುಬರುತ್ತದೆ. ಕ್ಷಯಾರ್ಷ ನಾಟಕದ ಕೊನೆಯಲ್ಲಿ ರಂಗಸ್ಥಳಕ್ಕೆ ಬರುತ್ತಾನೆ. ಆತ ಶೂರನಾಗಿದ್ದಿರಬಹುದು. ಆದರೆ ಇಲ್ಲಿ ಆ ಶೌರ್ಯದ ಲಕ್ಷಣಗಳೇನೂ ಕಾಣುವುದಿಲ್ಲ. ಅವನಲ್ಲಿ ತನ್ನ ಶಕ್ತಿಯ ಅರಿವೂ ಇಲ್ಲ, ತನ್ನ ಪಾಪದ ಅರಿವೂ ಇಲ್ಲ. "ಪರಿಣಾಮವೇನಾದರೂ ಆಗಲಿ, ನಾನು ಕೈಹಾಕಿದ್ದು ಮಹತ್ವದ ಕೆಲಸಕ್ಕೆ" ಎಂದುಕೊಳ್ಳುವ ಕೆಚ್ಚಿಲ್ಲ. ತನ್ನ ಸೋಲನ್ನೊಪ್ಪಿಕೊಳ್ಳುವಾಗ ಅಳುಕದೆ ನಿಂತು, ವಿಧಿಯ ಪೆಟ್ಟನ್ನು ಸಹಿಸಿಕೊಳ್ಳುವ ಚೈತನ್ಯವಿಲ್ಲ. ಕ್ಷಯಾರ್ಷನನ್ನು ಬೇರಾವ ರೀತಿಯಲ್ಲಾದರೂ ಚಿತ್ರಿಸುವುದು ಕವಿಗೆ ಕಷ್ಟವಾಗಿದ್ದಿರಬಹುದು. ದರ್ಯವುಷನನ್ನೇನೋ ಆತ ಮೇಲ್ಮಟ್ಟಕ್ಕೇರಿಸಿದ್ದಾನೆ. ಆದರೆ ದರ್ಯವುಷ ಹಿಂದಿನ ಕಾಲದವನು; ಸತ್ತು ಸ್ವರ್ಗದಲ್ಲಿದ್ದಾನೆ. ಕಣ್ಣೆದುರಿನವನಾದ ಕ್ಷಯಾರ್ಷನನ್ನು ಚಿತ್ರಿಸುವಾಗ ಹೆಚ್ಚಿನ ಸ್ವಾತಂತ್ರ್ಯವನ್ನು ವಹಿಸುವುದು ಕಷ್ಟ; ಜನಗಳ ಮನಸ್ಸಿನಲ್ಲಿ ನೆಲೆಗೊಂಡಿದ್ದ ಚರಿತ್ರೆಯ ಕ್ಷಯಾರ್ಷನನ್ನು ಪೂರ್ತಿ ಮರೆಯಿಸುವುದು ಸಾಧ್ಯವಿರಲಿಲ್ಲ. ರುದ್ರನಾಟಕದ ನಾಯಕ ಸೋತು ಮರಣಹೊಂದಿದರೂ ಅವನಲ್ಲಿ ಕಂಡುಬರುವ ಉದಾತ್ತತೆ, ಅವನ ಪಾಪವನ್ನು ಸಹ ಮರೆಯಿಸುವ ಏನೋ ಒಂದು ದೊಡ್ಡತನ, ಅವನಲ್ಲಿರಬೇಕು. ಕ್ಷಯಾರ್ಷನಲ್ಲಿ ಅದೇನೂ ಕಾಣುವುದಿಲ್ಲ. ಬಹುಶಃ ಈ ನಾಟಕ ನಮಗೆ ಸಂಪೂರ್ಣವಾಗಿ ರುಚಿಸದಿರುವುದಕ್ಕೆ ಇದೇ ಕಾರಣ. ನಾಟಕಕ್ಕೆ ಐಕ್ಯಕೊಡುವಂಥ ಉದಾತ್ತ ತತ್ತ್ವವಿದ್ದರೂ ಮೊದಲಿಂದ ಕಡೆಯವರೆಗೆ ನಿಂತು ಅದರ ಕ್ರಿಯೆಯನ್ನು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ನಡಸಬಲ್ಲ ವ್ಯಕ್ತಿಯಿಲ್ಲ.

ಕ್ಷಯಾರ್ಷ ಅಂಥ ವ್ಯಕ್ತಿಯಲ್ಲ; ಅಲ್ಲದೆ ಅವನು ರಂಗಸ್ಥಳದ ಮೇಲೆ ಬರುವುದು ನಾಟಕದ ಕೊನೆಯಲ್ಲಿ. ಹಿಂದಿನ ನಾಟಕಕಾರರ ಕೃತಿಗಳಲ್ಲಿ ಈ ಕೆಲಸವನ್ನು ಮೇಳ ನಿರ್ವಹಿಸುತ್ತಿತ್ತು. ಈ ನಾಟಕದ ಪ್ರಾರಂಭದಲ್ಲಿಯೂ ಮೇಳ ಇದನ್ನು ನಿರ್ವಹಿಸಬಹುದೇನೋ ಎನ್ನಿಸುತ್ತದೆ. ಆದರೆ ಬರಬರುತ್ತ ಮೇಳ ಹಿಂದಕ್ಕೆ ಸರಿದು ನಿಲ್ಲುತ್ತದೆ. ದೊರೆಗೆ ಆಳ್ಗಳಾದ ಈ ಹಿರಿಯರು ದರ್ಯವುಷನೊಡನೆ ಮಾತಾಡುವುದಕ್ಕೂ ಹಿಂಜರಿಯುತ್ತಾರೆ. ಈ ಮೇಳದಲ್ಲಿ ಹಿಂದಿನ ನಾಟಕಗಳ ಮೇಳದ ಛಾಯೆಯಿದ್ದರೂ, ಈಸ್ಕಿಲಸ್ ಎರಡನೆಯ ನಟನೊಬ್ಬನನ್ನು ರಂಗಸ್ಥಳಕ್ಕೆ ತಂದಮೇಲೆ ಮೇಳದ ಪ್ರಾಶಸ್ತ್ಯ ಕಡಮೆಯಾಗಲೇಬೇಕಾಯಿತು. ಇಲ್ಲಿ ಹುತೌಶ ಅದನ್ನು ಹಿಂದೆ ಬಿಟ್ಟು ತಾನೇ ಮುಂದಾಗುತ್ತಾಳೆ. ಇದು ಸಹಜವೆಂದೂ ಒಪ್ಪಬೇಕು. ಚಕ್ರವರ್ತಿಯ ತಾಯಿ, ದರ್ಯವುಷನ ಪತ್ನಿ—ಅವಳೆದುರಿಗೆ ಮೇಳದ ಕಳೆ ಕುಂದುವುದೇನೂ ಆಶ್ಚರ್ಯವಲ್ಲ. ಮೇಳವನ್ನೇ ಕೇಂದ್ರ ವ್ಯಕ್ತಿಯನ್ನಾಗಿ ಮಾಡುವ ಹಳೆಯ ನಾಟಕ ತಂತ್ರವನ್ನು ಬಿಟ್ಟು ಈಸ್ಕಿಲಸ್ ಬೇರೊಂದು ತಂತ್ರವನ್ನು ಅನುಸರಿಸುತ್ತಿದ್ದಾನೆ. ಆದರೆ ಈ ಹೊಸ ತಂತ್ರದಲ್ಲಿ ಇನ್ನೂ ಕೈ ನುರಿತಿಲ್ಲ, ಕಲೆ ಸಾಕಾದಷ್ಟು ಹದಕ್ಕೆ ಬಂದಿಲ್ಲ.

'ಶ್ರೀ' ಯವರು 'ಅಶ್ವತ್ಥಾಮನ್' ನಾಟಕವನ್ನು ಬರೆದ ಮೇಲೆ ಈ ನಾಟಕವನ್ನೇಕೆ ಬರೆದರು? ಅಥವಾ ಬರೆದರೆ ಬರೆದುಕೊಳ್ಳಲಿ, ಸುಮ್ಮನೆ ಭಾಷಾಂತರ ಮಾಡುವ ಬದಲು ಇದನ್ನೂ ಭಾರತೀಯಕಥೆಯೊಂದಕ್ಕೆ ಹೊಂದಿಸಿಕೊಳ್ಳಲಿಲ್ಲವೇಕೆ? ಸೋಫೊಕ್ಲೀಸನ ವಿಷಯದಲ್ಲಿ ವಹಿಸಿದ ಸ್ವಾತಂತ್ರ್ಯವನ್ನು ಈಸ್ಕಿಲಸ್ಸನ ವಿಷಯದಲ್ಲೂ ಏಕೆ ವಹಿಸಬಾರದಾಗಿತ್ತು?" ಎಂದು ಕೆಲವರು ಪ್ರಶ್ನೆ ಹಾಕಿಕೊಂಡಿದ್ದಾರೆ. ಇವುಗಳಲ್ಲಿ ಮೊದಲನೆಯ ಪ್ರಶ್ನೆ ಕೇಳತಕ್ಕದ್ದೇ ಅಲ್ಲ. ಅಥವಾ ಕೇಳಿದರೂ "ಇದರಲ್ಲೂ ಗುಣಗಳಿವೆ; ಕಲಿಯತಕ್ಕದ್ದು ಬೇಕಾದಷ್ಟಿದೆ," ಎಂದು ಉತ್ತರಕೊಡಬಹುದು. ಎರಡನೆಯ ಪ್ರಶ್ನೆಗೆ ಉತ್ತರಕೊಡುವುದು ತೀರ ಸುಲಭ. ಇದು ಐತಿಹಾಸಿಕ ನಾಟಕ. ಆದ್ದರಿಂದ 'ಶ್ರೀ' ಯವರು ಇಲ್ಲಿಯ ಹೆಸರುಗಳನ್ನೂ ಆವರಣವನ್ನೂ

ಬದಲಾಯಿಸುವ ಸ್ವಾತಂತ್ರ್ಯವನ್ನು ವಹಿಸಲಿಲ್ಲ. 'ಅಶ್ವತ್ಥಾಮನ್' ನಾಟಕದಲ್ಲಿ ಕಾಣುವ ಉಜ್ವಲಪ್ರತಿಭೆ, ಅಲ್ಲಿಯ ಬಿಗಿ, ಗೀತೆಗಳ ಅಸಾಧಾರಣ ಮಾಧುರ್ಯ, ಇಲ್ಲಿ ಕಾಣದೆಂದು ಒಪ್ಪಲೇ ಬೇಕು. ಶೈಲಿಯಲ್ಲೂ ಕೆಲವು ವೇಳೆ ಶೈಥಿಲ್ಯ ಕಂಡುಬರುತ್ತದೆ. ಆದರೆ ಇದು ಈಸ್ಕಿಲಸ್ಸನ ನಾಟಕಗಳಲ್ಲಿ ಅತ್ಯುತ್ತಮವಾದದ್ದಲ್ಲವೆಂಬುದನ್ನು ನಾವು ಮರೆಯಬಾರದು. ಇಲ್ಲಿ 'ಶ್ರೀ' ಯವರು ಸ್ವತಂತ್ರ ಕವಿಗಳಲ್ಲ; ಈಸ್ಕಿಲಸ್ ಹೋದಂತೆ ಹೋಗಬೇಕು. ಐತಿಹಾಸಿಕ ನಾಟಕಕ್ಕೆ ಕೈಹಾಕಿದ್ದರಿಂದಲೂ ನಾಟಕಕಲೆ ಸಂಪೂರ್ಣವಾಗಿ ಕೈವಶವಾಗಿಲ್ಲದೆ ಇದ್ದುದರಿಂದಲೂ ಈಸ್ಕಿಲಸ್ಸನ ನಾಟಕಕ್ಕೆ ಒದಗಿದ ತೊಡರುಗಳು ಅವನ ಅನುವಾದಕರಿಗೂ ಇದ್ದವು. ಈ ಕೊರತೆಗಳು ಪಾತ್ರ ರಚನೆಯಲ್ಲಿ ಮಾತ್ರವಲ್ಲದೆ ಕ್ರಿಯಾರಚನೆ, ಶೈಲಿ, ಎಲ್ಲದರ ಮೇಲೆಯೂ ತನ್ನ ಪ್ರಭಾವವನ್ನು ಬೀರಿಯೇ ಇವೆ. ನಾಟಕದಲ್ಲಿ ದೋಷಗಳಿವೆ. ಕಥನ ಹೆಚ್ಚಾಯಿತು; ಕ್ರಿಯೆ ಕಡಿಮೆಯಾಯಿತು; ದರ್‍ಯುಷನ ಪ್ರೇತ ಅದೃಶ್ಯವಾದ ಮೇಲೆ ನಾಟಕ ಇಳಿಮುಖವಾಗುತ್ತದೆ; ಕ್ಷಯಾರ್ಷನ ಪಾತ್ರ ಉದಾತ್ತವಾದದ್ದಲ್ಲ; ಮಿಡಿದಿರುವುದು ಒಂದೇ ತಂತಿ—ಎಂದು ಹತ್ತಾರು ದೋಷಗಳನ್ನು ಹುಡುಕಬಹುದು. ಅವು ಸಿಕ್ಕಿಯೂ ಸಿಕ್ಕುತ್ತವೆ. ಆದರೂ ಆ ಒಂದು ತಂತಿಯಿಂದ ಇಂಥ ಗಂಭೀರಗಾನವನ್ನೆಳೆಯುವುದು ಮತ್ತೊಬ್ಬರಿಂದ ಸಾಧ್ಯವಲ್ಲ. 'ಆಗಮೆಮ್ನನ್' ನಾಟಕಕಾರ ನೆದುರಿಗೆ ಈ ದೋಷಗಳ ಪಟ್ಟಿಯನ್ನು ಯಾರಾದರೂ ಒಪ್ಪಿಸಿದ್ದರೆ, ಆತ ಮುಗುಳುನಗೆ ನಕ್ಕು ವಿಮರ್ಶಕರ ಕೈಕುಲುಕುತ್ತಿದ್ದನೇನೊ. ಈ ನಾಟಕದಲ್ಲಿ ನಮಗೆ ಕಾಣುವುದು ಇನ್ನೂ ಬೆಳೆಯುತ್ತಿರುವ ಶಕ್ತಿ. ಆದರೂ ಇಲ್ಲಿಯಸೋಲು ಈಸ್ಕಿಲಸ್ಸನ ಸೋಲು. ಈ ಶಕ್ತಿ ಬಲಿತರೆ ಎಂಥ ಫಲವನ್ನು ಕೊಡುವುದೆಂದು ತಿಳಿಯಬೇಕಾದರೆ 'ಆಗಮೆಮ್ನನ್' ನಾಟಕವನ್ನೋದಬೇಕು. 'ಶ್ರೀ' ಯವರು ಮನಸ್ಸುಮಾಡಿದ್ದರೆ ಅದನ್ನೂ ನಮಗೆ ಕೊಡಬಹುದಾಗಿತ್ತು. ಆ ನಾಟಕಕ್ಕೆ ಅಂಥ ಕೈಚಳಕವೇ ಬೇಕು, ಅಂಥ ಸಹೃದಯತೆಯೇ ಬೇಕು. ಆದರೆ ನಮ್ಮ ಅದೃಷ್ಟ ಮೊಟಕಾಯಿತು.

ಎ. ಎನ್. ಮೂರ್ತಿರಾವ್

ಗ್ರೀಕ್ ರುದ್ರನಾಟಕ

ಹೊಸ ಹೊಸ ಚಿಗುರೊಡೆದು ಬಗೆ ಬಗೆಯ ಹೂವು ಹಣ್ಣುಗಳಿಂದ ಕಂಗೊಳಿಸಿ ನಾಡುನಾಡುಗಳಲ್ಲಿ ಹಬ್ಬಿರುವ ಪಡುವಲ ನಾಟಕದ ಹೆಮ್ಮರನ ತಾಯಿಬೇರನ್ನು ಅರಸುವುದಾದರೆ ಹಳಹಿರಿಯ ಹೆಲ್ಲಾಸಿಗೆ ಹೋಗಬೇಕು. ೨೫ ಶತಮಾನಗಳ ಹಳಮೆಯ ಆ ಜಗದ್ವಿಖ್ಯಾತ ಗ್ರೀಸ್ ನಾಡು ಸಮಸ್ತ ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿಗಳ ತವರು. ದೇಶ ವಿಸ್ತಾರದಲ್ಲಾಗಲಿ ಜನಬಾಹುಳ್ಯದಲ್ಲಾಗಲಿ ಅಷ್ಟೇನೂ ದೊಡ್ಡದಲ್ಲದ ಒಂದು ಜನ, ಅವರಲ್ಲಿಯೂ ಒಂದು ಪಟ್ಟಣ, ಒಂದೆರಡು ತಲೆಮೊರೆಯಲ್ಲಿ ತನ್ನ ಸರ್ವಶಕ್ತಿ ಚೈತನ್ಯಗಳನ್ನೂ ಹೊಮ್ಮಿಸಿಕೊಂಡು, ತನ್ನ ಉಜ್ವಲ ಪ್ರತಿಭೆಯ ಅಮರ ಪ್ರಭಾವವನ್ನು ಇಡಿಯ ಜಗತ್ತಿನ ಮೇಲೆ ಬೀರಿ, ಇಂದಿನ ಜಗತ್ತಿನ ಒಂದು ದೊಡ್ಡ ನಾಗರಿಕತೆಯನ್ನು ಅಂದೇ ತನಗೆ ಋಣಿಯಾಗಿ ಮಾಡಿಕೊಂಡ ಅದ್ಭುತ ಮಹಿಮೆ ಮತ್ತೆಲ್ಲಿಯೂ ಕಾಣಬರುವುದಿಲ್ಲ. ಗ್ರೀಸಿನ ಸ್ವರ್ಣಯುಗವೆಂದು ಕರೆಯುವ ಪೆರಿಕ್ಲೀಸಿನ ಕಾಲವಲ್ಲಿ, ಅಥೇನೇ ಪಟ್ಟಣವಲ್ಲಿ, ಉಳಿದೆಲ್ಲ ಕಲೆಗಳೂ ಶಾಸ್ತ್ರಗಳೂ ಹೊಮ್ಮಿ ಹೊನ್ನಾದಂತೆಯೇ ರುದ್ರನಾಟಕವೂ ತನ್ನ ತುದಿ ನೆಲೆಯನ್ನು ಮುಟ್ಟಿತು. ಮೂವರು ಮಹಾಕವಿಗಳ ಕೃಷಿಯಿಂದ ಸುಮಾರು ೫೦ ವರ್ಷಗಳಲ್ಲಿ ಗ್ರೀಕ್ ರುದ್ರನಾಟಕ ಮೊಳೆತು ಚಿಗುತು ಹೂವಿಗೆ ಬಂದು ಹಣ್ಣು ಬಿಟ್ಟಿತು. ಅದರ ಹುಟ್ಟು ಬೆಳವಣಿಗೆಗಳನ್ನು ಕುರಿತು ಹೆಗ್ಗುರುತಾಗಿ ನಾಲ್ಕು ಮಾತು ಹೇಳುತ್ತದೆ.

ನಮ್ಮಲ್ಲಿ ಕೆಲವೆಡೆ ಮಾರಿಯ ಮೆರವಣಿಗೆಗಳಲ್ಲಿಯೂ ಜಾತ್ರೆಗಳಲ್ಲಿಯೂ ಚೋಮನ ಕುಣಿತ ನಡೆಯುವುದುಂಟು. ಮೆರವಣಿಗೆ ಅಲ್ಲಲ್ಲಿ ನಿಂತಾಗ ಮಾರಮ್ಮನ ಮುಂದೆ ಭಕ್ತನೊಬ್ಬ ಮೊಗವಾಡ ಹಾಕಿಕೊಂಡು ಆವೇಶದಿಂದ ಕುಣಿಯುತ್ತಾನೆ. ಅವನ ಸುತ್ತ ಹಲವರು ಹರೆತಮಟೆಗಳನ್ನು ಬಾಜಿಸುತ್ತ ಹಾಡು ಹೇಳಿಕೊಂಡು ಸುತ್ತುತ್ತಾರೆ. ಮೊಗವಾಡ ಉಪಾಸನಾ ದೇವತೆಯ ಸ್ವರೂಪಕ್ಕೆ ತಕ್ಕಂತೆ ಭೀಷಣವಾಗಿರುತ್ತದೆ. ಕುಣಿತ ಸಾಮಾನ್ಯವಾಗಿ ರಾಕ್ಷಸ ರೀತಿಯದು. ಹಾಡು

ಬಹುಪಾಲು ಮಾರಿಯ ಸಾಹಸ ಪರಾಕ್ರಮಗಳನ್ನು ಕುರಿತುವು. ದಕ್ಷಿಣಕನ್ನಡ ತುಳು ಸೆರಗಿನ ಕೆಲವೆಡೆಗಳಲ್ಲಿ ನಡೆಯುವ ದೆವ್ವನ ಕುಣಿತ ಅಥವಾ ಮೇಳ ಹೆಚ್ಚು ಕಡಮೆ ಇದೇ ತೆರದ್ದು.* ಮಾರಿಯ ಜಾತ್ರೆಯಲ್ಲಿ ಆಡು ಕುರಿ ಕೋಣಗಳನ್ನು ಬಲಿಕೊಡುವುದು ಇಂದಿಗೂ ನಡೆದು ಬಂದದ್ದೇ. ಹೆಚ್ಚು ಕಡಮೆ ಎಲ್ಲ ಜನರಲ್ಲಿಯೂ ಮೊದಲು ದೇವತಾರಾಧನೆ, ಮತಾಚರಣೆ ಇದೇ ಜಾತಿಯದಾಗಿರಬೇಕು: ಬಲಿ, ಕುಡಿತ, ಕುಣಿತ, ಹಾಡು.

೨೫೦೦ ವರ್ಷಗಳ ಕೆಳಗೆ ಗ್ರೀಸಿನಲ್ಲಿ ದಿಯೊನೂಸೊಸ್ ದೇವತೆಯ ಜಾತ್ರೆ ಈ ರೀತಿಯಲ್ಲಿ ನಡೆಯುತ್ತಿತ್ತು. ಅತಿಕ ಪ್ರಾಂತದ ತಲೆಯೂರಾದ ಅಥೇನೇ ಪಟ್ಟಣದಲ್ಲಿಯಂತೂ ಅದನ್ನು ನಾಡಹಬ್ಬವಾಗಿ, ರಾಜ್ಯದ ಉತ್ಸವವಾಗಿ, ಬಹು ಸಂಭ್ರಮದಿಂದ ಆಚರಿಸುತ್ತಿತ್ತು. ದಿಯೊನೂಸೊಸ್ ಸಸ್ಯಾಧಿದೇವತೆ, ಮದ್ಯಾಧಿದೇವತೆ. ಜನವೆಲ್ಲ ದಿಯೊನೂಸೊಸ್ ದೇವತೆಯ ವಿಗ್ರಹದ ಮುಂದೆ ನೆರೆದು, ಆಡನ್ನು ಬಲಿಕೊಟ್ಟು, ಬಲಿಗಂಬದ ಸುತ್ತ ಕೊಳಲ ಹಿಮ್ಮೇಳಕ್ಕೆ ಹಾಡು ಹೇಳಿಕೊಂಡು ಕುಡಿದು, ಪಾನೋತ್ಸವ ನಡಸಿ ಜಾತ್ರೆ ಆಚರಿಸುತ್ತಿದ್ದರು. ಬಟ್ಟೆಯ ಮರಸನ್ನೊ ಮೊಗವಾಡವನ್ನೊ ಹಾಕಿಕೊಂಡು ಕುಣಿಯುತ್ತಿದ್ದ ಆ ಉಪಾಸಕರಿಗೆ ಮೇಳದವರೆಂದೂ ಅವರ ತಲೆಯಾಳಿಗೆ ಮೇಳನಾಯಕನೆಂದೂ ಹಾಡುತ್ತಿದ್ದ ಗೀತಕ್ಕೆ ದೀಥುರಂಬೊಸ್ ಎಂದೂ ಹೆಸರು. ಆ ದೀಥುರಂಬೊಸ್ ಗೀತಗಳು ದಿಯೊನೂಸೊಸ್ ದೇವತೆಯನ್ನು ಕುರಿತುವು. ದಿಯೊನೂಸೊಸ್ ಗ್ರೀಸಿಗೆ ಹೊರಗಿನಿಂದ ಬಂದು ನೆಲಸಿದ ದೇವತೆ. ಆದ್ದರಿಂದ, ಅವನು ಒಲುಂಪೊಸ್ ದೇವತೆಗಳ ಪಂಕ್ತಿಗೆ ಸೇರಿ ಮನ್ನಣೆಪಡೆಯಬೇಕಾದರೆ ಮೊದಲು ಬಲು ಪಾಡುಪಡಬೇಕಾಯಿತು. ಆ ಹಾಡುಗಳಲ್ಲಿ ಅವನು ಪಟ್ಟ ಪಾಡುಗಳನ್ನೂ ಸಾಧಿಸಿದ ಸಾಹಸ ಪರಾಕ್ರಮಗಳನ್ನೂ ವರ್ಣಿಸುವುದು ವಾಡಿಕೆಯಾಯಿತು. ದಿಯೊನೂಸೊಸ್ಸಿನ ಪರಿವಾರದವರೆಲ್ಲ ಮದಿರೋನ್ಮತ್ತರು, ಆವೇಶೋ

---

* "ಸಂಭಾವನೆ"ಯಲ್ಲಿ ಶ್ರೀ|| ಶಿವರಾಮಕಾರಂತರ 'ನಮ್ಮ ನಾಡಿನ ನೃತ್ಯಗಳು' ನೋಡಿ.

ಭಕ್ತರು. ಅವನನ್ನು ಕುರಿತ ನೃತ್ಯ ಗೀತಗಳಲ್ಲಿಯೂ ಈ ಉನ್ಮಾದ ಉದ್ರೇಕಗಳು ಕಾಣುತ್ತವೆ. ಆ ದೇವತೆಗೆ ವರ್ಷದಲ್ಲಿ ನಡೆಯುತ್ತಿದ್ದ ಹಲವು ಜಾತ್ರೆಗಳಲ್ಲಿ ವಸಂತದ ಜಾತ್ರೆಯೂ ಮಾಗಿಯ ಜಾತ್ರೆಯೂ ಮುಖ್ಯವಾದುವು. ಕಾಲಕ್ರಮದಲ್ಲಿ ವಸಂತದ ಜಾತ್ರೆಯ ನೃತ್ಯಗೀತಗಳಿಂದ ರುದ್ರನಾಟಕವೂ ಮಾಗಿಯ ಜಾತ್ರೆಯ ನೃತ್ಯಗೀತಗಳಿಂದ ಹರ್ಷನಾಟಕವೂ ಬೆಳೆದುವು.

ನಾಡಿನ ಒಳ್ಪು ತಮ್ಮ ನಾಡಿಗಾಗಿ ದುಡಿದು ಮಡಿದ ವೀರರಿಗೆ ಸಲ್ಲುವ ಪೂಜೆಗೌರವಗಳನ್ನು ಅವಲಂಬಿಸಿದೆ ಎಂಬ ನಂಬಿಕೆಯಿಂದ ಗ್ರೀಸಿನಲ್ಲಿ ಕೀರ್ತಿಶೇಷರಾದ ವೀರಪುರುಷರ ಸಮಾಧಿಗಳಿಗೆ ಪೂಜೆ ನಡೆಯುತ್ತಿತ್ತು. ಆಗ ಆ ವೀರರ ಸಾಹಸಕೃತ್ಯಗಳನ್ನೂ ಅಳಲು ಸೋಲುಗಳನ್ನೂ ವರ್ಣಿಸುವ ಹಾಡುಗಳನ್ನು ಹೇಳಿ ಕುಣಿಯುವುದು ಪದ್ಧತಿಯಾಗಿತ್ತು. ಆ ವೀರಪೂಜಾ ಸಮಯದ ಹಾಡು ಕುಣಿತಗಳಿಂದ ರುದ್ರನಾಟಕ ಬೆಳೆಯಿತೆಂಬ ಮತವೂ ಒಂದುಂಟು. ಈ ಮತಕ್ಕೆ ಅಷ್ಟಾಗಿ ಯಾರೂ ಈಗ ಮನ್ನಣೆ ಕೊಡುತ್ತಿಲ್ಲ. ಆದರೆ, ವೀರಪೂಜೆಯಿಂದ ರುದ್ರನಾಟಕ ನೇರವಾಗಿ ಬೆಳೆಯದಿದ್ದರೂ ರುದ್ರನಾಟಕದ ಬೆಳವಣಿಗೆಯಲ್ಲಿ ವೀರಪೂಜಾ ಪ್ರಕ್ರಿಯೆಯೂ ನೆರವಾಗಿದ್ದಿರಬಹುದು.

ಕ್ರಿಸ್ತಪೂರ್ವ ೬–೭ ಶತಮಾನದ ಕಾಲಕ್ಕೆ ಆರಿಯೋನ್ ಎಂಬ ಮೇಧಾವಿಯೊಬ್ಬನು ತಲೆದೋರಿ, ಅಲ್ಲಿಯವರೆಗೂ ಇನ್ನೂ ಕ್ರಮನಿಯಮಗಳಿಲ್ಲದೆ ಜಲಪ್ಲವರೂಪದಲ್ಲಿ ಹಳ್ಳಿಯ ಹಾಡಾಗಿಯೇ ಉಳಿದಿದ್ದ ದೀಥುರಂಬೊಸ್ ಗೀತಗಳಿಗೆ ನಿಷ್ಕೃಷ್ಟ ಸ್ವರೂಪ ಕೊಟ್ಟು ವ್ಯವಸ್ಥೆಗೊಳಿಸಿದನು. ಅವನ ಕಾಲಕ್ಕೆ ಮೇಳದವರ ಸಂಖ್ಯೆ ೫೦ ಎಂದು ಗೊತ್ತಾದ್ದಲ್ಲದೆ, ಗೀತಗಳನ್ನು ಬಲಮುರಿ ಎಡಮುರಿಗಳಾಗಿ ಸಮಜೋಡಿಯಲ್ಲಿ ಕಟ್ಟುವ ಪದ್ಧತಿಯೂ ಬಂತು. ನಾಟಕ ದೃಷ್ಟಿಯಿಂದ ಗಮನಿಸಬೇಕಾದ ಮುಖ್ಯ ಮಾರ್ಪಾಟೆಂದರೆ, ಆರಿಯೋನ್ ಮೇಳಗೀತಗಳ ನಡುವೆ ವಿಷಯ ವಿವರಣ ರೂಪದ ಭಾಷಣ ಪದ್ಯಗಳನ್ನು ಸೇರಿಸಿದ್ದು. ಗೀತಗಳ ನಡುವೆ ಮೇಳನಾಯಕನು ಅಟ್ಟಣೆ ಹತ್ತಿ

ನಿಂತು ಕೆಳಕಣದಲ್ಲಿದ್ದ ಮೇಳದವರೊಡನೆ ಭಾಷಣಪದ್ಯಗಳ ಮೂಲಕ ನಡಸುತ್ತಿದ್ದ ಕಥನಸ್ವರೂಪದ ಆ ಸಂವಾದಗಳೇ ಗ್ರೀಕ್‌ನಾಟಕದ ತಳ ಹದಿ ಎನ್ನಬಹುದು. ಭಾಷಣಪದ್ಯದ ಛಂದಸ್ಸೂ ಗೀತದ ಛಂದಸ್ಸೂ ಬೇರೆಯಾಗಿದ್ದುವು. ಆರಿಯೋನಿನ ಮತ್ತು ಅವನ ತರುವಾಯದವರ ದೀಥುರಂಬೊಸ್ ಗೀತಗಳಿಗೆ ತ್ರಗೋದಿಯ (ಟ್ರ್ಯಾಜೆಡಿ) ಎಂದು ಹೆಸ ರಾಯಿತು. ಅದರ ಪದಶಃ ಅರ್ಥ ಆಡಿನ ಹಾಡು, ಅಜಗೀತೆ ಎಂದು. ಆದರೆ, ಆ ಪದಕ್ಕೆ ಆಗ ತರುವಾಯದ ವ್ಯಾಪಕಾರ್ಥ ಇನ್ನೂ ಬಂದಿರಲಿಲ್ಲ.

ಕ್ರಿಸ್ತಪೂರ್ವ ೬ ನೆಯ ಶತಮಾನದ ಮೊದಲಲ್ಲಿ ಥೆಸ್ಪಿಸ್ ಎಂಬ ಮತ್ತೊಬ್ಬ ಮೇಧಾವಿ ಹುಟ್ಟಿ ಆರಿಯೋನ್ ಹಸನು ಮಾಡಿದ್ದ ನೆಲ ದಲ್ಲಿ ನಾಟಕಬೀಜ ಬಿತ್ತಿ ರುದ್ರನಾಟಕದ ಜನಕನೆಂದು ಹೆಸರು ಗೊಂಡನು. ಥೆಸ್ಪಿಸ್ ಮೇಳದವರ ಜತೆಗೆ ಒಬ್ಬ ನಟನನ್ನು ತಂದು ಸೇರಿಸಿದನು. ಸಂಭಾಷಣೆಗಳು ಈ ನಟನಿಗೂ ಮೇಳನಾಯಕನಿಗೂ ನಡೆಯತೊಡಗಿ, ಮೇಳದವರ ಕೆಲಸ ಗೀತ ಹಾಡಿ ಕುಣಿಯುವುದೂ ನಡುವೆ ಸಂಭಾಷಣೆ ನಡೆಯುವಾಗ ಸುಮ್ಮನೆ ಪ್ರೇಕ್ಷಕರಾಗಿ ನಿಂತಿರು ವುದೂ ಆಯಿತು. ಒಬ್ಬನೇ ನಟ ಸಂದರ್ಭಾನುಸಾರ ವೇಷಬದಲಾಯಿಸಿ ಕೊಂಡು ದೇವತೆ, ದೊರೆ, ದೂತ ಎಲ್ಲವೂ ಆಗುತ್ತಿದ್ದನು. ನಟನಿಗೂ ಮೇಳನಾಯಕನಿಗೂ ನಡೆಯುತ್ತಿದ್ದ ಮಾತುಕತೆಗಳನ್ನು ಸಂಭಾಷಣೆ ಎಂದು ಕರೆಯುವುದಕ್ಕಿಂತ ಪ್ರಶ್ನೋತ್ತರ ಎಂದು ಕರೆಯುವುದು ಹೆಚ್ಚು ಸಮಂಜಸವಾದೀತು. ಮೇಳನಾಯಕನ ಒಂದು ಮೊಟಕು ಪ್ರಶ್ನೆಗೆ ನಟನು ಕೊಡುತ್ತಿದ್ದ ಉತ್ತರ ಒಂದು ದೀರ್ಘ ಭಾಷಣ ಇಲ್ಲವೆ ಕಥನ. ಅಂತೂ ಈ ಸಂವಾದ ಭಾಗ ಬೆಳೆದಂತೆಲ್ಲ ಮೇಳದ ಕೇವಲ ಕಥನಸ್ವರೂಪ ಹಿಮ್ಮೆಟ್ಟಿ ನಾಟಕಸ್ವರೂಪ ವಿಕಾಸವಾಗತೊಡಗಿತು. ಬಲುಬೇಗ, ಅಟ್ಟಣೆ ನಟನಿಗೂ ಕೆಳಕಣ ಮೇಳಕ್ಕೂ ಮೀಸಲಾಯಿತು. ಅಲ್ಲಿಯವರೆಗೂ ಮೇಳದ ಗೀತ ಕಥನಗಳ ವಸ್ತು ದಿಯೊನೂಸೊಸ್ ದೇವತೆಗೆ ಸಂಬಂಧಿಸಿದ ಕಥೆಗಳು ಮಾತ್ರವಾಗಿದ್ದದ್ದು, ಥೆಸ್ಪಿಸ್ಸಿನ ಕಾಲದಲ್ಲಿ ಇತರ ಗ್ರೀಕ್ ಪುರಾಣ ಕಥೆಗಳೂ ನಾಟಕವಸ್ತುವಾಗ

ಬಂದುವು. ಹೊಮೇರೊಸ್ಸಿನ ಕಾವ್ಯಗಳೂ ಜನರ ಬಾಯಲ್ಲಿದ್ದ ಇತರ ವೀರ ಕಥೆಗಳೂ ರುದ್ರನಾಟಕಗಳಿಗೆ ಕಥಾವಸ್ತುವನ್ನು ಒದಗಿಸಿದುವು. ವಸ್ತುವನ್ನೊದಗಿಸಿದ ಈ ಕಥನಕಾವ್ಯದ ಪ್ರಭಾವ ಗ್ರೀಕ್ ರುದ್ರನಾಟಕದ ಮೇಲೆ ಕೊನೆಯುವರೆಗೂ ನಿಂತುಬಿಟ್ಟಿತೆನ್ನಬಹುದು. ಪಕ್ವಕಾಲದ ನಾಟಕಗಳಲ್ಲಿ ಕೂಡ, ಪಾತ್ರಗಳ ಭಾಷಣಗಳಲ್ಲಿ ಸಂವಾದಗುಣಕ್ಕಿಂತ ಕಥನಗುಣವೇ ಹೆಚ್ಚಾಗಿ ತೋರುತ್ತದೆ. ಹಲವೊಮ್ಮೆ, ನಾಟಕದಲ್ಲಿ ನಾಟಕೀಯತೆಗಿಂತ ಮಹಾಕಾವ್ಯ ಲಕ್ಷಣವೂ ಭಾವಗೀತಾಲಕ್ಷಣವೂ ಕಾಣಬರುತ್ತವೆ.

ಗ್ರೀಕ್ ರುದ್ರನಾಟಕಕಾರರಲ್ಲಿ ಅಪ್ರತಿಮ ಪ್ರತಿಭಾವಂತರೆಂದು ಹೆಸರುಗೊಂಡ ರತ್ನತ್ರಯದಲ್ಲಿ ಮೊದಲಿಗನಾದ ಅಯ್‌ಸ್ಕುಲೊಸ್ (ಉಳಿದಿಬ್ಬರು: ಸೊಫೊಕ್ಲೇಸ್, ಯುರಿಪಿದೇಸ್) ಗ್ರೀಕ್ ರುದ್ರನಾಟಕದ ಎರಡನೆಯ ಜನಕನೆಂದು ಹೆಸರು ಪಡೆದಿದ್ದಾನೆ. ಥೆಸ್ಪಿಸ್ಸಿನ ಮತ್ತು ಅವನ ತರುವಾಯದವರ ಕೈಯಲ್ಲಿ ಇನ್ನೂ ಮೊಳೆಯುವುದರಲ್ಲಿದ್ದ ರುದ್ರನಾಟಕವನ್ನು ಅಯ್‌ಸ್ಕುಲೊಸ್ ತೆಗೆದುಕೊಂಡು ಕೃಷಿಮಾಡಿ ಬೆಳಸಿ ಅದು ನಿಷ್ಕೃಷ್ಟ ರೂಪ ತಳೆದು ನೆಲಸುವಂತೆ ಮಾಡಿದನು. ಅಟ್ಟಣೆಯ ಮೇಲೆ ಎರಡನೆಯ ನಟನನ್ನು ತಂದು ನಾಟಕದ ಸಂಭಾಷಣೆ ಎರಡು ಪಾತ್ರಗಳಿಗೆ, ಪ್ರತ್ಯಕ್ಷ ವ್ಯಕ್ತಿಗಳಿಗೆ, ನಡೆಯುವಂತೆ ಮಾಡಿದನು. ಇದರಿಂದ ನಾಟಕದ ತಿರುಳಾದ, ಆಕರ್ಷಣ ಕೇಂದ್ರವಾದ, ಜೀವಂತ ಸಂವಾದಕ್ಕೆ ಹೆಚ್ಚು ಪ್ರಾಧಾನ್ಯದೊರೆತು, ನೋಟಕರ ಕಣ್ಣು ಕಿವಿ ಮುಂಗಣದ ಮೇಳದಿಂದ ಅಟ್ಟಣೆಯ ನಟರ ಮೇಲೆ ತಿರುಗಿದುವು. ಆದರೂ, ಮೇಳದ ಪ್ರಾಮುಖ್ಯತೆ ಅಷ್ಟೇನೂ ಕಡಮೆಯದಾಗಿರಲಿಲ್ಲ. ಸೊಫೊಕ್ಲೇಸ್ ಬಂದು ಮೂರನೆಯ ನಟನನ್ನು ತಂದು, ಅಗ್ರಸ್ಥಾನಕ್ಕಾಗಿ ನಟರಿಗೂ ಮೇಳದವರಿಗೂ ಗ್ರೀಕ್ ರುದ್ರರಂಗದ ಮೇಲೆ ಆಗಾಗ ನಡೆಯುತ್ತಿದ್ದ ಮೇಲಾಟವನ್ನು ಬಗೆಹರಿಸಿದನು. ನಟರಿಗೆ ಪ್ರಧಾನ ಸ್ಥಾನ ಕೊಡಿಸಿ, ಮೇಳದವರು ಹಿನ್ನೆಲೆಯಲ್ಲಿದ್ದುಕೊಂಡು ಎಡೆಯರಿತು ಪಾತ್ರಗಳಿಗೆ ನೆರವಾಗಿ ನಾಟಕಕ್ಕೆ ಕಳೆ ತರುವಂತೆ ಮಾಡಿದನು. ಸೊಫೊಕ್ಲೇಸಿನಲ್ಲಿ ಮೇಳ, ಬರುಬರುತ್ತ, ನಾಟಕದ ನಡುವಣ ಬಿಡುವು

ಗಳನ್ನು ತುಂಬುವುದಕ್ಕೆ ಮಾತ್ರ ಉಪಯೋಗವಾಗ ತೊಡಗಿದರೂ, ಮೇಳಕ್ಕೂ ನಾಟಕದ ಕಥೆಗೂ ಇರುವ ಸಂಬಂಧ ಕೃತಕವಾದ್ದಲ್ಲ, ನೈಜವಾದ್ದು. ಯುರಿಪಿದೇಸಿನ ನಾಟಕಗಳಲ್ಲಿ ಕಥಾವಸ್ತುಸಂವಿಧಾನಕ್ಕೂ ಮೇಳಕ್ಕೂ ಸಂಬಂಧ ಕ್ರಮೇಣ ತಪ್ಪಿ, ಕೊನೆ ಕೊನೆಗೆ ಮೇಳ ನಡುನಡುವೆ ಕೇವಲ ವಿನೋದಕ್ಕಾಗಿ ಬರುವ ಬರಿಯ ಸಂಗೀತವಾಗುತ್ತ ಬಂತು. ಅವನಲ್ಲಿ ಒಮ್ಮೊಮ್ಮೆ ಮೇಳ ನಾಟಕಕ್ಕೆ ನೆರವಾಗುವುದಕ್ಕಿಂತ ಹೊರೆಯಾಗಿರುವುದು ಕಾಣಬರುತ್ತದೆ. ಹೀಗೆ, ಗ್ರೀಕ್ ರುದ್ರನಾಟಕದ ಹುಟ್ಟು ದಿಯೊನೂಸೊಸ್ ಮೇಳದಿಂದ ಆದರೂ, ಬರುಬರುತ್ತ ನಾಟಕವೇ ಮುಂದೊತ್ತಿ ಮೇಳ ಹಿಂಬಿದ್ದಿತು. ಆದರೂ ಮೇಳವಿಲ್ಲದ ಗ್ರೀಕ್ ನಾಟಕ ಯಾವುದೂ ಇಲ್ಲ. ತರುವಾಯದ ಪರಿಪಕ್ವ ಗ್ರೀಕ್ ನಾಟಕಗಳಲ್ಲಿಯೂ ಮೇಳಕ್ಕೆ ಒಂದು ಎಡೆ ಕೊಟ್ಟದ್ದರೆ, ಅದು ನಾಟಕ ತನ್ನ ತಾಯಿ ನಾಟ್ಯಕ್ಕೆ ಒಪ್ಪಿಸಿದ ತವರುಕಾಣಿಕೆ ಎನ್ನಬಹುದು.

ಗ್ರೀಕ್ ರುದ್ರನಾಟಕವಲ್ಲಿ ಬರುವ ಮೇಳ ಸಾಮಾನ್ಯವಾಗಿ ಎರಡು ಸ್ವರೂಪದ್ದು. ಮೇಳದವರು ಕೆಲವೊಮ್ಮೆ ನಾಟಕಪಾತ್ರಗಳೊಡನೆ ಸಹಕರಿಸಿ ಕಥೆಯನ್ನು ಮುಂದುವರಿಸುತ್ತಾರೆ; ಇಲ್ಲವೆ, ಸಮಯೋಚಿತವಾದ ಪ್ರಶ್ನೆ, ನಿವರಣೆ ಮೊದಲಾದುವುಗಳಿಂದ ಕಥೆಯ ಬೇರೆ ಬೇರೆ ಪ್ರಕರಣಗಳಿಗೆ ಸಂಬಂಧ ಕಲ್ಪಿಸಿಕೊಡುತ್ತಾರೆ. ಆಗ ಅವರನ್ನು ಉಪಪಾತ್ರಗಳೆಂದು ಭಾವಿಸಬಹುದು. ಹಲವೊಮ್ಮೆ ಅವರು ನಾಟಕದ ಕಥೆಯಲ್ಲಿ ಯಾವ ಭಾಗವನ್ನೂ ವಹಿಸದೆ ನಾಟಕ ಪಾತ್ರಗಳ ಅಭಿನಯವನ್ನು ನೋಡುತ್ತ ಸುಮ್ಮನೆ ನಿಂತಿರುತ್ತಾರೆ. ಆಗ ಅವರನ್ನು ಪ್ರೇಕ್ಷಕರೆಂದು ಭಾವಿಸಬಹುದು. ಅಂತೂ, ಮೇಳದವರು ಉಪಪಾತ್ರಗಳಾಗಿ ನಾಟಕದ ಕಥೆಯಲ್ಲಿ ಭಾಗವನ್ನಾದರೂ ವಹಿಸಲಿ, ಇಲ್ಲವೆ, ನಾಟಕದಲ್ಲಿಯೇ ಒಂದು ಬಗೆಯ ಒಳಪ್ರೇಕ್ಷಕರಾಗಿ ಸುಮ್ಮನೆ ನಿಂತಾದರೂ ಇರಲಿ, ಅವರನ್ನು ನಾಟಕವ್ಯಕ್ತಿಗಳಿಗೂ ಹೊರ ಪ್ರೇಕ್ಷಕರಿಗೂ ನಡುವಣ ಸಂಬಂಧಕಾರಿಗಳನ್ನಾಗಿ ಎಣಿಸಬಹುದು.

ಒಂದು ದೃಷ್ಟಿಯಿಂದ, ದೀಥುರಂಬೊಸ್ ಗೀತ ನೃತ್ಯ ನಮ್ಮ

ಚೋಮನ ಹಾಡು ಕುಣಿತವನ್ನು ಹೋಲಿದರೆ, ಮತ್ತೊಂದು ದೃಷ್ಟಿಯಿಂದ ಗ್ರೀಕ್ ರುದ್ರನಾಟಕಕ್ಕೂ ನಮ್ಮ ಬಯಲಾಟಕ್ಕೂ * ಕೆಲವು ಬಗೆಯಲ್ಲಿ ಸಾಮ್ಯ ಹೇಳಬಹುದು. ನಮ್ಮ ಮೇಳದ ಮುಂದಾಳಾದ ಭಾಗವತನನ್ನು ಗ್ರೀಕ್ ಮೇಳನಾಯಕನಿಗೆ ಹೋಲಿಸಬಹುದು. ಈ ಭಾಗವತನಿಗೂ ನಾಟಕಪಾತ್ರಗಳಿಗೂ ನಡೆಯುವಂತೆಯೇ ಮೇಳನಾಯಕನಿಗೂ ನಾಟಕಪಾತ್ರಗಳಿಗೂ ಪ್ರಶ್ನೋತ್ತರ ಸಂಭಾಷಣೆ ನಡೆಯುತ್ತದೆ: ಮೊಟಕು ಪ್ರಶ್ನೆ, ನೀಳ ಉತ್ತರ. ನಮ್ಮಲ್ಲಿ ಸಾಮಾನ್ಯವಾಗಿ ಮೇಳದವರು ಒಂದೆಡೆ ನಿಂತೊ ಕುಳಿತೊ ಹಾಡುತ್ತಾರೆ; ನಟರು ಕುಣಿಯುತ್ತಾರೆ. ಆದರೆ, ಗ್ರೀಕ್ ರುದ್ರನಾಟಕದಲ್ಲಿ ಹಾಡುವುದು ಕುಣಿಯುವುದು ಎರಡೂ ಮೇಳದವರು. ಬಯಲಾಟದಲ್ಲಿ ಅಟ್ಟಣೆಯ ಮೇಲೆ ಒಟ್ಟಿಗೆ ಕಾಣಿಸಿಕೊಳ್ಳುವುದು ಸಾಮಾನ್ಯವಾಗಿ ಎರಡೇ ಪಾತ್ರಗಳು; ಒಂದೇ ಸಲ ಮೂರಕ್ಕಿಂತ ಹೆಚ್ಚು ಬರುವುದು ಬಹು ಅಪರೂಪ. ಗ್ರೀಕ್ ರಂಗದ ಮೇಲೆಯೂ ಏಕಕಾಲದಲ್ಲಿ ಮೂರಕ್ಕಿಂತ ಹೆಚ್ಚು ಪಾತ್ರ ಯಾವಾಗಲೂ ಬರುವುದಿಲ್ಲ.† ನಾಟಕದಲ್ಲಿ ಬರುವ ಪಾತ್ರಗಳು ಸಾಮಾನ್ಯವಾಗಿ ದೇವತೆಗಳು, ವೀರಪುರುಷರು, ಪುರಾಣವ್ಯಕ್ತಿಗಳು. ಅಂಥವರನ್ನು ರಂಗದ ಮೇಲೆ ತಂಡ ತಂಡವಾಗಿ ತಂದು ನಿಲ್ಲಿಸುವುದಕ್ಕಿಂತ, ಒಬ್ಬಿಬ್ಬರು ಬಂದು ವಿಶಾಲ ರಂಗವನ್ನು ತುಂಬುವಂತೆ ಅಳವಡಿಸಿದರೆ ಪಾತ್ರಗಳ ಘನತೆ ಗಾಂಭೀರ್ಯ ವ್ಯಾಪ್ತಿ ವ್ಯಕ್ತಿತ್ವಗಳ ಚಿತ್ರ ಚೆನ್ನಾಗಿ ಕಣ್ಣಿಗೆ ಕಟ್ಟುತ್ತದೆ. ಅಲ್ಲದೆ ಕೆಳಕಣದಲ್ಲಿಯ ಸಾಮಾನ್ಯ ವ್ಯಕ್ತಿಗಳ ಮೇಳ ಆ ಬೃಹನ್ ಮಹಾವ್ಯಕ್ತಿಗಳಿಗೆ ಹಿನ್ನೆಲೆಯಂತಿದ್ದು ಪುರಾಣ ಪಾತ್ರಗಳ ಔನ್ನತ್ಯ

---

* ದೊಂಬಿದಾಸರ ಕುಣಿತ ಅಥವಾ ಯಕ್ಷಗಾನ.

† ನಾಟಕದಲ್ಲಿ ಹಲವು ಪಾತ್ರಗಳಿರಬಹುದು. ಆದರೆ, ನಟರು ಮೂವರೆ ಆದ್ದರಿಂದ ರಂಗದ ಮೇಲೆ ಒಟ್ಟಿಗೆ ಮೂರು ಪಾತ್ರಗಳಿಗಿಂತ ಹೆಚ್ಚಾಗಿ ಬರಲು ಅವಕಾಶವಿರಲಿಲ್ಲ. ಒಬ್ಬನೇ ನಟ ಸಂದರ್ಭಾನುಸಾರ ಹಲವು ಪಾತ್ರಗಳನ್ನು ಧರಿಸುತ್ತಿದ್ದನು. ಒಂದು ನಾಟಕದಲ್ಲಿಯ ಪಾತ್ರಗಳನ್ನು ಮೂರು ನಟರಿಗೆ ಹಂಚಿ ಹಾಕುವುದರಲ್ಲಿ ಒಂದು ಬಗೆಯ ಕ್ರಮಾನುಸರಣೆಯೂ ಇತ್ತು.

ಮತ್ತೂ ಎದ್ದು ಕಾಣುವಂತೆ ಮಾಡುತ್ತದೆ. ಬಯಲಾಟಗಳಲ್ಲಿಯಂತೆ ಗ್ರೀಕ್ ರುದ್ರನಾಟಕಗಳಲ್ಲಿಯೂ ವಸ್ತು ಪುರಾಣಕಥೆಗಳು. ಪುರಾಣ ವ್ಯಕ್ತಿಗಳಂತೆ ಕಾಣಲು ನಮ್ಮಲ್ಲಿ ನಟರು ಕಿರೀಟ, ಭುಜಕೀರ್ತಿ ಮೊದಲಾದ ಅಣಿ ತೊಟ್ಟು ಬಣ್ಣ ಬಳಿದುಕೊಳ್ಳುವಂತೆ, ಗ್ರೀಕ್ ರುದ್ರನಟರು ಮೊಗವಾಡ, ಮೆತ್ತೆಯ ನಿಲುವುಡುಪು, ಎತ್ತರ ಅಟ್ಟೆಯ ಜೋಡು ಮೊದಲಾದುವನ್ನು ಹಾಕಿಕೊಳ್ಳುತ್ತಿದ್ದರು. ಪಾತ್ರಭೇದ ತೋರಿಸಲು ಕಿರೀಟ, ಭುಜಕೀರ್ತಿ, ಬಣ್ಣ ಮೊದಲಾದುವುಗಳಲ್ಲಿ ವ್ಯತ್ಯಾಸವಿರುವಂತೆ ಗ್ರೀಕ್ ನಟರಿಗೂ ರೌದ್ರ, ಸೌಮ್ಯ, ಗಂಭೀರ, ಹಾಸ್ಯ ಮೊದಲಾದ ಪಾತ್ರಗಳಿಗೆ ತಕ್ಕಂತೆ ಬಗೆ ಬಗೆಯ ಮೊಗವಾಡಗಳು ಇರುತ್ತಿದ್ದುವು. ಬಿಡುಹೊತ್ತಿನಲ್ಲಿ ನಮ್ಮ ನಟರು ಅಟ್ಟಣೆಯ ಹಿಂಬದಿಗೆ ಹೋಗಿ ವಿಶ್ರಮಿಸಿಕೊಳ್ಳುವಂತೆ, ಗ್ರೀಕ್ ನಟರು ವಿಶ್ರಾಂತಿಗೂ ವೇಷ ಬದಲಾಯಿಸಿಕೊಳ್ಳುವುದಕ್ಕೂ ಅಟ್ಟಣೆಯ ಹಿಂಬದಿಯ ಗುಡಾರದೊಳಕ್ಕೆ ಹೋಗುತ್ತಿದ್ದರು. ಬಯಲಾಟದಲ್ಲಿಯಂತೆಯೇ ಗ್ರೀಕ್ ರುದ್ರನಾಟಕದಲ್ಲಿಯೂ ಪಟ, ಪರದೆ ಮೊದಲಾದ ದೃಶ್ಯ ಸಲಕರಣೆಗಳು ಇರಲಿಲ್ಲ. ಕೆಲವೊಮ್ಮೆ ಗುಡಾರದ ಮುಂದನ್ನು ಬಣ್ಣಬಳಿದು ಅಲಂಕರಿಸಿ, ಆಟಕ್ಕೆ ಹಿನ್ನೆಲೆಯಾಗಿ ಮಾಡಿಕೊಳ್ಳುತ್ತಿದ್ದರು- ಬಟ್ಟಬಯಲಲ್ಲಿ ನಡುಹಗಲಲ್ಲಿ ಆಟವಾಡುತ್ತಿತ್ತಾದ್ದರಿಂದ ರಂಗಪ್ರಸಾಧನೆಗೆ ಭ್ರಾಮಕ ಸಾಧನಗಳ ಆವಶ್ಯಕತೆಯಾಗಲಿ ಪ್ರಯೋಜನವಾಗಲಿ ಅಷ್ಟು ಇರಲೂ ಇಲ್ಲ.

ಗ್ರೀಕ್ ನಾಟಕಗಳು ಬೆಳಗಿನಿಂದ ಬೈಗಿನವರೆಗೆ ಬಯಲಿನಲ್ಲಿ ನಡೆಯುತ್ತಿದ್ದವು. ಮೇಲೆ ಬಾನು, ಕೆಳಗೆ ನೆಲ, ಸುತ್ತ ಮೋಡು. ದುಂಡಗೆ ಸುತ್ತ ಕೆಡೆದಿದ್ದ ಕಲ್ಲು ಬಂಡೆಗಳನ್ನು ಕೆತ್ತಿ ಮಾಡಿದ ಕೂರೆಡೆಗಳು ಒಂದರ ಹಿಂದೆ ಒಂದು, ಒಂದರ ಮೇಲೆ ಒಂದು ಎದ್ದು ಸಾಲುಗೊಂಡ ಪ್ರೇಕ್ಷಕಾಂಗಣ. ನಡುವೆ ಅಮೃತಶಿಲೆ ಹದ್ದಿಸಿದ್ದ ಹರವಾದ ಬಟ್ಟಕಣದ ಮೇಳರಂಗ. ಅದರ ಒಂದು ಅಂಚಿನಲ್ಲಿ ಪ್ರೇಕ್ಷಕಾಂಗಣಕ್ಕೆ ಎದುರಾಗಿ ಹಾಕಿದ ಅಟ್ಟಣೆಯು ನಟರಂಗ. ಅದರ ಹಿಂದೆ ಗುಡಾರದ ಅಥವಾ ಕಲ್ಲುಕಟ್ಟಡದ ನೇಪಥ್ಯ. ಇದು ಸ್ಥೂಲವಾಗಿ ಗ್ರೀಕ್ ನಾಟಕಶಾಲೆಯ ಚಿತ್ರ. ನಾಟಕ ನೋಡುವುದಕ್ಕೆ ಊರಿಗೆ ಊರೇ ಅಲ್ಲಿ

ನೆರೆಯುತ್ತಿತ್ತು. ನಾಟಕ ದಿಯೊನೂಸೊಸ್ ದೇವತೆಯ ಉತ್ಸವದ ಅಂಗ. ಆ ಉತ್ಸವ ರಾಜ್ಯದ ಉತ್ಸವ. ಅದರಲ್ಲಿ ಭಾಗವಹಿಸುವುದು ಪ್ರತಿಯೊಬ್ಬ ಪ್ರಜೆಯ ಧರ್ಮ. ಹೀಗಾಗಿ ಇಡಿಯ ಪಟ್ಟಣವೇ ಪ್ರೇಕ್ಷಕ ವೃಂದವಾಗುತ್ತಿತ್ತು. ದೊಡ್ಡ ದೊಡ್ಡ ನಾಟಕಾಂಗಣಗಳಲ್ಲಿ ಇಪ್ಪತ್ತ ರಿಂದ ಮೂವತ್ತು ಸಾವಿರದ ವರೆಗೆ ಜನ ಹಿಡಿಸುತ್ತಿತ್ತು. ದಿಯೊನೂಸೊಸ್ ದೇವತೆಯ ಅರ್ಚಕ, ರಾಜ್ಯನಾಯಕರು, ಹೊರದೇಶದ ರಾಯಭಾರಿಗಳು, ಮೇಲಾಟದ ತೀರ್ಪಿಗರು ಮೊದಲಾದ ಮಾನ್ಯರಿಗೆ ಮುಂದಿನ ಸಾಲಿನಲ್ಲಿ ಅಮೃತಶಿಲೆಯ ಪೀಠಗಳಿದ್ದುವು.

ಪ್ರತಿ ವರ್ಷದ ಜಾತ್ರೆಯ ರುದ್ರನಾಟಕ ಸ್ಪರ್ಧೆಯಲ್ಲಿಯೂ ಮೂವರು ರುದ್ರಕವಿಗಳಿಗೆ ತಮ್ಮ ನಾಟಕಗಳನ್ನು ಆಡಿಸಲು ಅವಕಾಶವಿತ್ತು, ಗೆದ್ದವರಿಗೆ ಬಹುಮಾನ ಕೊಡುತ್ತಿತ್ತು. ಒಬ್ಬೊಬ್ಬ ಕವಿಯೂ ಮೂರು ರುದ್ರನಾಟಕಗಳನ್ನೂ ಕೊನೆಯಲ್ಲಿ ಒಂದು ಅಣಕ ನಾಟಕವನ್ನೂ ಪ್ರದರ್ಶಿಸಬೇಕಾಗಿತ್ತು. ಒಂದೊಂದು ದಿನದ ಉತ್ಸವವೂ ಒಂದೊಂದು ಹರ್ಷನಾಟಕದಿಂದ ಕೊನೆಗೊಳ್ಳುತ್ತಿತ್ತು. ಒಂದು ಹಗಲು ಒಬ್ಬ ಕವಿ ತೋರಿಸುವ ಮೂರು ರುದ್ರನಾಟಕಗಳೂ ಒಂದೇ ದೊಡ್ಡ ಕಥೆಯ ಪರಿವಿಡಿಯಾಗಿ ಬರುವ ಮೂರು ಪ್ರಕರಣಗಳನ್ನು ಕುರಿತದ್ದಾಗಿ ಪರಸ್ಪರ ಸಂಬಂಧವುಳ್ಳವಾಗಿದ್ದಾಗ ಆ ಗುಂಪಿಗೆ ಮುಕ್ಕೂಟ ನಾಟಕವೆಂದು ಹೆಸರು ಬರುತ್ತಿತ್ತು. ಅಣಕ ನಾಟಕವೂ ಅದಕ್ಕೇ ಸಂಬಂಧಪಟ್ಟಿದ್ದರೆ ಒಟ್ಟಿಗೆ ನಾಲ್ಕೂಟ ನಾಟಕವೆಂದು ಹೆಸರು ಪಡೆಯುತ್ತಿತ್ತು. ಆಯಿಸ್ಕುಲೊಸ್ ಮುಕ್ಕೂಟ ನಾಟಕಗಳನ್ನು ಕಟ್ಟಿ ಪ್ರಸಿದ್ಧನಾಗಿದ್ದಾನೆ. ಸೊಫೊಕ್ಲೇಸೂ, ಯುರಿಪಿದೇಸೂ ತನಿ ನಾಟಕಗಳನ್ನೇ ಬಳಕೆಗೆ ತಂದರು.

ಇಲ್ಲಿಯವರೆಗೂ ಬಲುಪಾಲು ಗ್ರೀಕ್ ರುದ್ರನಾಟಕದ ಹೊರಮೈಯನ್ನೇ ಕುರಿತು ಹೇಳಿತು. ಇನ್ನು ಅದರ ಒಳಗನ್ನು ಕುರಿತು ಎರಡು ಮಾತುಗಳನ್ನು ಹೇಳಬಹುದು. ಗ್ರೀಕ್ ರುದ್ರನಾಟಕಗಳ ವಸ್ತುವಿಗೆ ಆಕರ ಗ್ರೀಕ್ ಪುರಾಣ ಕಥೆಗಳೆಂದು ಆಗಲೇ ಹೇಳಿದೆ. ಆ ಪುರಾಣ ಕಥೆಗಳಲ್ಲಿ ಸಾಮಾನ್ಯವಾಗಿ ಎದ್ದು ಕಾಣುವ ಎರಡು ತತ್ವಗಳೆಂದರೆ:

ಆಳು ಅರಿತು ಆಗಲಿ ಅರಿಯದೆ ಆಗಲಿ ಮಾಡಿದ ತಪ್ಪಿಗೆ ಶಿಕ್ಷೆ ಅನುಭವಿಸಿಯೇ ತೀರಬೇಕು ಎಂಬ ಪಾಪ ಪ್ರಾಯಶ್ಚಿತ್ತ ವಾದ; ಮತ್ತು, ಮನುಷ್ಯನಿಗೂ ವಿಧಿಗೂ ನಿರಂತರವಾಗಿ ನಡೆಯುವ ಹೋರಾಟದಲ್ಲಿ ಕೊನೆಗೆ ಗೆಲ್ಲುವುದು ವಿಧಿಯೇ ಎಂಬ ನಿಯತಿ ವಾದ. ವಿಧಿಯಷ್ಟು ಬಲವತ್ತಾದ್ದು ಬೇರೆಯಾವ ಶಕ್ತಿಯೂ ಇಲ್ಲ. ಮನುಷ್ಯರ ಮಾತಿರಲಿ, ದೇವತೆಗಳೂ ವಿಧಿಗೆ ಬಾಗಬೇಕು. ದೇವೇಂದ್ರ ಜ್ಯೂಸ್ ಕೂಡ ದೇವ ಮಾನವರನ್ನು ಆಳುವುದು ಈ ವಿಧಿಯ ನೆರವಿನಿಂದ, ಅದಕ್ಕೆ ಹೊಂದಿಕೊಂಡು ನಡೆದು. ಈ ವಿಧಿ ಹೊರಗಿನ ಯಾವುದೋ ಒಂದು ಕುರುಡು ಶಕ್ತಿಯಾಗಿರಬಹುದು. ಈ ದೃಷ್ಟಿಯೇ ಹೆಚ್ಚು. ಇಲ್ಲವೆ, ವ್ಯಕ್ತಿಯ ಒಳಗೇ ನೆಲಸಿದ್ದು ಅವನಿಗೇ ತಿಳಿಯದಂತೆ ಅವನನ್ನು ಪ್ರೇರಿಸುವ ಯಾವುದೋ ಒಳಶಕ್ತಿಯಾಗಿರಬಹುದು. ಗ್ರೀಕ್ ರುದ್ರನಾಟಕಗಳು ಸಾಮಾನ್ಯವಾಗಿ ಮೇಲಿನ ಎರಡು ತತ್ತ್ವಗಳ ಮೇಲೆ ಕಟ್ಟಿವೆ. ಪಾಪಕ್ಕೆ ಪ್ರಾಯಶ್ಚಿತ್ತ, ಮನುಷ್ಯನಿಗೂ ವಿಧಿಗೂ ಹೋರಾಟ—ಇದೇ ಗ್ರೀಕ್ ರುದ್ರನಾಟಕದ ಜೀವಾಳ.

ಪಾಪ ಪ್ರಾಯಶ್ಚಿತ್ತ : ಒಬ್ಬನು ಮಾಡಿದ ಪಾಪ ತನ್ನಲ್ಲಿಯೇ ಕೊನೆಗೊಳ್ಳಬಹುದು. ಇಲ್ಲವೆ, ತಲೆಯಿಂದ ತಲೆಗೆ ಹಬ್ಬಿ ಮನೆತನದ ಉದ್ದಕ್ಕೂ ಹರಿಯುವ ಪಾಪಸೂತ್ರವಾಗಿ ಪರಿಣಮಿಸಬಹುದು. ಇಂಥ ಪಾಪಪರಂಪರೆಯ ಕಥೆಯೊಂದನ್ನು ಅಯ್‌ಸ್ಕಿಲೊಸ್ ಕವಿ ತನ್ನ 'ಒರಸ್ಟೈಯ' ಎಂಬ ಮುಕ್ಕೂಟ ನಾಟಕದಲ್ಲಿ ಚಿತ್ರಿಸಿದ್ದಾನೆ. ದೇವತೆಗಳ ತಣ್ಪನ್ನೂ ನಾಡೊಳ್ಪನ್ನೂ ಗಳಿಸುವುದಕ್ಕಾಗಿ ತನ್ನ ಕರುಳ ಮಗಳನ್ನು ಬಲಿಕೊಟ್ಟ ದೊರೆಯನ್ನು ಸೇಡಿನಿಂದ ರಾಣಿ ಇರಿದು ಕೊಲ್ಲುವುದೂ; ಕೊಲೆಯಾದ ತಂದೆಯ ಪ್ರೇತಶಮನಕ್ಕಾಗಿ ಮಗ ತಾಯನ್ನು ಕೊಲೆ ಮಾಡುವುದೂ; ತಾಯ್‌ಕೊಲೆಯ ಪಾಪದಿಂದ ಮಗ ಸೇಡುಮಾರಿಯರಾದ ಉಗ್ರಕನ್ನಿಕೆಯರ ಕೈಯಲ್ಲಿ ಸಿಕ್ಕಿ ಪಾಡುಪಟ್ಟು, ಕೊನೆಗೆ ದೇವತೆಯ ಕೃಪಾಪ್ರಸಾದದಿಂದ ಬಿಡುಗಡೆ ಹೊಂದುವುದೂ ಆ ಮುಕ್ಕೂಟ ನಾಟಕದಲ್ಲಿ ನಿರೂಪಿತವಾಗಿದೆ.

ಮನುಷ್ಯ-ದೇವತೆ-ವಿಧಿ: ಮನುಷ್ಯನು ಮದಿಸಿ ದೇವಮಾನವ

ಧರ್ಮಗಳನ್ನು ಮೀರಿಯೋ, ಇಲ್ಲವೆ, ದೇವತೆಗಳನ್ನು ಕೆಣಕಿಯೋ ಕೆರಳಿಸಿಯೋ ವಿಧಿಯ ಕೈಗೆ ಸಿಕ್ಕಿ ನರಳುತ್ತಾನೆ; ಕೊನೆಗೆ ಮುರಿದು ಬೀಳುತ್ತಾನೆ. ಒಂದು ಅರ್ಥದಲ್ಲಿ ಗ್ರೀಕರ ದೃಷ್ಟಿಯಲ್ಲಿ ಮದಕ್ಕಿಂತ ಹೆಚ್ಚಿನ ಪಾಪವೇ ಇಲ್ಲ. ಗ್ರೀಕ್ ರುದ್ರನಾಟಕಗಳ ಕೊನೆಯಲ್ಲಿ ಸಾಮಾನ್ಯವಾಗಿ ಬರುವ ಮೇಳದ ಭರತವಾಕ್ಯ “ಸೊರ್ಕಿದರ ಸೊರ್ಕು ನುಡಿ ತೆತ್ತಪುದು ದಂಡಮನ್”, ಇಲ್ಲವೆ, “ಬಂದುದನೆ ಕೊಂಡುಂಡು ತಾಳ್ದವನೆ ಜಾಣನ್; ತಬ್ಗಿ ನಡೆದೊಡೆ ದೇವನೊಲ್ಲದೆಯೆ ಮಾಣನ್” ಎಂಬ ನೀತಿಯನ್ನು ಸಾರುವುದಾಗಿರುತ್ತದೆ. ಒಂದಲ್ಲ ಒಂದು ಬಗೆಯಲ್ಲಿ ವಿಧಿಯ ಪ್ರಾಬಲ್ಯವನ್ನು ಪ್ರತಿಪಾದಿಸದ ಗ್ರೀಕ್ ರುದ್ರನಾಟಕವೇ ಇಲ್ಲವೆನ್ನಬಹುದು. ವಿಧಿಯನ್ನು ಕೆಣಕಿ ಬದುಕಿದವರಿಲ್ಲ.

ಗ್ರೀಕರು ಜನ್ಮಾಂತರವನ್ನು ನಂಬಿದವರಲ್ಲವಾದ್ದರಿಂದ, ಈ ಜನ್ಮದ ಕಷ್ಟ ಸುಖಗಳಿಗೆ ಹೋದ ಜನ್ಮದ ಪಾಪ ಪುಣ್ಯಗಳ ಕಾರಣವನ್ನು ಹೇಳುವಂತಿರಲಿಲ್ಲ. ಮಾಡುವ ಕರ್ಮಕ್ಕೂ ಅನುಭವಿಸುವ ಫಲಕ್ಕೂ ಪ್ರತ್ಯಕ್ಷ ಸಂಬಂಧ ಕಾಣದೆ ಹೋದಾಗ, ಶಿಕ್ಷೆಯ ಸಮರ್ಥನೆಗಾಗಿ ಏನಾದರೊಂದು ನ್ಯಾಯವನ್ನು ಹುಡುಕಬೇಕಾಗಿ ಬಂದು, ಪಾಪದ ವಂಶಪರಂಪರತೆಯ ತತ್ವವನ್ನೂ ವಿಧಿತತ್ವವನ್ನೂ ಕಟ್ಟಿದರು.

14312

ಆಳ ಬಾಳಿನ ಹೆಣಗಾಟ ಹೋರಾಟಗಳು ಈ ರುದ್ರನಾಟಕಗಳಲ್ಲಿ ಚೆನ್ನಾಗಿ ಚಿತ್ರಿತವಾಗಿವೆ. ಮಹಾವ್ಯಕ್ತಿಯೊಬ್ಬನು ಯಾವುದೋ ಒಂದು ಸತ್ಯಕ್ಕೆ ಧರ್ಮಕ್ಕೆ ಪ್ರೇಮಕ್ಕೆ ಅಭಿಮಾನಕ್ಕೆ, ಇಲ್ಲವೆ, ಛಲಕ್ಕೆ ಕ್ರೋಧಕ್ಕೆ ಮದಕ್ಕೆ ಮತ್ಸರಕ್ಕೆ ಒಳಗಾಗಿ, ದುರ್ಭರ ಸನ್ನಿವೇಶದ ಸುಳಿಯಲ್ಲಿ ಸಿಕ್ಕಿಕೊಂಡು, ವಿಧಿಲೀಲೆಯ ಕೈಗೊಂಬೆಯಾಗಿ ಕೊನೆಗೆ ಕೈಗುಂದಿ ಮುರಿದು ಬೀಳುವ ಘರ್ಷಣಮಯ ಜೀವನದ ಚಿತ್ರದಲ್ಲಿ ಒಂದು ಭೀಷಣ ಸುಂದರತೆ ಇದೆ, ರುದ್ರ ರಮಣೀಯತೆ ಇದೆ. ರುದ್ರವೀರನು ಪ್ರಯತ್ನಿಸುವ ಸಾಹಸ ಪರಾಕ್ರಮಗಳಲ್ಲಿ, ಅನುಭವಿಸುವ ಯಾತನೆ ಸಂಕಟಗಳಲ್ಲಿ, ಅವನು ಸಾಧಿಸಹೋಗುವ ಆದರ್ಶ ಧ್ಯೇಯಗಳಲ್ಲಿ, ಸಂಧಿಸುವ ಪರಾಭವ ಪತನಗಳಲ್ಲಿ ಮಾನವ ಮಹತ್ವವನ್ನು ತೊಳಗಿ ಬೆಳಗುವ, ಮಾನವ ಹೃದಯವನ್ನು ಕಲಕಿ ಕೆರಳಿಸುವ ಒಂದು

ಅಲೌಕಿಕ ಶಕ್ತಿಯಿದೆ. ವಿಧಿಗೆ ಬಲಿಬಿದ್ದ ರುದ್ರನಾಯಕನ ದುರಂತ ದುರ್ಮರಣಗಳಲ್ಲಿ ಕೂಡ ಮಾನವನ ಅಜೇಯ ಪೌರುಷ ಮೆರೆದು ನಲಿಯುವುದನ್ನು ನಾವು ಕಾಣಬಹುದು. ಬಿದ್ದವನು ಸೋಲಲೇಬೇಕಾಗಿಲ್ಲ, ಎದ್ದವನೇ ಗೆದ್ದವನಾಗಬೇಕಾಗಿಲ್ಲ ಎಂಬುದಕ್ಕೆ ನಿದರ್ಶನಗಳಾಗಿವೆ ಇಂಥ ವಿಧಿಹತ ಮಹಾಪುರುಷರ ರೌದ್ರಮಯ ದುರಂತ ಜೀವನ.

ರುದ್ರನಾಟಕ ನಾಯಕನ ಮರಣದಲ್ಲೇ ಮುಕ್ತಾಯಗೊಳ್ಳಬೇಕಾಗಿಲ್ಲ. ಅಯಸ್ಕಿಲೊಸ್ಸಿನ ಹಲವು ನಾಟಕಗಳಲ್ಲಿ ನಾಯಕರು ಮಾನಹಾನಿ, ವೈಭವನಾಶ, ತೇಜೋವಧೆ ಪಟ್ಟರೂ ದೈಹಿಕ ಮರಣ ಹೊಂದುವುದಿಲ್ಲ. ಒಳ ಸತ್ತು ಹೊರ ಸಾಯದೇ ಉಳಿದುಕೊಳ್ಳುವುದೂ ಒಂದು ಬಗೆಯ ರೌದ್ರವೆ. 'ಪಾರಸಿಕರು' ರುದ್ರನಾಟಕದಲ್ಲಿ ಕ್ಷಯಾರ್ಷನು ಸ್ವತಂತ್ರ ಜನತೆಯೊಂದನ್ನು ತನ್ನ ನೊಗದಡಿ ತರಲೆಳಸಿ ಹೆರನಾಡ ಮೇಲೆ ದಂಡೆತ್ತಿಹೋಗಿ ಜನ, ಧನ, ಸಂಪತ್ತು, ಸಾಮ್ರಾಜ್ಯ—ಎಲ್ಲವನ್ನೂ ನೀಗಿಕೊಂಡು ಚಿಂದಿಯುಟ್ಟು ಬಿಕಾರಿಯಂತೆ ಮನೆಗೆ ಹಿಂದಿರುಗುತ್ತಾನೆ. ಆದರೆ ಸಾಯುವುದಿಲ್ಲ. 'ಯೂಮೆನಿದೇಸ್' ರುದ್ರನಾಟಕದಲ್ಲಿ ನಾಯಕ ಒರೆಸ್ತೇಸ್ ತಾಯ್ಕೊಲೆಯ ಪಾಪಕ್ಕಾಗಿ ಉಗ್ರಕನ್ನಿಕೆಯರ ಕೈಯಲ್ಲಿ ಪಡಬಾರದ ಪಾಡುಗಳನ್ನೆಲ್ಲ ಪಟ್ಟರೂ, ಕೊನೆಗೆ ಅಥೇನೇ ದೇವತೆಯ ಕೃಪಾಪ್ರಸಾದದಿಂದ ಬಿಡುಗಡೆ ಹೊಂದುತ್ತಾನೆ. 'ಬದ್ಧ ಪ್ರೊಮೇಥ್ಯೂಸ್' ರುದ್ರನಾಟಕದಲ್ಲಿ ನಾಯಕನಾದ ಅಮರ ಪ್ರೊಮೇಥ್ಯೂಸ್ ಸಾಯುವುದಿಲ್ಲ; ಸಾಯಲಾರ. ಮರ್ತ್ಯಮಾನವನಿಗೆ ಅಗ್ನಿದಾನ ಮಾಡಿದ ಮಹಾಪರಾಧಕ್ಕಾಗಿ ಜ್ಯೂಸ್ ದೇವನ ಆಗ್ರಹಕ್ಕೆ ಪಾತ್ರನಾಗಿ ಕಗ್ಗಾಡ ನಡುವೆ ಬಂಡೆಯೊಂದಕ್ಕೆ ಬಿಗಿವಡೆದು ಕೇಳುವವರಿಲ್ಲದೆ ಪಾಡುಪಡುತ್ತಾನೆ. ದಿನವೂ ಒಂದು ಗಿಡುಗ ಎದೆಯ ಮೇಲೆ ಕೂತು ಕರುಳನ್ನು ಹೆಕ್ಕಿ ತಿನ್ನುತ್ತಿದ್ದರೆ ಓಡಿಸಲು ಕೈಯೆತ್ತಲಾರದೆ ದೇವತೆ ಯಾತನೆ ಅನುಭವಿಸುತ್ತಿರುತ್ತಾನೆ. ಸೊಫೊಕ್ಲೇಸಿನ 'ಒಯ್ದಿಪೌಸ್ ದೊರೆ' ರುದ್ರನಾಟಕದಲ್ಲಿಯೂ ಹೀಗೆಯೆ. ರುದ್ರನಾಯಕ ಸಾಯುವುದಿಲ್ಲ. ಅರಿಯದೆಯೆ ತನ್ನ ತಾಯಲ್ಲಿ ನೆರೆದ ಪಾತಕದ ಪ್ರಾಯಶ್ಚಿತ್ತಕ್ಕಾಗಿ ತಾನೇ ಕಣ್ಣಿರಿದು

ಕೊಂಡು ದೇಶಭ್ರಷ್ಟನಾಗಿ ದೇಹಹೊತ್ತುಕೊಂಡು ಅಲೆಯುತ್ತಿರುತ್ತಾನೆ. ಹೀಗೆ, ರುದ್ರನಾಟಕದ ರುದ್ರತೆ ಇರುವುದು ದುರಂತ ಮರಣದಲ್ಲಲ್ಲ. ರುದ್ರನಾಯಕನ ಕೆಚ್ಚು ನೆಚ್ಚುಗಳಲ್ಲಿ, ಹೆಣಗು ಹೋರುಗಳಲ್ಲಿ, ಅಳಲು ಕೊರಗುಗಳಲ್ಲಿ, ಬೀಳು ಮುರಿತಗಳಲ್ಲಿ. ನಾಯಕ ಕೊನೆಗೆ ಸಾಯದೆ ಬದುಕಿರಬಹುದು. ಆದರೆ ರುದ್ರನಾಯಕನ ಗಭೀರ ಜೀವನದ ಘೋರ ಘರ್ಷಣೆಗಳೂ ವೀರ ಯಾತನೆಗಳೂ ರುದ್ರವಾಗಿರುತ್ತವೆ. ನಮ್ಮ ನೆನಪಿನಲ್ಲಿ ನಂದದೆ ಕನಲಿಡುತ್ತಿರುವುದು ಆ ದುರದೃಷ್ಟ ಮಹಾವ್ಯಕ್ತಿಯ ರುದ್ರ ಜೀವನ; ಅವನು ಕೊನೆಗೆ ಸತ್ತದ್ದಾಗಲಿ, ಸಾಯದೆ ಬದುಕಿದ್ದಾಗಲಿ ಅಲ್ಲ.

ಗ್ರೀಕ್ ಪುರಾಣ ಕಥೆಗಳಲ್ಲಿ ದೇವತೆ, ಮನುಷ್ಯ, ಪ್ರಕೃತಿ—ಈ ಮೂರಕ್ಕೂ ಪರಸ್ಪರ ನಿಕಟ ಸಂಬಂಧವಿದೆ. ವಿಶ್ವವಿಶಾಲ ಪ್ರಕೃತಿ ರಂಗದಲ್ಲಿ ದೇವತೆಗಳೂ ಮನುಷ್ಯರೂ ಒಡನಾಡಿಗಳು, ಇಲ್ಲವೆ, ಎದುರಾಳಿಗಳು. ಮಾನವನ ಗುಣಾವಗುಣಗಳೂ ಬಲದೌರ್ಬಲ್ಯಗಳೂ ರಾಗದ್ವೇಷಗಳೂ ಮಿಗಿಲಳತೆಯಲ್ಲಿ ದೇವತೆಗಳಲ್ಲಿಯೂ ಇವೆ. ಅತಿಮಾನುಷ ಮಹಿಮೆಗಳಿಂದ ದೇವತ್ವಕ್ಕೇರಿದ ಮನುಷ್ಯರಿದ್ದಾರೆ. ನೈಚ್ಯದಿಂದ ಭೂಪತನವಾದ ದೇವತೆಗಳಿದ್ದಾರೆ. ದೇವಮಾನವಸಂಬಂಧದಿಂದ ಹುಟ್ಟಿದ ಮಹಾವೀರರು ಹಲವರಿದ್ದಾರೆ. ದೇವತೆ ಮನುಷ್ಯನಿಗೆ ನೆರವಾಗಿದ್ದರೆ, ಮನುಷ್ಯ ದೇವತೆಯ ಬಂಧನ ಬಿಡಿಸಿರುವುದೂ ಉಂಟು. ಮನುಷ್ಯರ ವ್ಯವಹಾರಗಳಲ್ಲಿ ತಲೆಹಾಕಿ ಗೊಂದಳವೆಬ್ಬಿಸುವ ದೇವತೆಗಳಿದ್ದರೆ, ಸ್ವರ್ಗ ಪಾತಾಳಗಳನ್ನು ಹೊಕ್ಕು ದೇವತೆಗಳನ್ನು ಅಲ್ಲಾಡಿಸುವ ನರಪುಂಗವರಿದ್ದಾರೆ. ಸುತ್ತಣ ಪ್ರಕೃತಿ ಜಡವಸ್ತುವಲ್ಲ. ದೇವಮಾನವ ವ್ಯಾಪಾರಗಳಲ್ಲಿ ಜೀವಂತ ಭಾಗವಹಿಸುವ ಚೈತನ್ಯ ಸ್ವರೂಪಿ ಆ ಪ್ರಕೃತಿ. ಗ್ರೀಕ್ ರುದ್ರನಾಟಕಗಳಲ್ಲಿಯೂ ಈ ಸ್ವರೂಪಗಳೆಲ್ಲ ಚೆನ್ನಾಗಿ ಒಡೆದು ಮೂಡಿವೆ. ಗ್ರೀಕರ ಹಡಗುಪಡೆ ಔಲಿಸ್ ಬಂದರಿನಲ್ಲಿ ನೆರೆದಿರುವಾಗ, ಪಡೆವಳನಾದ ಅಗಮೆಮ್ನೋನ್ ದೊರೆ ಹಿಂದೆ ತಾನು ದೇವತೆಗೆ ಹರಕೆ ಹೊತ್ತಿದ್ದಂತೆ ತನ್ನ ಮಗಳು ಇಫಿಗೆನೈಯಳನ್ನು ಬಲಿಕೊಟ್ಟ ಹೊರತು ಗಾಳಿ ತೀಡುವುದಿಲ್ಲ. ಗಂಡನನ್ನು ಕೊಂದ

ತಾಯಿ ಕ್ಲುತವೆನ್ನೆಸ್ತ್ರಳನ್ನು ಕೊಲೆಮಾಡುವಂತೆ ಮಗ ಒರೆಸ್ತೇಸನ್ನು ಪ್ರೇರಿಸುವುದೂ ಮುಂದೆ ಅಥೇನೇ ದೇವತೆಯು ನ್ಯಾಯಾಸ್ಥಾನದಲ್ಲಿ ತಾಯ್‌ಗುಲಿಯ ಪರವಾಗಿ ವಾದಿಸುವುದೂ ಅಪೊಲ್ಲೋನ್ ದೇವತೆ.

ಗ್ರೀಕ್ ರುದ್ರನಾಟಕಕಾರರು ತಮಗೆ ಮನಬಂದ ವಿಷಯವನ್ನು ಎತ್ತಿಕೊಂಡು ನಾಟಕವನ್ನು ರಚಿಸುವಂತಿರಲಿಲ್ಲ. ದೇವತೆಯ ಉತ್ಸವದ ಅಂಗವಾಗಿ, ಮತಪ್ರಕ್ರಿಯೆಯ ಅನುಸಾರವಾಗಿ ನಾಟಕವಾಡುತ್ತಿದ್ದದ್ದರಿಂದ ನಾಟಕ ವಸ್ತುವನ್ನು ಪುರಾಣ ಕಥೆಗಳಿಂದಲೇ ತೆಗೆದುಕೊಳ್ಳುವ ಸಂಪ್ರದಾಯ ಬಂದು ಹೋಯಿತು. ಯಾವ ನಾಟಕಕಾರನೂ, ಅವನು ಎಷ್ಟೇ ಪ್ರತಿಭಾವಂತನಿರಲಿ, ಆ ಸಂಪ್ರದಾಯವನ್ನು ಮುರಿಯುವ ಯೋಚನೆ ಮಾಡಲಿಲ್ಲ. ಇದರಿಂದ, ನಾಟಕದ ವಸ್ತುವಿನ ಆಯ್ಕೆಗೆ ಒಂದು ಪರಿಮಿತಿ ಉಂಟಾಗಿ, ಒಬ್ಬನು ತೆಗೆದುಕೊಂಡ ವಿಷಯವನ್ನೇ ಮತ್ತೊಬ್ಬನೂ ತೆಗೆದುಕೊಳ್ಳಬೇಕಾಯಿತು. ಆದರೂ, ಒಂದೇ ಪುರಾಣ ಕಥೆಯನ್ನು ತೆಗೆದುಕೊಂಡು ಹಲವು ಕವಿಗಳು ನಾಟಕ ಕಟ್ಟಿದ್ದರೂ ಒಬ್ಬೊಬ್ಬನೂ ತನಗೆ ಬೇಕಾದ ಮಾರ್ಪಾಟುಗಳನ್ನೇನೋ ಮಾಡಿಕೊಂಡಿದ್ದಾನೆ. ಒಟ್ಟು ಕಟ್ಟಡ, ಪಾತ್ರನಿರೂಪಣೆ, ವಸ್ತುಪ್ರತಿಪಾದನೆ ಮೊದಲಾದುವುಗಳಲ್ಲಿ ವ್ಯಕ್ತಿವೈಶಿಷ್ಟ್ಯ ಕಾಣಬರುತ್ತದೆ. ಅಯ್‌ಸ್ಕುಲೊಸ್ಸಿನಲ್ಲಿ ದೇವಪಾತ್ರಗಳಿಗೆ ಉನ್ನತ ಸ್ಥಾನವಿದೆ, ಅಗ್ರಮರ್ಯಾದೆ ದೊರೆಯುತ್ತದೆ, ದಿವ್ಯಗೌರವ ಸಲ್ಲುತ್ತದೆ. ಯುರಿಪಿದೇಸ್ ದೇವತೆಗಳನ್ನು ಅವರ ಅದೈವನಡತೆಗಾಗಿ ಲೇವಡಿಮಾಡುತ್ತಾನೆ; ಅವರ ಪೋಕರಿತನಗಳನ್ನೆಲ್ಲ ಬಯಲಿಗೆಳೆದು ಕುಚೋದ್ಯಮಾಡುತ್ತಾನೆ. ಸೊಫೊಕ್ಲೇಸ್ ಯಾವ ಅತಿಗೂ ಹೋಗುವುದಿಲ್ಲ. ಮಾದರಿಯ ಗ್ರೀಕ್ ಬಾಳಿನ ಹಿರಿಯ ತತ್ವಗಳಲ್ಲಿ ಒಂದಾದ ಸುಮಿತಿ ಅಥವಾ ಹಾಳಿತ ಅವನಲ್ಲಿ ಚೆನ್ನಾಗಿ ಕಾಣಬರುತ್ತದೆ. ಅಯ್‌ಸ್ಕುಲೊಸ್ಸಿನಲ್ಲಿ ಮನುಷ್ಯರಿಗಿಂತ ದೇವತೆಗಳಿಗೆ ಪ್ರಾಧಾನ್ಯ ಹೆಚ್ಚು. ಅವನ ಬೃಹದ್ ವಿಶ್ವದೃಷ್ಟಿಯಲ್ಲಿ ಮನುಷ್ಯನು ದೈವಿಕ ಶಕ್ತಿಗಳ ಮತ್ತು ವಿಧಿಲೀಲೆಯ ವ್ಯಾಪಾರಗಳಿಗೆ ಹಿನ್ನೆಲೆ ಅಥವಾ ಸಾಧನ ಮಾತ್ರ. ದೇವತಾಭೂಯಿಷ್ಠವಾದ ಅಯ್‌ಸ್ಕುಲೊಸ್ಸಿನ ನಾಟಕವನ್ನು ಸೊಫೊಕ್ಲೇಸ್, ಅದರ

ದೈವೀ ಪ್ರಭಾವವನ್ನು ಕಳೆಯದೆ, ಮಾನವೀಕರಿಸಿದೆನೆನ್ನಬಹುದು. ಅವನಲ್ಲಿ ಮನುಷ್ಯ ವ್ಯಕ್ತಿಗಳಿಗೂ ಮನುಷ್ಯ ವ್ಯಾಪಾರಕ್ಕೂ ಪ್ರಾಧಾನ್ಯ ವಿದ್ದು, ಮಾನವ ಸ್ವಭಾವ ಪ್ರವೃತ್ತಿಗಳೂ ರಾಗದ್ವೇಷಗಳೂ ಸೆಣಸು ಹೋರಾಟಗಳೂ ಚೆನ್ನಾಗಿ ನಿರೂಪಿತವಾಗಿವೆ. ಆದರೆ ಸೊಫೊಕ್ಲೇಸ್ ಆದರ್ಶವಾದಿ. "ಯುರಿಪಿದೇಸ್ ಮನುಷ್ಯರನ್ನು ಅವರು ಹೇಗಿದ್ದಾರೋ ಹಾಗೆ ಚಿತ್ರಿಸುತ್ತಾನೆ; ನಾನು ಅವರು ಹೇಗಿರಬೇಕೋ ಹಾಗೆ ಚಿತ್ರಿಸುತ್ತೇನೆ" ಎಂದು ಸೊಫೊಕ್ಲೇಸೇ ಹೇಳುತ್ತಿದ್ದನು. ಯುರಿಪಿದೇಸಿನಲ್ಲಿ ಮಾನವ ಸ್ವಭಾವದ ಸ್ವಸ್ವರೂಪ ನಿರೂಪಣೆಯಿದೆ. ಸೊಫೊಕ್ಲೇಸ್ ಆರಂಭಿಸಿದ ಪುರಾಣವ್ಯಕ್ತಿಗಳ ಮಾನವೀಕರಣ ಯುರಿಪಿದೇಸಿನಲ್ಲಿ ಪರಿಣತಿಗೊಂಡಿದೆ. ಯುರಿಪಿದೇಸಿನ ನಾಟಕಗಳಲ್ಲಿ ಚಿತ್ರಿತವಾಗಿರುವ ಮನುಷ್ಯಹೃದಯದ ದೋಷದೌರ್ಬಲ್ಯಗಳು, ಮಾರ್ದವಲಾಲಿತ್ಯಗಳು, ಪ್ರೇಮವಾತ್ಸಲ್ಯಗಳು ಉಳಿದಿಬ್ಬರಲ್ಲಿ ಅಷ್ಟು ಸ್ಫುಟವಾಗಿ ಕಾಣಬರುವುದಿಲ್ಲ.

ಯುರಿಪಿದೇಸಿನ ತರುವಾಯ ಗ್ರೀಕ್ ರುದ್ರನಾಟಕ ಒಮ್ಮೆಯೇ ಬರಡು ಬಿದ್ದು ಹೋಗಲಿಲ್ಲ. ಆದರೆ, ಉತ್ತಮ ಕೃತಿಗಳು ಯಾವುದೂ ಬರಲಿಲ್ಲ. ಅಯ್‌ಸ್ಕುಲೊಸ್, ಸೊಫೊಕ್ಲೇಸ್, ಯುರಿಪಿದೇಸ್–ಈ ಮೂವರೂ ಹಿಂದಿನವರ ಮತ್ತು ಮುಂದಿನವರ ಹೆಸರೊಂದೂ ತಲೆಯೆತ್ತದಂತೆ ಮೆಟ್ಟಿ ನಿಂತುಬಿಟ್ಟದ್ದಾರೆ. ಏಕಕಾಲದಲ್ಲಿ ಈ ಮೂವರು ಮಹಾಮೇಧಾವಿಗಳು ತಲೆದೋರಿ ಇನ್ನೂ ಮೊಳೆಯುವುದರಲ್ಲಿದ್ದ ಗ್ರೀಕ್ ರುದ್ರನಾಟಕವನ್ನು ತಮ್ಮ ಅಪ್ರತಿಮ ಪ್ರತಿಭೆಯ ವರ್ಚಸ್ಸಿನಿಂದ ಒಮ್ಮೆಗೇ ಅದರ ತುದಿನೆಲೆಗೆ ಕೊಂಡೊಯ್ದು ಬಿಟ್ಟದ್ದು ಅದರ ಮುಂದಿನ ವೃದ್ಧಿ ವಿಸ್ತರಣಗಳಿಗೆ ಒಂದು ಬಗೆಯಿಂದ ಅಡಚಣೆಯಾಯಿತೆನ್ನಬಹುದು. ಈ ಕಾರಣದಿಂದಲೇ ಗ್ರೀಕ್ ರುದ್ರನಾಟಕಗಳಲ್ಲಿ ಅಷ್ಟಾಗಿ ವೈವಿಧ್ಯ ಕಾಣುವುದಿಲ್ಲ, ವಸ್ತುವೈಶಾಲ್ಯವಿಲ್ಲ, ಬಹುಮುಖತೆಯಿಲ್ಲ. ಆದರೆ, ಅದರ ಉನ್ನತಿ ಮುಗಿಲನ್ನು ಮುಟ್ಟಿದೆ. ಆ ಜಾತಿಯ ಕೃತಿಗಳಲ್ಲಿ ಅವನ್ನು ಮೀರಿಸುವ ಕೃತಿ ಇಲ್ಲಿಯವರೆಗೂ ಹುಟ್ಟಿಲ್ಲ. ಗ್ರೀಕ್ ರುದ್ರನಾಟಕದ ನಭೋಮಂಡಲದಲ್ಲಿ ಶಾಶ್ವತವಾಗಿ ಪ್ರಕಾಶಿಸುವ ಅವರ

ಜ್ಯೋತಿಗಳು ಮೂರೇ—ಅಯ್‌ಸ್ಕುಲೊಸ್, ಸೊಫೊಕ್ಲೇಸ್, ಯುರಿಪಿದೇಸ್. ಬಾನು ಬೆಳಗವುದಕ್ಕೆ ಎಷ್ಟು ಸೂರ್ಯ ಚಂದ್ರರು ಬೇಕು?

ಕೆ. ವೆಂ. ರಾಘವಾಚಾರ್ಯ.

lyrical drama – భావప్రధాన

ಪಾರಸಿಕರು

[ಮೇಳ]

ಪಾರಸಿಕರಸಾಧ್ಯಬಲಂ
ಪೆರ್ಚಿದ ಹೆಲಸಿರಿಯೆ ಪೋಗೆ,
ನಾವುಳಿದೆವು ಸಚ್ಚಿಸವರ್
ತಾಯ್‌ನಾಡೊಳ್ ಕಾವಲಾಗಿ ;
ಆಯ್ದು ಕುಲದ ಪಿರಿಯರೆಂದು
ತನ್ನ ಪೊನ್ನ ರನ್ನದ ಕರು-
ಮಾಡಂಗಳೊಳೆಮ್ಮನಿಟ್ಟು,
ಮಲೆತ ಯವನರುರ್ಕ್ಕ ಮುರಿಯೆ
ತಾನೆ ಪೋದನೆಮ್ಮ ದೊರೆ,
ಸಾಸಿರ ಸತ್ರಪರ ವೊರೆ,
ಆರ್ಯ ದರ್ಯವೃಷನ ಮಗನ್,
ಶ್ರೀಕ್ಷಯಾರ್ಷ ಸಮಿತಭಗನ್.
ಪೋದವನೋ ಮರಳನೋ !
ಪೋದವನಾ ಪೋರಾಣ್ಮನ್,
ಪೋದವರಾ ಪೊನ್ನಾಳ್ಗಳ್
ಬಾರದೆ ಬಗೆ ಬೆದರುತಿಹುದು :
ತಲ್ಲಣಿಸುವುದುಸಿರು ಪಾರಿ
ಪೊಲ್ಲದೆಣಿಸಿ.
ಐಶ್ಯದ ತಿರುಳೆಲ್ಲ ಪೋಯ್ತು,
ಬಲ್ಲಾಳ್ಗಳ್ ! ಎಳೆಯನೊಡೆಯ !—
ಒಬ್ಬನಾಳೊ, ಕುದುರೆಯವನೊ,

ಪರ್ಸೆಕೊಸಗೆ ತಾರಸೇ!
ಪಿರಿಯ ಪಡೆ—ಸಿರಿಯ ಪಡೆ—
ಗೆಲುವ ಪಡೆ—ಕೊಲುವ ಪಡೆ—
ಸಗುತ ನಗುತ ಪೋದ ಪಡೆ—
ಅದರ ತಲೆಯೆ ಕಾಣದೆ!
ಅದರ ಸೆಲೆಯೆ ಕೇಳದೆ!

ಕುಣಿಕುಣಿಯುತ ಪೋಯ್ತು ಬಲಂ!
ಪಾರಸಿಕರಜೇಯಬಲಂ!
ಶ್ರೀಕ್ಷಯಾರ್ಷ ಪುಣ್ಯಫಲಂ,
ಅಕ್ಷಯಸಾಮ್ರಾಜ್ಯಬಲಂ!
ಓಲೆಯಟ್ಟಿ ದೊರೆಯ ದೊರೆ,
ತಲೆಯೊಳಿಟ್ಟು ನಡೆದು ಬರೆ,
ಗಾಳಿ ಬೀಸೆ, ಕೆರಳಿ ತೆರೆ,
ಹೊಮ್ಮಿ, ಚಿಮ್ಮಿ, ಮಿಸುಗೆ ನೊರೆ,
ಬೀಸಿ ಬರ್ಪ ಕಡಲ ಪೊಸಲ್
ನೆಲನ ನುಂಗಿಕೊಳುವುದೆನಲ್,
ನಾಡ ನಾಡ ರಾಯರೆಲ್ಲ
ಕೂಡ ಕೂಡ ನೆರೆದರೆಲ್ಲ,
ಐಶ್ವದ ಸರ್ವಸ್ವವೆಲ್ಲ—
ಸೂಸಪುರದ, ಎಕ್ಬಟನದ,
ಪರ್ಸದ ಪಲ ಪಳಮೆಪೊಳಲ,
ಪೊನ್ ಮಿಂಚುವ ಪಡೆಗಳೆಲ್ಲ—
ಕಿಳಿರ್ದು ನೆಗೆವ ಕುದುರೆಗಳುಂ,
ಮೊಳಗಿ ಪಾಯ್ವ ತೇರುಗಳುಂ,
ಕೆಚ್ಚೆದೆ ಕಲಿ ಕಾಲಾಳುಂ,

ಮೆಚ್ಚಿಸ ಪೆರ್ನಾವೆಗಳುಂ,
ರಾಜರಾಜನಾಣೆಯಾಯ್ತು !
ಹೆಚ್ಚಿದ ಹಲಸಿರಿಯೆ ಪೋಯ್ತು !
ಪರ್ಷದ ಪಿರಿಯರಸುಕುಲಂ—
ಅಮಿಸ್ತ್ರೀಸ್, ಅರ್ತಫರಣ,
ಮೇಗಬಾಸ್ಲ, ಅಸ್ತ್ರಾಕ್ಷಿಸ್,
ಕುದುರೆಯುಹರಿ, ಜಲ್ಲಿ ಪಿಡಿದು,
    ಮುರಿಮುರಿಯುತ ನಡೆದರೇ !
ನೋಡಿದರೆದೆ ನಡುನಡುಗೆ,
ಮೂರ್ಪಡೆಗಳ ಕೂರ್ಪುಡುಗೆ,
    ಪೋರ ಬಯಸಿ ಕಡೆದರೇ !
ಕುದುರೆಬೆಡಗನ್ ಅರ್ತಂಬರೀಸ್,
ಜಲ್ಲಿ ಜಾಣನ್ ಈನಿೂಯಸ್,
ಮಾಸಿಸ್ತ್ರೀಸ್, ಫರಸ್ಟಕೀಸ್,
ತೇರೋಟದ ಸೋಸ್ಥಾನೀಸ್,
ಪಿರಿಯ ಬೆಳೆಯ ನೈಲ ಬಯಲ
ಭಟರ ಭಟರ್ ಪೆಗಸ್ತಗೋನ್,
ಸುಸಿಸ್ಕನೀಸ್, ಐಗುಪ್ತರ್ :
ಪುಣ್ಯದ ಪುರ ಮೆಂಫಿಗೊಡೆಯ
ಅರಸಮಿೂಸ್, ಬಲ್ಕಿಟ್ರಾಳ್ :
ಮುದುಪಳಮೆಯ ಥೀಬ್ಸ ಸರಸು
ಅರಿಯೊಮರ್ದ್ದ, ಜೌಗುಗಳೆಡೆ
ಪಡಗುಪಳಕೆಯಾಳ ನೆರವಿ :
    ಎಣಿಕೆಗಳುಂಬಂ !
ಸಾಗರಸೆಡೆ ಸುಖದ ಬಾಳ
ಪೊನ್ನೂರ್ಗಳ ಲಿಡಿಯುದವರ್ :

ಆಳ್ದನ ತೋಳ್, ಹೆಬ್ಬಯಕೆಯು
ಅರ್ಕತಿಯಸ್, ಮಿತ್ರಫತೀಸ್ :
ಪೊಸ್ ಸಾರ್ಡಿಸ್ ಕಳುಹ ಸಲಿದು
ಎರಡು ಸೊಗದ, ಮೂರು ಸೊಗದ,
ಸುರಿಗೆತೇರಸೇರಿದವರ್,
  ಪಗೆಗೆ ಸಾವನೀವವರ್ :
ಪಾವಸಗಿರಿ ತೊವೊಲದವರ್,
ತೊತ್ತುಸೊಗವ ಹೆಲಸರವೇ-
ಲಿಡಲು ಕುಣಿಸ ಸುತ್ತ, ಫರುಜಸ್ :
ಭಲ್ಲೆಯೆಸೆವ ಮಿಸಿಯದವರ್ :
ಪೊನ್ನನಾಡು ಬೆಜಿಲೊಸವರ್,
ನಾವೆ ಸಚ್ಚು ಜಿಂಕದವರ್,
ಬಿಲ್ಲ ಕೋಲ ಪೊಂಕದವರ್,
ಖಡ್ಗವೊತ್ತರಂಕದವರ್—
ಅಂತು, ಇಂತು, ಅತ್ತ, ಇತ್ತ,
ಚಕ್ರವರ್ತಿಚಕ್ರವೆತ್ತ
ಪರಿವುದು ತಡೆಗೊಳದೆ ಸುತ್ತ,
ವಿಶ್ವದ ಜನಪದದ ಮೊತ್ತ,
ದೆಸೆದೆಸೆಗಳ ತಂಡ ತಂಡ,
ತಮ್ಮನಾಳ್ದ ಕೊಂಡ ಗಂಡ,
ಶ್ರೀಕ್ಷಯಾರ್ಷದೇವ ಕರೆಯೆ,
ಪರ್ಸದ ಪೊಸ ಅರಳು, ಪೂವು,
ಪೋಯಿತ್ತು, ಪೋಯಿತ್ತು ಪೊಯ್ತು ತಿರುಳು.
ಪಡೆಯು ಪೆತ್ತ ನಾಡೊಳೆತ್ತ
ಪಡೆದವರುಂ, ಪಿಡಿದವರುಂ,
ನೀಡು ತಡೆದ ದಿನಗಳೆಣಿಸಿ,

ಪಾರುತಿಹರ್, ಪಲುಬುತಿಹರ್—
ಒರ್ಪಂಬಲ್ ಪರ್ವವೇ!

೧.೧

ತೆರೆ ಬಂದು ಬಂದೆದ್ದು ಹೆಡೆಯೆತ್ತಿ ಕಾರಿ
ಹೊರಳುವೆಡೆ, ಕೊಡೆಯೆತ್ತಿ, ಗದ್ದುಗೆಯನೇರಿ,
ದೊರೆಯಿವನ್, ದೊರೆಯುವನ್ ಬಂದು ಬಂದೆರಗೆ,
ರಾಯದಳ, ಪಾಯದಳ, ದಳ ದಳದ ಪೆರಗೆ,
ಬಂದು ಬಂದೆತ್ತಲುಂ, ನೆಲ ನೆರೆಯದಲ್ಲಿ,
ಅಥಮಸನ ಮಗಳೊಮ್ಮೆ ದಾಂಟಿದೆಡೆಯಲ್ಲಿ,
ಯೂರೋಪಿನಿದಿರಲ್ಲಿ, ಬೀಡು ಬಿಟ್ಟಿಳಿಯೆ,
ಮೆಯ್ಯುಬ್ಬಿ, ಹುಬ್ಬೆತ್ತಿ, ಸುತ್ತ ಕಣ್ ಸುಳಿಯೆ,
ಆನಂದಬಾಷ್ಪವನು ಕರೆದನೆಮ್ಮೆರೆಯು,
ಕೋಟಿ ವೀರರ ವೀರ, ಕೋಟಿ ರಾಯರ ರಾಯ,
ಧರೆಯ ಲಕ್ಷ್ಮಿಯರ ತಲೆಲಕ್ಷ್ಮಿಯಾರಾಮ,
ಏಷ್ಯದಾ ಸಮ್ರಾಜ, ಸಾರ್ವಭೌಮ!

೧.೨

ದೇವನಾಣತಿಯಾಯ್ತು! ನಾಯಕರು ಕೂಡಿ,
ಹುಚ್ಚುನೆಗೆ ತೊಂಡು ಬೆಳ್ಗುದುರೆಗಳ ಹೂಡಿ
ಕೊಚ್ಚುವ ಸಮುದ್ರನನ್ ಕಟ್ಟಿ, ನೊಗ ಮೆಟ್ಟಿ,
ಬದಿಬದಿಗೆ ದೋಣಿಗಳ ತಂದು ತಂದೊಟ್ಟಿ
ನೇಣುಗಳ ಬಿಗಿಬಿಗಿದು ಹಲಗೆಗಳ ಹಾಸಿ,
ಜಲದ ಮೇಲೊಂದು ಹೊಸ ನೆಲದ ಹದಿ ಬೀಸಿ,
ಸುತ್ತಿರಿದ ನಾವೆಯಲಿ ಸಕಲ ಸುಖವಿರಿಸಿ,
ಇರುವೆ ಸಾಲಿಟ್ಟಂತೆ ಸೇನೆಯನು ಸರಿಸಿ,
ಹರಿತಂದು, ಕೈಕಟ್ಟಿ, ಮೊಳಕಾಲನೂರಿ,

ಬಿಸ್ಸ್ವೃಸಿಕೊಳೆ, ನಗುತ್ತ, ಪ್ರೊಂದೇರಸೇರಿ,
ಈಟಿಯುಲಿ ಕಾದುವರಸಂಜಿಸಲಿ ನಾಟಿ
ನಾತ ನುಂಗಲು ನಡೆದ ಚಕ್ರಿ ದಾಟಿ.

೨.೧

ಆವನವನಾ ಅಳು ತಡೆವವನು? ಅವ್ರದಾ ಪಡೆ ನೆಗಸಿ ಕೆಡದೆ
ಅಣೆಕಟ್ಟ ಸೊತ್ತು ವ್ರದು ತಂದು?
ಆ ಸುಗ್ಗ ಸರೆಗಿದಿರ್ ನಿಂದು?
ಆವ ಕರ್ರ ತಲ್ ಅಗಳು, ಆವ ಮಲೆ ಒಲ್ಲೆ ಗಿಂಟಿ,
ಅದರ ಮುಂಬಾಯ್ತು ರಿವ್ರ ಮೊಗಗೆಟ್ಟು ನಿಲಲು?
ಸರ್ವದಾ ಪಡೆ ಬಡವೆ? ಅದರೊಡನೆ ಸೆಣೊ ಡನೆ?
ಸರ್ವದೆದೆ ಸಬ್ರದೆದೆ, ಅದನರಿಯುರಾರು?

೨.೨

ಕಾಳಗವೆ, ಶಾಂತಿ ನಿಸಗ್ಗೊಂದು ಸಾರ್ವಕರಗಿತ್ತುದಾ ದೈವಂ—
ದಿಟ್ಟತನದಲಿ ಕಳನ ಕೊಯ್ಯೆ,
ಕಟ್ಟಕಡುಪಿನಾ ಸಗೆಯ ಪೊಯ್ಯೆ,
ರಥಗಳಲಿ ಲಟಕಟಿಸಿ, ದುರ್ಗಗಳ ಧೂಳಿಪಿಸಿ,
ಜನಜನವನೀ ಬಡಿದು ಸೆರೆಪಿಡಿದು ತರಲು,
ಬೆಳ್ಳಿರಿಗಳುರುಬುತಿರೆ, ಜರುಗಾಳಿ ತರುಬುತಿರೆ,
ಹಡಗಿನಲಿ ಬೆಡಗಿನಲಿ ನೋಡಿ ನಗುತಿರಲು!

೩.೧

ಆದೊಡೆಯು, ದೈವ ವಂಚಿಸಲು,
ಬುದ್ಧಿಬಲದಿಂದಾರು ಬದುಕಬಹುದು?
ಒಡ್ಡಿದಾ ಹೆಬ್ಬಲೆಯ ಹಾರಬಹುದು?
ತನ್ನ ಬಿಡುಗಡೆಗೋಡಿ ತೂರಬಹುದು?

೩ . ೨

ನಗುತ ನಗುತೆಳೆದುಕೊಳ್ಳುವಳು,
ಚೆಲುವುಗಾಣಿಸಿ ರುದ್ರಮಾಯೆಯವಳು :
ಮದಪಿಡಿಸಿ, ಮರುಳ್ಗೊಳಿಸಿ, ಇರುಳುಗವಿಸಿ,
ಮುಚ್ಚುವಳು, ಕಣ್ಣಳಿಸಿ, ಮಣ್ಣೊಳವಳು.

೪ . ೧

ಅಳುಕು ಬಹುದೇಕೆನಗೆ, ಮತ್ತೆ ಭಯವಿರಿತ ?
ಮತ್ತೆ ಮರಳದೊ, ನಮ್ಮ ದಳಕಿಹುದೊ ಮುರಿತ ?
ಸೂಸಪುರಿ ಬೀಗದೋ, ಪಾಳದೋ ಮತ್ತೆ ?
ಹಾಳುಬೀಡೆನಿಸುವುದೇ ಇನ್ನದಕೆ ಮತ್ತೆ ?

೪ . ೨

ಚೆಲ್ವ ಕಣ್ದೆರೆದಿಟ್ಟ ಕೊರೆದಿಟ್ಟ ಬೀಡು !
ಗೆಲ್ವದೆಂಬುದು ಹೋಗಿ ಬಡಿವುದೋ ಕೇಡು ?
ಅಯ್ಯೋ, ಅಯ್ಯೋ ಎಂದು ಹುಡಿರೆದೆಬಚ್ಚಿ
ಕೊಯ್ಯುವರೊ ಬಾಳ್ಗುಡಿಯ ಸುಯ್ಯುಮುಡಿ ಬಿಚ್ಚಿ ?

೫ . ೧

ಏಷ್ಯವನು ಯೂರೋಪಿಗೊಂದಿಸಿದ ಸೇತು,
ಪಾರಸಿಕವೀರರಿಗೆ ಹಾ ರಾಹುಕೇತು !
ಹೋದರು—ಹೋದರು—ದಾಟಿ ತಾವೆಲ್ಲ,
ಕುದುರೆಗಳು, ಕಾಲಾಳು, ತೇರಿನವರೆಲ್ಲ,
ಜೇನೆದ್ದು ಹೋದಂತೆಯೇ, ಕೋಟಿ, ಕೋಟಿ,
ನಮ್ಮನುಳಿದೆಯ್ದಿದರು ದಾಟಿ, ದಾಟಿ.

೫ . ೨

ಬರಿದಾದ ಹಾಸಿನಲಿ ದುಃಖ ಮಲಗುವುದು :
ಕೊರಗು ಬಯಸುತ್ತ ಸುಖ ದೂರ ತೊಲಗುವುದು.

ಬಾರನೇ, ಬಾರನೇ, ಎಂದು ಮರುಗುತ್ತ,
ಪೇರನನು ಬಯಸಿ ತಾನೊಬ್ಬ ಕೊರಗುತ್ತ,
ನವೆಯುತ್ತ, ನವೆಯುತ್ತ, ಪೆಣ್ ಸೊರಗಿ, ಸೊರಗಿ,
ಅಳಿದಾಯ್ತು ಪರ್ವವೇ ಕರಗಿ, ಕರಗಿ.

ಓ ಪಾರಸಿಕರೆ, ಕುಳ್ಳಿರಿ ಬನ್ನಿ,
ಮಂತ್ರಶಾಲೆಯಲಿ ಕಾರ್ಯವ ತನ್ನಿ.
ದರ್ಯವೃಷನ ಮಗ, ಆರ್ಯೋದ್ಧಾರಿ,
ಶ್ರೀಕ್ಷಯಾರ್ಷನಾ ಶ್ರೇಯವ ಕೋರಿ.
ಗೆಲ್ಲುವದಾರಿಗೆ ? ಬಿಲ್ಲನು ಬಾಗಿ
ಅಂಬ ಬೀರುವಾ ಜನಕೋ, ತಾಗಿ
ಈಟಿಯಲಿರಿವಾ ಜನಕೋ, ತೂಗಿ
ಹಾಸುಮೊಕ್ಕನು ನೆಯ್ಯುವ ಬನ್ನಿ.

ಅದೆಕೋ, ಬರುವಳು ಹುತೌಶ ತಾಯಿ,
ದೇವರ ಕಣ್ಗೊಳಿಸಿನ ದೊರೆತಾಯಿ,
ಹಿರಿಯ ದೇವಿ—ಅಡಿಗೆರಗಿ, ಎರಗಿ.

[ಹುತೌಶ, ಕೆಳದಿಯರೊಡನೆ]

ಬಾಳು, ಪೊನ್ನಬಳಸಿನುಡೆಯ ಪರ್ಷದ ತಲೆವೆಣ್ಮಣಿ,
ಶ್ರೀಕ್ಷಯಾರ್ಷನುಸಿರನುಸಿರು, ದರ್ಯವೃಷನ ಕಣ್ಮಣಿ,
ಪಾರಸಿಕರ ದೇವರರಸಿ, ದೇವರೀಗಳಿಹನ ತಾಯ್,
ಕಾಯೆ ಪಳೆಯ ಭಾಗ್ಯದೈವ ಗೆಲುವ ಸಿರಿಯ ಪಡೆಯನು.

ಹುತೌಶ—ಅದೆ ಅಳುಕೇ ತಂದುದೆನ್ನನಿಲ್ಲಿಗೆ, ಓ ಹಿರಿಯರೇ,
ದರ್ಯವೃಷನ, ನನ್ನ, ಪೊನ್ನ ಕುಸುಂಪೆಸದ ಸೆಜ್ಜೆಯಿನ್.
ಎದೆಯನಿರಿಯುತಿರ್ಪ ದಳುಕು—ತೆರೆದು ಪೇಳ್ವೆ, ಕೇಳಿಯರೇ.
ದೇವನಹುರಮಜ್ದನೊಸಯೆ, ಹಿರಿಯ ಸಿರಿಯನಾಂತನು,

ದೊರೆಗಳ ದೊರೆ, ಚಕ್ರಿಯೆನಿಸಿ ದರ್ಪವನು ಮೆರೆದನು :
ಈಗಳದನು ದುಡುಕುಹೆಮ್ಮೆ ದೂಳ್ಗೊದೆದುದೊ ಅರಿಯೆನು.
ಮತ್ತೆ ಮತ್ತೆ ನೆನೆವೆನಿದನು—ಹಿರಿಯರ ನುಡಿ ಪುಸಿಯದು—
ಬಾಳದು ಆಳಿಲ್ಲದ ಸಿರಿ, ಸಿರಿಯಿಲ್ಲದ ಮನೆಯದು.
ಸಿರಿಯೊ ನಮಗೆ ತುಂಬಿರುವುದು : ಆಳ ಕಾಣೆ ಕಾಯಲು.
ಅರಮನೆಯೊಳ್ ಮುತ್ತಜ್ಜಿಯ ಕಣ್ಣ ಬೆಳಕು ಕಾಣೆನು.
ಕೇಳ್ವಿರಿ, ಎನ್ನಳಲನೆಲ್ಲ, ಮುತ್ತ ನಜ್ಜಿ ನರಿದರೇ,
ಪೇಳಿ ಎನಗೆ, ಮಾಳ್ಪುದೇನು, ಪಾರಸಿಕರ ಹಿರಿಯರೇ.
…ಳ—ತಾಯೆ, ಹಿರಿಯ ನಾಡಿನೊಡತಿ, ನಂಬು, ತಮ್ಮ ತೊತ್ತಿರು.
ನುಡಿಯೊ, ನಡೆಯೊ, ಮಾಡಬಲ್ಲುದೇನು ಬೆಸಸಿ, ಮಾಳ್ಪವು.
…ತೌಶ—ಆ ಯವನರನ್ ಮುರಿದು, ಅವರೂರ್ಗಳನ್ ಕೊಳಲ್
ಪಡೆನೆರಪಿ ತಾನತ್ತ ಪೋಗೆ ಮಗನ್, ಎನಗಿತ್ತ
ತಪ್ಪದೆಯೆ ಇರುಳಿರುಳ್ ಸುಳಿಯುವುವು ಕನಸುಗಳ್.
ನಿನ್ನೆಯದು ಚೆನ್ನಾಗಿ ಕಾಣಿಸಿತು. ಹೆಣ್ಮಕ್ಕ-
ಳಿಬ್ಬರೆನ್ನಿದಿರಿನಲಿ : ಹೊಳೆಹೊಳೆವ ತೊಡಿಗೆಗಳು :
ಪಾರಸಿಕರುಡಿಗೆ ತಾನೊಬ್ಬಳಿಗೆ : ಡೋರಿಕರ-
ದೊಬ್ಬಳಿಗೆ : ಇಬ್ಬರೂ ಹುದುವಲ್ಲದಾಕಾರ,
ಎತ್ತರದ ಗಾಂಭೀರ್ಯ : ಕಣ್ತೆಲೆವ ಚೆಲುವೆಯರು,
ಒಂದೆ ಕುಲದಲಿ ಹುಟ್ಟಿ ಬೆಳೆದವರು. ಹೆಲಸಿನಲಿ
ಬಾಳ್ವಳೊಬ್ಬಳು : ಒಬ್ಬಳೇಷಿಯದ ಪರದೇಸೀ
ಭೂಮಿಯಲಿ. ಕನಸಿನೊಳ್ ನೋಡುತಿರೆ, ಕಲಹವಾ-
ಯ್ತವರೊಳಗೆ : ನನ್ನ ಮಗನದ ಕಂಡು, ಹಿಡಿದವರ-
ನೆಳೆತಂದು, ಪಳಗಿಸಲು ತನ್ನ ರಥದಲಿ ಹೂಡಿ,
ಕೊರಳಿನಲಿ ನೊಗವನಿಟ್ಟೇರಿದನು :—ಒಬ್ಬಳೋ,
ಹಲ್ಲಣದ ಹೆಮ್ಮೆಯೊಳ್ ಕುಣಿದಾಡಿ ಹಿಗ್ಗಿದಳ್ :
ಜಗ್ಗಿದಳು ಮತ್ತೊಬ್ಬಳೊದೆದಾಡಿ : ಕಡಿದು ಕಡಿ-

ಪ್ರಾಣವನ್, ಮಾನದ ಮೂಕಿಯನ್, ಒಡಲ, ಸೊಗವನೊ-
ಕ್ಕಡೆಗೊಗೆದು, ಚಿಮ್ಮಿದನ್. ಉರುಳಿದನು ನೆಲಕಾಗ
ನನ್ನ ಮಗ. ಒಡನೆ ಕಸಿಕರಗೊಂಡು ಮೆಯ್ಯೇರೆ
ದಸ್ಯುಪ್ರಭನ್, ಎನ್ನವನು ನಾಣ್ಗೊಂಡು ನೋಡುತಿರ
ಸೀಳಿದನು ಶ್ರೀಕ್ಷಯಾರ್ಷನ್ ಪಿಡಿದು ಪರಿಪರಿದು.
ಇರುಳ ದರ್ಶನವಿಂತು ; ಬೆಳಗಾಗ, ಉತ್ತಾತ್ರ-
ವಿಸ್ವೊಂದು : ಕೈತೊಳೆದು, ದೇವಕುಲಕ್ಕೈತಂದು,
ಪುಷ್ಪಶಾಂತಿಯ ಬೇಳ್ದು ಮಧುಪರ್ಕಧೂಪಗಳ
ನೀಡುತಿರೆ, ಅಕ್ಕಟಾ, ಗರುಡನೊಂದೊದರುತ್ತ
ಮಿಥ್ರದೇವನ ವೇದಿಯೊಳ್ ಬಂದು ಬಿದ್ದತ್ತು :
ಅಟ್ಟಿ ಬಂದುದು ಹಿಂದೆ ಸಿಡಿಲಿನ್ವೊಲು ಕಿರುಗಿಡುಗ ;
ಪಕ್ಕಿಯರಸನ ಕುಕ್ಕಿ, ಗರಿ ಕಿತ್ತು, ನಡುಗಿಸಿತು.
ಕಂಡು ನಾನಂಜಿದೆನು. ಕೇಳಿ ನೀನಂಜಿದಲ.
ಓ ಎನ್ನ ಕೆಳೆಯರೇ, ಪನ್ನದೆ ನಿರಂಕುಶನ್
ನಿಮ್ಮ ಬಲವಿಂದರಸು. ಗೆದ್ದು ಬರೆ, ನಲಿವೆವು :
ಬೇರೆ ಎಣಿಸಿದೊಡೆ ವಿಧಿ, ಮರುಳ್ವುದಕೆ ನಲಿವೆವು.
ಅವನಾರ್ಗೆ ಮೊಗೆ ಇಲ್ಲಿ? ಹೇಳಿ, ಓ ಹಿರಿಯರೇ.
ಮೇಳ—ನಾವು ಹೇಳ್ವುದಿನಿತೆ, ತಾಯೆ—ಬೇಡ ಹೆಚ್ಚು ಹೆದರಿಕೆ :
ಹೆಚ್ಚು ನೆಚ್ಚಿಕೆಯೂ ಬೇಡ : ಪೋಗು ಬೇಡು ದೇವರನ್—
ಕೇಡ ಕೆಡಿಸಿ, ಒಳ್ಳಿತಿತ್ತು, ತಾವು, ತಮ್ಮ ಮಕ್ಕಳ,
ತಮ್ಮ ಬಳಗ, ಕೆಳೆಯರೆಲ್ಲ, ಹಿರಿಯ ನಾಡ ಪ್ರಜೆಗಳೆಲ್ಲ,
ಹೆಚ್ಚುವ ಪರಿ ಮಾಡಲೆಂದು ಶ್ರದ್ಧೆಯಿಟ್ಟು ಬೇಡುವ.
ಭೂಮಿತಾಯ್ಗೆ, ಪಿತೃಗಳಿಗೆ, ತರ್ಪಣಗಳನೆರೆಯುವ.
ಇರುಳು ಕಣ್ಗೆ ಕಂಡ ದೇವ ದಸ್ಯುಪ್ರಭನ ಕರೆಯುವ.
ತಮಗೆ, ಶ್ರೀಕ್ಷಯಾರ್ಷನಿಗೆ, ಮಂಗಳವನು ಕಳುಹಲಿ !
ಬರುವಮಂಗಳವನು ಮೆಟ್ಟಿ ಕೀಳುಲೋಕಕಿಳುಹಲಿ !

BMS

ಭಕ್ತರಾವು ತನ್ನ ಮನೆಗೆ, ಭಕ್ತಿಯಿಂದ ನುಡಿವೆವು—
ರಾಜನೊಳ್ಳಿತಕ್ಕೆ ಸ್ವಪ್ನ ಫಲವದೆಲ್ಲ ತಿರುಗಲಿ!

ಅತೌಶ—ಒಳ್ಬಗೆಯೊಳು, ಮಗನ, ನನ್ನ, ಮನೆಯ, ಹರಸಿ ನುಡಿದಿರಿ.
ನಿಮ್ಮ ಪುರುಳು ನಡೆಯಲಣ್ಣ. ಹರಕೆಯಿಡಲು ತೆರಳುವೆ,
ತಣಿದು ದೇವತೆಗಳು, ಪಿತೃಗಳೆಮ್ಮ ಪೊರೆದು ತಣಿಸಲಿ.—
ಒಂದು ಮಾತು, ಓ ಕೆಳೆಯರೆ: ಎತ್ತಲಿಹುದು ನೆಲದಲಿ,
ಆ ಹೆಸರಿನ, ಆ ಹೆಚ್ಚಿನ ಅಥೆನಪುರಿ ತಾನದು?

ಮೇಳ—ದೂರ, ನಮ್ಮ ಮಿತ್ರದೇವ ಮುಳುಗಿ ಪೋಪ ಕಡೆಯಲಿ.

ಅತೌಶ—ಏಕೆ ಮಗನ್ ಅಥೆನ್ಸಪುರವ ಗೆಲ್ಲ ಬಯಸಿ ಪೋದನು?

ಮೇಳ—ಅದೊಂದ ಗೆಲೆ, ಎಲ್ಲ ಹೆಲಸ್ ದೊರೆಯಡಿಯೊಳ್ ಬೀಳ್ವುದು.

ಅತೌಶ—ಏನು, ಅಥೆನ್ಸ್ ಆಸಿಬರಾಳ ಹಿರಿಯ ಪಡೆಯನುಳ್ಳುದೆ?

ಮೇಳ—ಸಾಕು—ಪಾರಸಿಕರು ಮುನ್ನ ಅದರ ಕೆಚ್ಚನರಿಯೆವೆ?

ಅತೌಶ—ಆಳ್ಗಳಿರಲಿ, ಸಿರಿ ಇಹುದೋ? ನಮ್ಮ ಸಿರಿಗೆ ಸರಿಯದೊ?

ಮೇಳ—ಬೆಳ್ಳಿಹೊನಲ ಬಸಿರಿನಿಂದ ಭೂಮಿಯೆ ತಾನ್ ಸುರಿವಳು.

ಅತೌಶ—ಅಂಬನೆಸೆದು ನಾಟಬಲ್ಲ ಬಿಲ್ಲ ಕೊಬ್ಬೊ ಅವರದು?

ಮೇಳ—ಇಲ್ಲ, ತಾಯಿ. ನಾಟುಮೀಟಿ, ಹೊತ್ತ ಹಲಗೆ, ಕಟ್ಟಿಗೆ.

ಅತೌಶ—ಆ ಹಿಂಡಿಗೆ ಕುರುಬನಾರು? ಒಡೆಯ? ಆಳ್ವ ಹಿರಿಸ್ರ?

ಮೇಳ—ದೊರೆಗೆ ಆಳ್ಗಳಲ್ಲ ಅವರು, ತಮ್ಮ ತಾವೆ ಆಳ್ವರು.

ಅತೌಶ—ಒಡೆಯರಾಳ್ವ ಪಡೆಯನವರದೆಂತು ತಡೆಯಲಾಪರು?

ಮೇಳ—ದರ್ಯವ್ರಷನೆ ಬಲ್ಲನದನು—ಹಿರಿಯ ಪಡೆ! ಹಿರಿಯ ಪಡೆ!

ಅತೌಶ—ಆ ಪಡೆಯನು ಪೆತ್ತವರನು ತಣಿಸುವ ನುಡಿಯಲ್ಲಿದು.

ಮೇಳ—ಎಲ್ಲವೀಗ ತಿಳಿದುಬಹುದು—ಇತ್ತಲೋಡಿ ಬರುವನು
ಪಾರಸಿಕರ ದೂತನೊಬ್ಬ: ಒಳ್ಳಿತೊ, ಕೆಡುಕೊ ಕೇಳ್ವೆವು.

[ದೂತ]

ದೂತ—ಏಷಿಯದ ಸಾಮ್ರಾಜ್ಯಕೇಂದ್ರವೇ! ಓ ಪರ್ಸ!
ಐಶ್ವರ್ಯಭೂಮಿಯೇ, ಪೋರಾಳ ತಾಯ್ತವರೆ!

ಆವ ಪೆರ್ಶ್ಯ ಕೋಟಿಸಿಂದುರುಳಿ ಒಂದೇಟಿ-
ಗೆಲ್ಲ ಬಿದ್ದೆ! ಸಗ್ಗದಾ ಪೂವೆಲ್ಲ ಪೋಯಿತೇ!
ಅಯ್ಯೋ! ಕೆಟ್ಟವನು ನಾನೆ ಮೊದಲೇ, ತರಲು
ಈ ಕೆಟ್ಟ ಸುದ್ದಿಯನು! ದಿಟವನಾಡಲೆ ಬೇಕು—
ದುಃಖ, ಪಾರಸಿಕರೇ, ಅಳಿಯಿತ್ತು ಪಡೆಯೆಲ್ಲ.
ಮೇಳ—ಅಕಟಕಟಾ! ಅಕಟಕಟಾ! ಅಳಿಯಿತ್ತೇ, ಅಳಿಯಿತ್ತೇ!
ಅಳಿ! ಪಾರಸಿಕರೆ, ಅಳಿ! ಕಣ್ಣೀರ ಸುರಿಸಿ!
ದೂತ—ಎಲ್ಲವೂ ಮುಳುಗಿತ್ತು! ಎಲ್ಲವೂ ತೊಡೆಯಿತ್ತು!
ಪಾತಾಳಕಾಯ್ತು, ಓ ಪಾರಸಿಕರೇ!
ಮೇಳ—ಇದ ಕೇಳೆ ಬದುಕಿದೆವೇ! ಸೀಳ್ ಮುಪ್ಪು ಸಿದ್ದುದೆವೇ!
ಅಳಿ, ಪಾರಸಿಕರೆ, ಅಳಿ! ಕಣ್ಣೀರ ಸುರಿಸಿ!
ದೂತ—ಕಿವಿಯಿಂದ ಕೇಳ್ದುದಲ್ಲ! ಕಣ್ಣಾರ ಕಂಡೆನಲ್ಲ,
ಈ ಕೆಟ್ಟ ಕೇಡ, ಓ ಪಾರಸಿಕರೇ!
ಮೇಳ—ಅಕಟಕಟಾ, ಇದಕಾಗಿಯೆ ನಡೆಯಿತ್ತೇ, ನಡೆಯಿತ್ತೇ,
ಪಲತೆರದ ಪರ್ವಪಡೆ ಹೆಲಸಿಗೆತ್ತಿ!
ದೂತ—ಸಲಮಿಸಿನ ಕರೆಗಳುಂ, ಕೆಲಬಲದ ತೆರೆಗಳುಂ,
ಕಿಕ್ಕಿರಿದು ಹೆಣಗಳಿನ್ ಕೊಚ್ಚುತಿರುವುವು.
ಮೇಳ—ಅಕಟಕಟ! ತೆರೆಯೊಸೆಯೆ, ಒಲಿದವರ ಕೈಕಾಲು
ಅರೆಯಿಂದ ಬಡಿದರೆಗೆ ಮುರಿಯುತಿರುವುವು.
ದೂತ—ಬಿಲ್ಲಂಬು ಹಾಳಾಯ್ತು; ತೇರ್ ಕುದುರೆ ಕಾಳಾಯ್ತು.
ಪಡಗು ಪಡಗಿನ್ ಸಿಗ್ಗಿ ಪುಡಿಯಾದುವು.
ಮೇಳ—ಪಾರಸಿಕರಾರಂಭ, ಸಾಮ್ರಾಜ್ಯಸಂರಂಭ,
ಶಕ್ತಿ ಭಕ್ತಿಗಳೆಲ್ಲ ಭಂಗವಾಯ್ತೇ!
ಸುಖ ದುಃಖವಾಯ್ತೇ, ಪೊಡವು ಪುಡಿಯಾಯ್ತೇ,
ಪಾಡೆಲ್ಲ ಗೋಳಾಟವಾಯ್ತೇ!
ದೂತ—ಆಗ ಆ ಮರಥಾನ್—ಈಗ ಈ ಸಲಮಿಸ್.

ಹೇಳದಿರು ಆ ಪೆಸರ, ಅಳಲ ಅಥೆನ್ಸ್.
ಮೇಳ—ಅಥೆನ್ಸಿನಾರಂಭ, ಸಾಮ್ರಾಜ್ಯಸಂರಂಭ,
ಶಕ್ತಿ ಭುಕ್ತಿಗಳೆಲ್ಲ ಅವರಿಗಾಯ್ತೇ!
ದುಃಖ ಸುಖವಾಯ್ತೇ, ಪಗೆಯೆ ಪುಡಿಯಾಯ್ತೇ,
ಗೋಳೆಲ್ಲ ಪಾಡಾಟವಾಯ್ತೇ!
ಹುತೌಶ—ಸಾಕು ಸಾಕೀ ಅಳಲು—ಈ ಪರಿಯ ಕೇಡಿಂಗೆ
ಮಾತು ಹೊಮ್ಮದೆ ಜಗುತು ಮೂಗಿಯಾದೆನು ನಾನು.
ದೇವರ್ಕಳೆಡರ ಕೊಡೆ, ಹೋರಬೇಕು ತಾಳ್ಮೆಯಲಿ
ಮರ್ತ್ಯರಾದವರು.—ಎಲೆ ದೂತ, ಶಾಂತನಾಗು:
ಪಾಳಿಯಲಿ ತೆರೆದೆಮಗೆ—ನಿನಗೆ ನೆನಪೆಂದಳಲು
ಮತ್ತೊಮ್ಮೆ ನೆರೆಯುಕ್ಕಿಬಂದೊಡೆಯು—ಮೊದಲಿಂದ
ಕಡೆವರೆಗೆ ಪೇಳ್, ಆರು ಸಾಯದವರ್? ಉಳಿಯದವ-
ರಾರಾರು? ಪೊಂಗೋಲ ಪಿಡಿದವರೊಳಾರಾರ್ಗೆ
ನಮ್ಮಕ್ಕೆ? ಪಡೆಯ ತಲೆ ತಣ್ಣಗಾದವರೆನಿತು?
ದೂತ—ಶ್ರೀಕ್ಷಯಾರ್ಷನ್ ಬದುಕಿ ಸೂರ್ಯದೇವನ ಬೆಳಕ ನೋಡುತಿಹನಿನ್ನುಂ.
ಹುತೌಶ—ಪಿರಿಯ ಬೆಳಕಿದು ನನಗೆ, ಅರಮನೆಗೆ, ಕಾರಿರುಳಿನಲ್ಲಿ ಬೆಳ್ದಿಳಗು.
ದೂತ—ಪತ್ತು ಸಾಸಿರ ಕುದುರೆಗೊಡೆಯನ್ ಅರ್ತೆಂಬರೀಸ್ ಸಲಮಿಸಿನ ಕಡಿಯು
ಕರೆ ತಾಗಿ ಕೊನೆಗಂಡನ್. ಅವನ ದಳವಾಯ್ ದಧಕಿಸ್ ಎದೆಗೀಟಿ ನೆಟ್ಟು
ಪಡಗಿಂದ ನೆಗೆದಾಲಿ ಮುಳುಗಿದನ್. ಬ್ಯಾಕ್ಟ್ರಿಯರ ಶ್ರೇಷ್ಠನಾ
ಟೆನೆಗೋನ್,
ಕಡಲ್ ಪೊಯ್ಲು ಆ ಅಯಸ ಕುರುಹಮನ್ ಬಳಸುತ್ತ ತೇಲಾಡುತಿರ್ಪನ್.
ಲೀಲಿಯಸ್, ಅರ್ಸಮಿಸ್, ಅರ್ಗೆಸ್ಟೀಸ್—ಈ ಮೂವರುಂ ಪಾರಿವಾಳಂ
ಹಾರಾಡುವಾ ದೀವಿಬಂಡೆಗಳ ಬಡಿಯುತ್ತ ತೆರೆಗೆ ಮುತ್ತಿಳಿವರ್.
ಮೂವತ್ತು ಸಾವಿರದ ಕಪ್ಪು ಕುದುರೆಯ ತಂದ ಈಥಿಯೊಪರರಸು,
ಮಟ್ಟಿಲಸ್, ಕೆನ್ನೀರ ಕಾರುತ್ತ ಕಪ್ಪುಗಡ್ಡವ ತೊಯಿಸಿ ಬಿದ್ದನ್.
ಮಗರ ಅರಬಸ್ ಮತ್ತೆ ಬ್ಯಾಕ್ಟ್ರಿಯರ ಅರ್ತಮಿಸ್ ಆ ಕರೆಯ ಮಣ್ಣ

ಮಾಟಿಗಟ್ಟಿ ಸಹಸ್ರಪಂ ಬಿಡಿಸೆಂದು ಕಾದಿರ್ದರ್. ಅಲ್ಲಿ ಅಮಿಸ್ತ್ರೀಸ್,
ಅಲ್ಲಿ ಅಂಫಿಸ್ತ್ರೆಯೂಸ್, ಅಲ್ಲಿ ಸಿತ್ರೋಫ್ರತೀಸ್, ಪಂಡಿರಸು ಬಿಟ್ಟು
ಮೂಳ್ಗೆ ಸಲದೆ ನೂಕಿಸಿದರ್. ಅರಿಯೊಮರ್ದಸ್, ಥರುಬಿಸ್, ಸ್ವೋಯ-
ಸೀಸ್, ಅಕಟ,
ಹಗೆವರನ್ ಪೊಯ್ದು ಪೊಯ್ದುರುಳಿದರ್, ತೇರ್ ಮುರಿದು, ಪಡಗೊಡೆದು
ಕಡೆಗೆ,
ಪತ್ತಿ ಹಗೆಯುನ್ ಕೊಳದೆ ಒರ್ವನುಂ ಬೀಳನ್ ! ಒರ್ವನುಂ ಸಾಯನ್
ನೆಸಲ ನೆನಪನ್ ನಮಗೆ ಬಿಡದೆ ನೆನೆಯುತ್ತಿರಲ್ ! ತಲೆಯಾಳ್ಗಳಿವರು :
ಬಿಗಿಸಲ್ಕೆ ಸಿಕ್ಕವರ್ ಸಿಕ್ಕವರ್.

ಹುತೌಸ— ಸಾಲದೇ ಮರುಗಲ್ಕೆ ಇವರೇ ?
ಸಾಪಿದ ಕಥೆಯೋ ಕೇಳ ಹುಂಡೆಯುಂ ? ನಾಚಿಕೆ, ಪರ್ಬಕ್ಕೆ, ಕೊರಗು.
ಆದೊಡೆಯು, ಪೇಳು, ಪೇಳ್ದುದನ್ ಕೇಳುವಂ. ಹೆಲಸರಾ ನಾವೆ
ಮುಂಬುಮುಂಬಂಗೆಸಿತು ಸಂಖ್ಯೆಯುಲಿ ಮುಂದಣ್ಮಿ ನೂಂಕಿದುದಿದಿರ್ಬ
ಪಾರಸಿಕನಾವೆಗಳ ಹಳಚಿ ?

ದೂತ— ಸಂಖ್ಯೆಯುಲಿ ಗೆಲ್ಲುವೊಡೆ, ಓ ತಾಯ್,
ನಮ್ಮದೇ ಗೆಲ್ಲಂ ! ಹೆಲಸರಿಗೆ ಮುನ್ನೂರು ಹಡಗುಗಳು, ಹತ್ತು
ಅದರೊಳಗೆ ಬಲುವೇಗ. ಒಂದು ಸಾಸಿರ ನೂರು ಶ್ರೀಕ್ಷಯಾರ್ಷಂಗೆ,
ಕಡುವೇಗ ಇನ್ನೂರು ಹಾಯಿಗಳು, ಮೇಲೇಳು. ಸಾಲದೇ, ನೋಡು,
ಕಾಳಗಕೆ ಈ ಪೊತ್ತ ? ಆಳ್ ಮಾಳ್ಪುದೆಲ್ಲವುಂ ಮಾಡಿದೆವು. ದೈವಂ
ಕೆಡಿಸಿದುದು ಸರಿಯಾಗಿ ತೂಗದೆಯೆ ತೊಲೆಯನ್. ಪಲ್ಲಸ್ ಅಥೀನ
ಕಾಪಾಡಿದಳ್ ತನ್ನ ಪೊಳಲನ್.

ಹುತೌಶ— ಕಾಪಾಡಿದಳೆ ತನ್ನ ಪೊಳಲನ್?
ಉರಿಯುಂಡುದಲ್ಲವೇ ಕೋಟೆಗಳನ್ ? ಊರೆ ಹಾಳಲ್ಲವೇ ಆಥೆನ್ಸ್ ?

ದೂತ—ಅಥಿನಿಯನರಿರುವನ್ನ ಬಾಳುವುದು ಆ ಊರ್. ಊರ್ಕೋಟೆ ಆಳ್ಗಳ್.

ಹುತೌಶ—ಆರ್ ಮೊದಲ್ ತೊಡಗಿದರು ನಾವೆಗಳ ಯುದ್ಧವನ್, ಹೆಲಸರೋ,
ಮೇಣು,

ಹೆಬ್ಬುಲಿದ ಹುಮ್ಮಸಲಿ ನಡೆಗರಿಸಿ, ಕೈಬೇಸಿದನೊ ನಮ್ಮ ಮಗನು?
ದೂತ—ಆವುದೋ ಮತ್ಸರದ ದೇವತೆ, ಓ ರಾಣಿ, ಆ ಕಿಚ್ಚು ಮೊದಲು
ಮೂಡಿದುದು.
ಅಥೀನಿಯನರೋಡಂಗಳಿಂದಾರೊ ಶ್ರೀಕ್ಷಯಾರ್ಷನ ಬಳಿಗೆ ಬಂದು,
“ಮಬ್ಬುಮುಸುಕಿರುಳಿಳಿಯೆ, ಹೆಲನರೊರ್ವರುಮಿರರು, ತಂತಮಗೆ ತಾವು,
ಹೇಡಿಗಳು, ಹುಟ್ಟುಬಗಿಯುತ್ತೋಡಿ ಗುಟ್ಟಿನಲಿ ಬದುಕಿಕೊಳ್ಳುವರು”
ಎಂದೊಡದ ತಾ ನಂಬಿ, ಅರಿಯದಾ ಹೂಟವನು, ಕರುಬುದೈವವನು,
ನಾವೆಯೊಡೆಯರ ಕರಸಿ ಬೆಸಸಿದನ್—“ಈ ನೇಸರಿಳೆಯಿಂದ ತೆಗೆದು
ಬಿಸುಗದಿರನ್, ಅಂಧಕಾರಂ ಕವಿಯೆ ಬಾನ್‌ಗುಡಿಯ ಪೌಳಿಗಳನೆಲ್ಲ,
ಮೂರು ಸಾಲಲಿ ನಿಲಿಸಿ ಹಡಗುಗಳ, ಆ ಕಳಿಯ ಬಾಯ್ಗಳನು ಮುಚ್ಚಿ
ಅಯಸ ಕುರುಪದ ಸುತ್ತ ಬಳಸುತ ಕಲಂಗಳನ್ ಕಾವಲಿಹುದೆಲ್ಲ.
ಕಳ್ಳದಾರಿಯ ದೂರಿ, ಬಂದು ಹೆಲನರ ದೋಣಿ ತಲೆ ತಪ್ಪಿ ನುಸುಳೆ,
ಒರೊರ್ವರುಂ ನಿಮ್ಮ ತಲೆ ದಂಡ, ಎಚ್ಚರಿಕೆ!” ಇಂತು ದೊರೆ ಹಿಗ್ಗಿ,
ಮುಂದಪ್ಪುದನು ಕಾಣ, ದೇವರ್ಕಳೊಳಗೆಯೇ ನೆಯ್ಯುವುದ ಕಾಣ,
ಕಟ್ಟಾಣೆಯಿಟ್ಟನ್. ಬೆಸಕಯ್ದು ಪಡೆವಳರುಮಂಬಿಗರುಮುಂಡು,
ಹುಟ್ಟುಗಳ ಕಟ್ಟಿ ಅಣಿಯಾದರ್. ನೇಸರಿನ ಬೆಳಕಿಳಿದು ಕಾರಿರುಳ್
ಮುಸುಕೆ,
ಅಂಬಿಗರು, ನಾಯಕರು ತಮ್ಮತಮ್ಮೆಡೆಗಿದ್ದು ಕೂಗಿದರು, ಸಾಲು-
ಸಾಲಾಗಿ
ಓಡುಗಳ ನಿಲಿಸಿದರು, ಇರುಳೆಲ್ಲ ನಡಸಿದರು, ಬಳಸಿದರು ಕಳಿಯ
ಸರಪಣಿಯನೆಳೆದಂತೆ:—ಕದ್ದೋಡುವನು ಹೆಲನನೊಬ್ಬನಿಲ್ಲ!
ಬೆಳ್ಗುದುರೆ ಹಗಲು ಕಡೆಗೆದ್ದು ಬಂದಿಳೆಯೆಲ್ಲ ಚೆಲ್ವಿನಲಿ ಬೆಳಗೆ,
ಹೆಲನರಿನ್ ಮೊದಲೆದ್ದುದೊಂದಾರ್ಪು—ಬಲ್ಲುಲಿಯ, ನಲ್ಲುಲಿಯ ಹಾಡು,
ದೀವಿಕರೆಯುರೆಗಳಿನ್ ಮೊಳಗೆ ಮಾರುಲಿಗಳ್. ಬೆದರಿ, ಎದೆಗುಂದಿ,
ಪೆಚ್ಚಾದರೆಮ್ಮವರು ಕೇಳ್ದೊಡನೆ! ಓಡುವವರಂತಲ್ಲ, ಗಂಭೀರ ಘೋಷಂ

ತೆರೆತೆರೆಯೊಳುಕ್ಕಿತ್ತು ಹೆಲಸರಾ ಸೇಯುನ್, ಜಯಕೆ ಮುಂದಾಗಿ
ತುಡುಕುತಿರ್ಪವರಂತೆ! ಉಂದತ್ತು ಅತ್ತಕಡೆ ಎತ್ತಲುಂ ಕಹಳೆ!
ಒಮ್ಮನದೊಳಿದ್ದುವು ಹುಟ್ಟುಗಳು, ಉಪ್ಪುನೀರ್ ತುಳ್ಕಿ ತಳ್ವೊಯ್ಯೆ,
ಬಲಗೋಳು ಮುಂದಾಗಿ ನೂಂಕಿದುದು ನಾವೆಬಲವೆಲ್ಲ, ಬಗ್ಗನಲಿ.
ಕೇಳಿಸಿತು ಮೇಗೊಗೆದು ಕೂಗೊಂದು—" ಓ ಹೆಲಸ ಮಕ್ಕಳಿರ, ನುಗ್ಗಿ
ಬಿಡಿಸಿಕೊಳಿ ತಾಯ್ನಾಡ ಹೋರಾಡಿ, ಬಿಡಿಸಿಕೊಳಿ ಹೋರಾಡಿ ನಿಮ್ಮ
ಮಕ್ಕಳನು, ಹೆಂಡಿರನು, ಹೆತ್ತವರ ದೇವರಾ ಗುಡಿಗಳನು, ಸತ್ತಾ
ಹಿರಿಯರನು ಹುದಿದಿಟ್ಟ ಗುಳಿಗಳನು—ಎಲ್ಲಕ್ಕೂ ಈಗ ಹೋರಾಟ!"
ಅದಕೆದಿರ್, ಪಾರಸಿಕ ಭಾಷೆಯಲಿ ಮೊಳಗಿದೆವು ಕಡಲ್ ಮೊರೆತದಂತೆ
ಮಾರುಲಿಯು. ಹೊತ್ತು ಬಂದುದು: ತಡೆವುದಿನ್ನೇಕೆ! ಹಡಗೊಡ
ಹಡಗು
ಪಿತ್ತಳೆಯ ಮೂತಿ ಮೂತಿಗಳನುರಿ ತೊಡಿದುವು: ಹೆಲಸರದು ಕೊಕ್ಕು
ಮುಂಬೊಕ್ಕು, ಫಿನಿಷಿಯರ ಕಪ್ಪಲಿಂದೆಗರಿಸಿತು ಮುಂಬು ಜೊಂಜೆಯನು
ಹೆಣೆಹೆಣೆದು ಹೆಣಗಿದುವು ಹಡೆಯೆರಡು; ಹಡಗುಹಡಗೇ ಊಟಿಯಾಗ:
ಮೊದಮೊದಲು ಪಾರಸಿಕ ನಾವೆಗಳು ತಂಡತಂಡದಿ ತೆಕ್ಕೆಗೊಂಡು
ಕಾದಿದುವು, ಗೆಲಗೊಡದೆ. ಆದೊಡಿಕ್ಕಟ್ಟಿನಲಿ ತೊಡಕಿ, ತೊಡರುತ್ತ
ಹುಟ್ಟುಹುಟ್ಟನು ಬಡಿದು ಮುರಿಯುತ್ತ, ಪಿತ್ತಳೆಯ ಮೂತಿ ಮೂತಿಯನ
ತಿವಿದು ತಿವಿದೊಡೆಯುತ್ತ, ಹಡಗೊಂದನೊಂದು ತಾಕಾಡುತ್ತ, ನಾವೆ
ಕಂಗೆಟ್ಟುದನು ಕಂಡು, ಹೆಲಸಿಕರು ಜಾಣ್ಮೆಯಲಿ ಸುತ್ತಲುಂ ಬಳಸಿ
ಒತ್ತೊತ್ತಿ ಚುಚ್ಚಿದರು: ಹಡಗು ತಲೆಕೆಳಕಾಯ್ತು: ಕಡಲು ಮರ
ಯಾಯ್ತು,
ಚೆದರಿದ್ದ ಹಲಗೆಮುರುಕುಗಳಿಂದ, ತೇಲುಹೆಣದೊಡ್ಡಿಂದ, ಮುಚ್ಚಿ:
ಕರೆ, ಚಾಚುಬಂಡೆಗಳು, ಕೋಡುಗಳು ತೀವಿದುವು ಹೆಣದೊಟ್ಟಿಲಿಂದ.
ಏಷಿಯದ ನಾವೆಗಳು, ಉಳಿದುಕೊಂಡುವು, ಚೆಲ್ಲಿ, ದಿಕ್ಕುಪಾಲಾಗಿ,

ಒಡ್ಡುಗೆಟ್ಟೋಡಿದುವು. ಬಲೆಯೊಳಗೆ ಮೀನ್ ಪಿಡಿದರಂತೆ, ಹಗೆಯವರು
ಹುಟ್ಟುಮುರುಕುಗಳಿಂದ, ಹಲಗೆಸೀಳುಗಳಿಂದ ಬಿದ್ದವರ ಬಡಿದು,
ಕಡಿಕಡಿದು ಕೊಲ್ಲುತಿರೆ, ಮೊಳಗಿದುದು ಆ ಬಳಿಯ ಮುನ್ನೀರ ಹರಹು,
ಸಾಯುವರ ಚೀರಾಟ, ಗೆದ್ದವರ ಸಿಂಹನಾದಂಗಳಿಡಿತುಂಬಿ,
ಇರುಳ್ ಮುಚ್ಚುವನ್ನೆಗಂ ಕಾಳಗದ ಕಳಸನ್. ಕರೆಯಿಲ್ಲ ಕೇಡು—
ಹರವಿಡಿದು ಪೇಳುವೊಡೆ ಸಾಲದು ಪಗಲ್ ಪತ್ತು : ಕೇಳಿಸಿತು ಸಾಕು,
ಅಸಿತೊಂದು ಜನಮೆಂದುಮಿದುವರೆಗೆ ಸತ್ತುದನ್ ಕಾಣನಾ ಸೂರ್ಯನ್.
ಕೌಶ—ಓವೊ ! ಕೇಡಿನ ಕಡಲ್ ತೂಳ್ದುದೇ ಪರ್ಸ್ಯನ್, ಪಾರಸಿಕ ಪೆಸರನ್ !
ಸೂತ—ಇನ್ನಿರ್ಪುದು ಕೇಳು—ಕತೆಯೊಳರೆ ಮುಗಿದಿಲ್ಲ—ಇಮ್ಮಡಿಯ ದುಃಖ.
ಕೌಶ—ಇನ್ನಿರ್ಪುದೆ ಕೇಳ್ವ ಸೌಭಾಗ್ಯ ? ಅದೆಂತಹುದೊ ಇದಕೆ ಮಿಗಿಲಿರ್ದುದು ?
ಸೂತ—ಪಾರಸಿಕರುತ್ತಮರದಾರಾರು, ಜಾತಿಯಲಿ ಶೌರ್ಯದಲಿ ತಲೆಮೆ
ತಾವಾರು, ರಾಜಂಗೆ ಬಳಿಸೇವೆಗೆಯ್ವರೊಳು ಸಚ್ಚಿನವರಾರು,
ಆ ಅರಸುಮಕ್ಕಳೆಲ್ಲರುಮಳಿದರಳಿಸಾವನ್—ಅಳಿಪೆಸರನುಳಿಸಿ.
ಕೌಶ—ಕೆಳೆಯರೇ, ಈ ಕೆಟ್ಟ ಕೇಡುಮನ್ ಕೇಳಲ್ಕೆ ಬಾಳ್ದೆನೇ, ಪಾಪಿ !
ಆವ ಸಾವನ್ ಸತ್ತರ್ ಆ ನಮ್ಮ ನಚ್ಚಿಗೆಯ ಪರ್ಸ್ಯದ ಕುಮಾರರ್ ?
ಸೂತ—ಗಡ್ಡೆ ಇರ್ಪುದು, ಕಿರಿದು, ಸಲಹಿಸಿಸ ಮುಂದುಗಡೆ, ನಾವೆಗಳ ತೊಡೆತ,
ನಾಟ್ಯಪ್ರಿಯನ್ ಪ್ಯಾನ್ ಸಂಚಾರಮಾಡುವೆಡೆ ಗೂರಸೂರಿ. ಅಲ್ಲಿ
ಆ ರಾಯಗುವರರನ್ ನಿಲಿಸಿದನ್ ಸಮ್ರಾಡೊಡೆಯನಾ ಗಡ್ಡೆಗಮಿಯೆ
ಕೆಟ್ಟುಳಿದ ಹಗೆಸರ್ಯ್ತರೆ ಕೊಲಲು, ಕೈಬೀಟಿ—ನಮ್ಮವರು ಬರಲು
ನೆರವಪ್ಪುದೆಂಬೊಂದು ನೆನಹಿನಲಿ. ಮುಂದಪ್ಪುದನ್ ತಪ್ಪುಗಂಡನ್.
ಏತಕೆನೆ, ಕಾಳಗದ ಕೀರ್ತಿಯನ್ ಹೆಲನರಿಗೆ ಸಲಿಸೆ ಭಗವಂತನ್,
ಸಂಜೆ ಕವಿಯುದ ಮುನ್ನ, ಮೈಜೋಡುಗಳ ತೊಟ್ಟು, ಹಡಗಿಂದ ನೆಗೆದು
ದ್ವೀಪವನ್ ಸುತ್ತಿರಿದು ಮುತ್ತಿದರ್. ಎತ್ತ ತಿರುಗಲುಮಿಲ್ಲದೆಮ್ಮೋರ್
ಜೀರುಗಲ್ಗಳ್, ಬಿಲ್ಲ ತಿರುವಿಂದ ಜೀವಮುಣಲ್ ಬರ್ಪ ಕೋಲ್ಗಳ್,

2

ನೆರನಿರಿಯೆ, ತೊಪ್ಪತೊಪ್ಪನೆ ಕುಪ್ಪೆಯೊಟ್ಟಿದರ್. ಕಡೆಗೆ, ಹಕ್ಕಿಗಳು
ಕೂಟ ಹೊಳೆ ಹರಿದಂತೆ ನುಗ್ಗಿ ಒಂದೆತ್ತಲುಂ ಕೂಡಿಕೊಂಡೊತ್ತಿ,
ಕುರಿದರಿದು, ಕತ್ತರಿಸಿ, ತುಳಿತುಳಿದು, ಆ ರಾಜಪುತ್ರರನ್ ಕೊಂದರ್.

ಹುತೋಶ—ಓ ದುಷ್ಟ ದೈವವೇ! ಪಾರ್ಸಿಕರ ಬುದ್ಧಿಯನ್ ನೀನೆಂತು ಮುಸಿದು
ಕೆಡಿಸಿದಯ್. ಅಥೆನಿಯನರಾವೇಶಮನ್ ಮುರಿಯೆ ಪೋದವನು ತಾನ
ನನ್ನ ಮಗನುತ್ಸಾಹಭಂಗಮನ್ ಕಂಡನೇ! ಮುನ್ನೆ ಆ ಮರಥಾನ್
ಕೊಂಡ ಬಲಿ ಸಾಲದೆಂದೀ ಪಿರಿಯ ಸಾಮ್ರಾಜ್ಯಸತ್ವಮನ್ ಕಟ್ಟಿ
ಕೊಂಡುಯ್ದು ಕೊಟ್ಟನೇ, ಪಗೆತೀರ್ಚುವೆಣಿಕೆಯೊಳ್! ಆಯ್ತಾಯ್ತು
ಮುಂದೇನು,
ಕತೆ ಮುಗಿಸು. ದುರ್ವಿಧಿಯ ಮಗನೇನು ಮಾಡಿದನು: ನೀ ಬಿಟ್ಟುದೆಲ್ಲಿ

ದೂತ—ತೀರದೆತ್ತರದೊಂದು ಗುಡ್ಡದೊಳ್ ಸಿಂಹಪೀಠದೊಳಿದ್ದು, ಯುದ್ಧಂ
ಮುರಿದುದನ್ ಶ್ರೀಕ್ಷಯಾರ್ಷನ್ ಕಂಡು, ತನ್ನಣುಗಮಕ್ಕಳ್ಗೆ ನೊಂದು,
ಬೇಗೆದ್ದು, ವಸ್ತ್ರಮನ್ ಹರಿಯುತ್ತ, ಭೂಸೈನ್ಯವೆಲ್ಲ ಹಿಮ್ಮೆಟ್ಟಲ್
ಬೆಸಸಿದನ್. ನಿಂದ ಕಡೆ ನಿಲ್ಲದೆಯೆ, ಕಣ್ಮುಚ್ಚಿ ನೆಲಕೆ ತಲೆಯೂರಿ
ಮಲಗದೆಯೆ, ಹಸಿದು ಬಾಯಾರುತ್ತ, ಕುತ್ತದಲಿ ಬರದಲ್ಲಿ ಸತ್ತು,
ದಿನದಿನಕೆ ಸೋರಿದುದು ಸಿರಿಯ ಪಡೆ. ಹಿಂದೆ ಬೆನ್ನಟ್ಟುವರ್ ಪಗೆವರ್
ಮೇಲೆರಗಿ ಕುಟ್ಟುವರ್. ಕಡೆಗೆ, ಆ ಹಾಳು ನೆಲನನ್ ದಾಂಟಿ ಕಳೆದು
ಥೆಸಲಿಯನ್, ಮೆಕೆಡೋನ್ಯಮನ್ ಕಡೆದು, ಪಂಗ್ಯಪರ್ವತದ ಬಳಿ ಸಾರ್ದು
ಸ್ಟ್ರೈಮನದ ತೀರದೊಳ್ ಬೀಡ ಬಿಟ್ಟೆವು, ದಣಿದು. ಆ ಇರುಳ್ ದೈವಂ
ಕಣ್ತೆರೆದು ನೋಡಿದುದು ನಮ್ಮನ್. ಹಿಮವಿಲ್ಲದಾ ಋತುವಿನಲ್ಲಿ
ಹಿಮ ಬಿದ್ದು, ಆಳದಗಲದ ಹೊಳೆಯ ನೀರೆಲ್ಲ ನೀರ್ಗಲ್ಲ ಗಡ್ಡೆಗಟ್ಟಿ,
ದೇವರನು ಶಪಿಸುತ್ತಿದ್ದವರೆಲ್ಲ ಹೊಗಳುವರೆ, ಕುಣಿಯುವರೆ, ಹಾಡಿ
ಹರಸುವರೆ ದ್ಯಾಸ್ ಪಿತರನನ್, ಭೂಮಿತಾಯಿಯನ್. ಬೆಳಕು ಹರಿದೊಡನೆ
ಪಡೆ ಹಾಯೆ ಮೊದಲಾಯ್ತು: ರಾಜನುಂ, ಪಿರಿಯರುಂ, ಪಡೆಯ
ಮುಂಗುಡಿಯುಂ,

ಮೊದಲೆಳೆಯ ಜಸಿಲಲ್ಲಿ. ಬಿಸಿಲೇರಿ ಕಾಯ್ವಾಗಿ—ಅಹ—ಹೊಳೆ ಕರಗಿ,
ಪದರಾಡಿ, ಬಾಯ್ಬಿಟ್ಟು, ಮೇಲೆ ಮೇಲುರುಳ್ವರನ್ ಕೆಳಗೆ ಪಾತಾಳಂ
ನುಂಗಿದುದು: ಆ ನೂಕುನುಗ್ಗಲಲಿ ಹುಯಿಲಿನಲಿ ಮೊದಲಾರು ಸತ್ತನ್
ಅವನದೇ ಪುಣ್ಯಂ! ಓ ತಾಯೆ, ಬಣ್ಣನೆಯ ಮಾತಲ್ತು, ಸತ್ಯಂ
ನಾನ್ ಪೇಳ್ವುದೆಲ್ಲಮುಂ. ಪಾರ್ಸಿಕರ ಪೂವುಕುಡಿ ಸುರುಟಿದುದು: ಸುಟ್ಟು
ಕರಿಕಾದುದೆಳೆಯರೆಲ್ಲರ ದಂಡು. ಪಿರಿಯರೇ, ನಾನ್ ಬದುಕಿ ಬಂದು
ಬಿದ್ದೆನೇ ತಾಯ್ನಾಡ ಮಡಿಲಿನಲಿ!—ನಮ್ಮಳವೆ? ಆ ದೈವಚಿತ್ತಂ!

ಮೇಳ—ಓ ಕ್ರೂರಿ, ಮತ್ಸರದ ದೈವವೇ! ಓ ರಾಕ್ಷಸರ ಚಂಡಶಕ್ತಿ!
ಆಸೆಹೆಜ್ಜೆಯನಿಟ್ಟು ಮೊಸಕಿದೆಯ ಮೊರಳಿಸುತ ಪಾರಸಿಕಜನವನ್!

ಸುತಾಶ—ಪೋಯಿತ್ತು, ಪೋಯಿತ್ತು, ಆ ಪಳೆಯ ಭಾಗ್ಯಂ! ಕೇಳ್ವೆಯಾ ಪಾಪೀ!
ಓ ಇರುಳ್ ಸುಳಿದಾಡಿ ಕಾಣಿಸಿದ ನೆಳಲ್ಗಳಾ, ನಿಮ್ಮ ಮುಂಗಾಣ್ಕೆ
ದಿಟವಾಯ್ತು! ಪಿರಿಯರಿರ, ನೀವೊರೆದ ಸ್ವಪ್ನ ಫಲ ಬರಿ ಬಯಕೆಯಾಯ್ತು.
ಆದೊಡಂ, ಜಡದಹುರಮಸ್ದನನ್ ದೈನ್ಯದಿನ್ ಬೇಡುವೆನ್; ನೀವು
ಪೇಳ್ದಂತೆ, ಭೂತಾಯ್ಗೆ, ಪಿತೃಗಳ್ಗೆ, ತಣಿಯೆರೆಯೆ ತರ್ಪಣವ ತರ್ಪೆನ್.
ಕೈಮೀರಿಹೋಯ್ತು ಹಿಂದಿನದೀಗ: ಶುಭಮಕ್ಕೆ ಮುಂದೆ ಬರಲಿಹುದು!
ಈ ಎಡರನೊಳ್ ನಿಮ್ಮ ನಲ್ಮೆನನ್, ಜನಮುಂಜದಂತೊಳ್ಳುನುಡಿದು,
ನಂಬುಗೆಯನುಳಿಸುವುದು; ದ್ರೋಹಮೆಣಿಪರನೆಲ್ಲ ಕಾದು ತಡೆಯುವುದು.
ಒಳಗಣಿನ್ ನಾನ್ ಬರ್ಪ ಮುನ್ನಮೇ, ನುಗಸಿಲ್ಲಿಗೈತಂದೊಡವನನ್
ಸಂತೈಸಿ ಮೆಲ್ನುಡಿಗಳಿನ್ ಮನೆಗೆ ಕರೆತನ್ನಿ: ಕೇಡಡಸಿದಾಗಳ್,
ಕೇಡಿಂಗೆ ಕೇಡನೇ ಕೂಡಿಸುವುದೆಮ್ಮರಿವು: ಅಂತಾಗಬಾರದು.

[ಕೆಳದಿಯರೊಡನೆ ಹೋಗುವಳು.]

ಮೇಳ

ದೇವಾಧಿದೇವಾ, ಮಹದೇವ, ನೀನ್ ಮುರಿದೆ ಪಾರಸಿಕರುಕ್ಕನ್.
ಮೊದಲೆತ್ತಿ ಸಾಮ್ರಾಜ್ಯಸುಖವಿತ್ತು, ಮುನಿದೀಗ ನೀನ್ ಮುರಿದೆ
ಸೊಕ್ಕನ್.
ಮಿಗಿಲಾದ ಹೆಮ್ಮೆಮೆರೆ ಪಲಪಡೆಯ ಪಲರಾಣ್ಮರೀಗೆತ್ತ ಪೋದರ್?

ಸೂಸಪುರದೆಕ್ಕಟಸದಾ ಕೋಳಿನ ಜೋಡಿಸವರತ್ತ ಬರದಾದರ್ !
ಕತ್ತಲೆಯು ತೆರೆಯು ಮರೆಯಾದರ್,
ನೀನಮರೆ ಕಣ್ಣ ಮರೆಯಾದರ್.
ನಳಿತೋಳ ಪ್ರೊಸ್ನ ಸೆಳೆಯೆಳವೆಂಡಿರತ್ತತ್ತು
ಮೊಗದೆರೆಯ ಕೀಳ್ವರ್.
ಹೊಳೆಯಾಗಿ ಕಣ್ಣ ನೀರಿಳಿಯುತಿರೆ, ಮೆಯ್ಮ್ರತ್ತು
ತಾಯ್ವಿರಹ ಬೀಳ್ವರ್.
ಹೊಸ ಒಲುಮೆ ಹೂವಾಗಿ ಹಣ್ಣಾಗದಾ ಮುನ್ನೆ,
ತನ್ನ ನನ ಕಳೆದುಕೊಂಡಿಸಿಯಳ್
ಒಸವಳಿದು ಸಿರಿಮಂಚದಾ ಸಲಿಸಣ್ಣದೆಯೆ,
ತನ್ನೊಳೇ ಬಾಡುವಳು ತಸಿಯಳ್.
ಅಸರೊಹಸೆ ನಾಸುಮಿದೊ ಬಾಡುವೆಸು, ಜೀಳುವೆಸು, ಕೀಳುವೆಸು–
ನಾಡನ್,
ಆ ಪ್ರೋಡ ಪೀರರನ್, ನೆನೆನೆನೆದು ಪಾಡುವೆನು ಕಟ್ಟಳಲ, ಕೂರಳ
ಪಾಡನ್.

೧.೧

ಏಷ್ಯಮಾತೆ ಮಕ್ಕಳಳಿಯೆ
ಜಕ್ಕಿ, ಜಕ್ಕಿ, ಅಳುವಳು.
ಶ್ರೀಕ್ಷಯಾರ್ಷ ಕರೆದನಯ್ಯೊ,
ಶ್ರೀಕ್ಷಯಾರ್ಷ ಕಳೆದನಯ್ಯೊ,
ಶ್ರೀಕ್ಷಯಾರ್ಷ ಪಡೆಯನೆಲ್ಲ
ಮುರಿದನೆಂದು ಹಳಿವಳು.
ಸೂಸಪುರದ ಮಕ್ಕಳೆಲ್ಲ
ದರ್ಯವುಷನ ನೆನೆವರು.
ಬಿಲ್ಲನೊದರಿ ಗೆಲ್ಲಗೊಂಡು
ಮಗುಳ್ವನೆಂದು ಹೊಗಳ್ವರು.

೧.೨

ಕಡಲ ಗೆದ್ದ ಕಲಿಗಳೆಲ್ಲ
ಕಡಲಿನ ಪಾಲಾದರು.
ನಾವೆಗಳನು ಕರೆದನಯ್ಯೊ,
ನಾವೆಗಳನು ಕಳೆದನಯ್ಯೊ,
ನಾವೆಗಳನು ಮೂಕಿ ನೂಕಿ,
ಯೋನರಿಂದ ಮುರಿದರು.
ಸೇನೆಗಳನು ಬಲಿಯ ಕೊಟ್ಟು,
ತಾನೊಬ್ಬನೆ ಉಳಿದನು.
ಯೋನರೂರ ಕೊಳದೆ ಬಿಟ್ಟು
ತಾನು ಬದುಕಿ ಬಂದನು.

೨.೧

ಮಿಕ್ಕವರು ಮೊದಲ ಕೊಲೆಯಾದರೋಪ್ರೋ,
ಸಲಹಿಸಿದ ಕರೆಗೊಕ್ಕಲಾದರಾಹಾ,
ನೆಲದಲ್ಲಿ ಹುದಿಯುಡೆಯೆ ಹೋದರೋಹೋ,
ನಿಟ್ಟುಸಿರ ಬಿಟ್ಟುಬಿಟ್ಟುಗಳಲ್ಲಿ ಕೊರಳಿಂದ ಹೊರಳಿ ಹೊರಳಿ,
ಕೆಟ್ಟ ಕೇಡಿದೆಯೊಳಗೆ ಹುದುಗಟ್ಟಿ, ಕೊಳೆಬಿದ್ದುರುಳಿ, ಉರುಳಿ,
ಉಕ್ಕುಕ್ಕಿ, ಅಳಿ, ಬನ್ನಿ, ಓ, ಓ.

೨.೨

ಅಲೆಯೆಸೆದು ಕೊಳೆನಾತವಾದರೋಪ್ರೋ,
ಮರಿಮೀನ ಬಾಯ್ಗೆ ತುತ್ತಾದರಾಹಾ,
ತಿಳಿಗಡಲ ನೆಗಕೊಡಲ ಹೊಕ್ಕರೋಹೋ,
ಒಡೆಯ ಬಾರದ ಕೊರಗು ಮನೆಗೆ, ಇನಿಯ ಬಾರದ ಕೊರಗು ಹೆಣ್ಗೆ,

ಮಕ್ಕಳಿಲ್ಲದ ಕೊರಗು ಮುಪ್ಪಿಂಗೆ, ಕಾವರಿಲ್ಲದ ಕೊರಗು ಮಕ್ಕಳ್ಗೆ,
ಕೊರಗು, ಕೊರಗಳಿ, ಬಸ್ಸಿ, ಓ, ಓ.

೩.೧

ಅಯ್ಯೊ, ಪರ್ಸದ ರಾಜ್ಯವೆಲ್ಲ,
ದ್ರೋಹಭಯಕೊಳಗಾಯಿತಲ್ಲ!
ಏಷ್ಯದಾ ಸಾಮಂತರೆಲ್ಲ
ಪೊಂದೆರೆಯ ತೆರಲೊಲ್ಲರಲ್ಲ!
ಅಖಿಮಿಸಿಯರಾ ಪೀಠದಡಿಯಲ್ಲಿ
ಅಷ್ಟ ಬದ್ದೋಲಗಿಪರಿನ್ನಿಲ್ಲ:
ಸಡಿಲಿದುದು ಸಾಮ್ರಾಜ್ಯ: ರಾಜರ ಭಯವೆ ತೊಲಗಿತು: ಹೋಯ್ತು
ಬಲವೆಲ್ಲ.

೩.೨

ಜನರ ಬಾಯ್ಗಳ ಕಟ್ಟು ಕಳಚಿತು:
ಪಡೆಯ ಮಾತೋ ಸ್ವೇಚ್ಛೆಯಾಯಿತು:
ಹಿರಿಯರೆಂದೊಡೆ ಭಕ್ತಿ ಹೋಯಿತು:
ಕೇಳ್ವಾಡಿತೆ ಆಟವಾಯಿತು:
ನಮ್ಮ ನೊಗವೋ ಬಿದ್ದು ಹೋಯಿತು:
ಸಲಹಿಸಿದ ಕೋಲೆ ಜಡ್ಡುತೆ ಬತ್ತಿತ್ತು:
ದೊರೆಯಿಸಿನ್ನಾರ್ ದೇವರೆನುವರು? ಪರ್ಸಕಿನ್ನಾರ್ ಪೂಜೆ ಸಲಿಸರು;
ಪೆರ್ಮೆ ಮುಗಿಯಿತ್ತು.

[ಹುತಾಶ, ಕೆಳದಿಯರೊಡನೆ]

ಹುತಾಶ—ಕೆಳೆಯರೇ, ಕೇಡನರಿತವರೆಲ್ಲ ಬಲ್ಲರಿದ—
ಕೇಡುಹೊಳೆ ಕೊಚ್ಚಿ ಹರಿವಂದೆಂತು ನಮ್ಮ ಬಗೆ
ಬೆದರುವುದು ಕಂಡುಕಂಡುದಕೆಲ್ಲ—ಭಾಗ್ಯದಲೆ

ನಲಿನಲಿದು ಕುಣಿಯುತಿರೆ, ಆ ಭಾಗ್ಯವೇ ನಮಗೆ
ನೆಲೆಯೆಂದು ನೆಚ್ಚುವುದು : ಅಂತೆ, ನನಗಿಂದೆಲ್ಲ
ಭಯ ತುಂಬಿ ತೋರುವುದು. ದೈವದ ವಿರೋಧವೇ
ಕಣ್ಣೆತ್ತ ಮಿಂಚುವುದು, ಕಿವಿಗಶುಭಗೀತೆಯೇ
ಮೊಳಗುವುದು, ಹೊಲಬುಗೆಟ್ಟು ಸಿರೆಲ್ಲ ಬೆಚ್ಚುವುದು.
ಅದರಿಂದ, ರಥವನ್ನಿಳಿದು, ಭೂಷಣಂಗಳ ಕಳೆದು,
ಸಾಮ್ರಾಜ್ಯವೈಭವವ ತೆಗೆದಿಟ್ಟು, ಬೀಡಿಂದ
ಕಾಲ್ ನಡಗೆಯಲಿ ಬಂದೆ—ಇದೊ ತಂದೆ ತನಿಗಳನು,
ನನ್ನ ಮಗನಯ್ಯಂಗೆ, ಪಿತೃಗಳಿಗೆ, ತನಿಯೆರೆಯೆ :—
ಅಚ್ಚ ಹಸು ಕರೆದ ಈ ಇನಿದಾದ ಬೆಳ್ಪಾಲು,
ಹೂಗೆಲಸಿ ಚಿಟ್ಟಜೇನಿಳಿಸಿದೀ ಜೆಂಜೇನು,
ಕೊಳದ ಕನ್ನೆಯರೀವ ತಿಳಿಯಾದ ತಣ್ಣೀರು,
ಕಾಡತಾಯಿಂದೊಗೆದ, ಕುಡಿವರಾನಂದದಾ
ಬಳ್ಳಿಗಳ ದ್ರಾಕ್ಷಿರಸ, ಎಳಹಸುರುಹೊಂದಳಿರ
ಸೊಂಪೆಲೆಯ ಹಿಪ್ಪೆಯಲಿ ಹಿಳಿದ ಈ ಕಮ್ಮೆಣ್ಣೆ,
ಈ ಹೂವುಕಟ್ಟುಗಳು, ಎಲ್ಲ ಹೆರುವೀ ನಮ್ಮ
ಭೂತಾಯ ಪುಟ್ಟಮಕ್ಕಳು. ಬನ್ನಿ, ಕೆಳೆಯರಿರ,
ತನಿಯೆರವೆ ಕೆಳಲೋಕವಾಸಿಗಳಿಗೀ ಸ್ಥಳದೆ:
ನೀವೆಲ್ಲ ಭಕ್ತಿಯಲಿ ಸೂಕ್ತವನು ಪಾಡಿ
ದರ್ಯವುಷದೇವನನ್ ಕರೆದು ಬರಮಾಡಿ.

ಮೇಳ

ಓ ರಾಣಿ, ಪಾರ್ಸಿಕರ ಪೂಜ್ಯಳೇ
ತನಿಯನೆರೆ ಕಿಳ್ನೆಲದ ಬೀಡಿಂಗೆ ನೀನು.
ನಾವು ಸೂಕ್ತವನೆತ್ತಿ ಪಾಡುವೆವು
ಕೇಳ್ವವೊಲು ಕೃಪೆಯಿಟ್ಟು ಕೆಳಗೊಯ್ಯುವವರು.

ಕತ್ತಲೆಯೊಳಾಳ್ದ ಓ ಸ್ಥಾನದೇವತೆಗಳಾ,
ಓ ಭೂಮಿ, ಓ ಹರ್ಮೀಸ್, ಓ ಪ್ರೇತರಾಜಾ,
ಬೆಳಕಿಂಗೆ ದರ್ಯವೃಷನಾತ್ಮನನು ಕಳುಹಿ.
ನಾಡ ಕೇಡಿನ ಕೊನೆಗೆ ಮದ್ದಾವುದದನು
ಪೇಳುವನು ತಾನೊಬ್ಬನವನು.

೧.೧

ಕೇಳ್ವುದೆ, ಓ ಧನ್ಯಾತ್ಮ, ದೇವತಾತ್ಮ, ರಾಜಾ,
ನಿನ್ನೆದೆಯೊಳ್ ಪೊಗಿ,
ಪರಿಪರಿಯಾ ಸರಲಿಯೊಳ್ ಪಾರ್ಸಿಕರಾ ಪಾಂಗಿನೊಳೇ
ಪ್ರಾರ್ಥನೆಯನ್ ಕೂಗಿ,
ಪೇಳುವುದು ಕೇಳುವುದೇ
ಕೀಳೆಳೆಯೊಳ್ ನಿನ್ನ ಕಿವಿ ತಾಗಿ?

೧.೨

ಓ ಭೂಮಿತಾಯೇ, ಮಬ್ಬು ನಾಡೊಳಗಾಳ್ಕೆವೆತ್ತಾ ಓ ಈಶರ್,
ಮೇಲೆ ಕಳುಹಿ ಆತನನ್.
ಸೂಸಪುರದೊಳ್ ಪುಟ್ಟಿದಾತನ್, ಅಖಿಮೆನಿಯರಾ ವಂಶದಾತನ್,
ಪಾರಸಿಕರಾ ದೇವನ್,
ಸರ್ವದ ಮಣ್ ಮುಚ್ಚಿದವರೊಳ್
ಹೆಚ್ಚಿನಾತನ್—ಮೇಲೆ ಕಳುಹಿ ಆತನನ್.

೨.೧

ನಮ್ಮೊಲುಮೆ ನೀರನ್, ನಮ್ಮೊಲುಮೆ ಹುದಿಗೆ,
ನಮ್ಮೊಲುಮೆ ಕುಪ್ಪೆ ಹಿಡಿಮಣ್ಣು!
ಓ ಐಡೋನ್ಯೂಸ್, ಪಾತದಿನ್ ನೀನ್ ಜಡಿಸು,
ಓ ಐಡೋನ್ಯೂಸ್,
ಆ ರಾಜಶ್ರೇಷ್ಠನನ್, ದರ್ಯವೃಷನನ್.

೨.೨

ಕಾೞಗದ ಪುಲಿ ತಾನ್, ಕಾೞಗದ ಪುಲಿಗೞನ್
ಪೋರ್ಕೞದೆ ಕಳೆಯುನ್, ಸಾಪಿಗೀಯುನ್.
ಅಹ, ದೇವಮಂತ್ರಿ, ಪಾರಸಿಕ ಮಂತ್ರಸಭೆ-
ಗಹ ದೇವಮಂತ್ರಿ,
ಕಾೞಗವೆ, ಸಂಧಿಯೋ, ಅವನೆ ಬಲ್ಲನ್.

೩.೧

ಬಾರಯ್, ಒಡೆಯಾ, ಈಶ್ವರ, ಬಾರಯಾ.
ಹಳೆಯೊಡೆಯಾ, ಕುಪ್ಪೆಯ ಮೇಲ್ ತೋರಯಾ.
ಪೊನ್ನ ಕೆರವನ್ ಕಾಲೊಳ್ ಮೆಟ್ಟಿ,
ತಲೆಯೊಳ್ ರಾಜರ ಮುಡಿಯನ್ ಕಟ್ಟಿ,
ಬಾರ ದರ್ಯವ್ರುಷ್, ತಂದೇ, ಬಾರಯಾ.

೩.೨

ಹೊಸ ಹಾೞ್ಪರ್ಗೞನಾಲಿಸು, ಬಾರಯಾ.
ಒಡೆಯಂಗೊಡೆಯಾ, ನೀ ಮೈದೋರಯ್.
ನರಕದಂಧತಮ ಕಣ್ಮೇಲ್ಬೀೞೆ,
ನೊಂದೆವು, ಜವ್ವನಿಗರ್ ಬಾಸ್ಗೀಳೆ;
ಬಾರ, ದರ್ಯವ್ರುಷ್, ತಂದೇ, ಬಾರಯಾ.

೪

ಅಯಯ್, ಅಯಯ್!
ಓ ರಾಜರಾಜಾ, ಸಾಮ್ರಾಜ್ಯಮನ್ ತೊರೆದು ನೀನೇಕೆ ಪೋದಯ್!
ಇಮ್ಮಡಿಯ ನೋಕ್ಕಿನಲಿ ಮರುಳಾಗಿ ನಿನ್ನ ಮಗ ತಾನೇಕೆ ಪೋದನ್!
ನಮ್ಮ ನಾವೆಗಳೆಲ್ಲ, ಇನ್ನು ನಾವೆಗೞಲ್ಲ, ಅಲ್ಲ, ಅಲ್ಲ!
ನಮ್ಮರಿಯು, ಬಾರಯ್ಯಾ, ಬದುಕಿಸಲು ನೀನಲ್ಲದಿಲ್ಲ, ಇಲ್ಲ!

[ಸಮಾಧಿಯಿಂದ ದರ್‍ಯವುಷನ ಬಿಂಬವೇಳುವುದು]

ದರ್‍ಯವುಷ್—ನಚ್ಚಿನರ ನಚ್ಚಿನರೆ, ಓ ಎನ್ನ ಜನ್ಮದ
ನೆಚ್ಚಿನೊಡನಾಡಿಗಳೆ, ಪಾರಸಿಕ ಹಿರಿಯರೇ,
ಆವ ತೊಡರೊಳ್ ತೊಡರಿ ಪೊಣರುವುದು ಸಾಮ್ರಾಜ್ಯ?
ನಿಮ್ಮ ದುಃಖದ ಗೀತೆ ಸೀಳಿ ಭೂಮಿಯನಿಳಿದು
ಏಕೆನ್ನ ನೆಚ್ಚಿಸಿತು? ಏಕೆನ್ನ ನಿಸಿದಿಗೆಯ
ಒಳೆ ಬಾಗಿ ಬಾಡಿ ನಿಂದಿರ್ಪಳೀ ನನ್ನರಸಿ?
ತನಿಯೆರೆತವೇಕೀಗ? ಸುಪ್ರೀತನಾಗುವೊಲು
ತಣಿಯುಣಿಸಿ, ಅಳಿದವರ ಕರೆತರ್ಪ ಶ್ರಾದ್ಧದಿಂ-
ದೆತ್ತಿದಿರಿ. ಇಳಿದಲ್ತು ಕೆಳಲೋಕದಿನ್ ಬೆಳಕ
ಮುಟ್ಟುವುದು: ಸ್ಥಾನದೇವತೆಗಳೋ ಬಲುಬೇಗ
ಹಿಡಿಯುವುದು, ಬಿಡುವುದೋ ಕಟ್ಟರಿದು.—ಆದೊಡಂ
ಬಂದಿಹೆನು ನನ್ನೊಂದು ಶಕ್ತಿಯಿನ್. ಹೊತ್ತು ಮೀ-
ರದೆ ಕೇಳಿ. ಏನ್ ಕೇಡು ಕಾಡುವುದು ಪರ್ಸಮನ್?

ಮೇಳ— ಅಂಜುವೆವು ಕಣ್ಣೆತ್ತಿ ನೋಡೆ,
ಅಂಜುವೆವು ನಿನ್ನೊಳಿದಿರಾಡೆ:
ಹಳೆಯ ಭಯ ನಮ್ಮ ನಡುಗುವುದು.

ದರ್‍ಯವುಷ್—ಅಂಜಬೇಡ—ಅಳಲ ಪಾಡು ಕರೆಯೆ ಬಂದೆ ಕೆಳಗಣಿನ್.
ನೀಡು ಹೊತ್ತು ನಿಲ್ಲಲಾರೆ: ಹೇಳಿ ಬೇಗ—ಏನಳಲ್?

ಮೇಳ— ಅಳ್ಕುವೆವು, ಕೂರ್ಪವನು ಕೇಳೆ,
ಅಳ್ಕುವೆವು ನಿನಗೆಲ್ಲ ಪೇಳೆ:
ಕೆಳೆ ಕೆಡುಕನೆಂತು ಪೇಳುವುದು?

ದರ್‍ಯವುಷ್—ಹಳೆಯ ಭಕ್ತಿ ಬಾಯ ಬಿಗಿದು ನುಡಿಸದಿರಲು ನಿಮ್ಮನು—
ನೀನು ಪೇಳು, ಕುಲದ ಹೆಣ್ಣೆ, ನನ್ನ ಮುತ್ತ ನಲ್ಲಳೇ,
ಪ್ರಾಣ ಕಣ್ಮಣಿಗಳ, ಸುಯ್ಲು, ಕಿರಿದರಲ್ಲಿ, ನಡೆದುದನ್.

ಕಟ್ಟಿದುದಲೆ ಆಳ್ಗೆ ಕೇಡು! ನಿಡಿದು ಕಾಲ ಬಾಳಿರೆ,
ಕಡಲೊಳೆನಿತೊ, ನೆಲದೊಳೆನಿತೊ ಅರಸಿಕೊಂಡು ಬರುವುವು.
ಹುತೌಶ—ಎಲ್ಲಿ ಆಳ ಮೆಟ್ಟಿ ಮೆರೆದು, ಭಾಗ್ಯಶಾಲಿ, ಕರುಬಿಸಿ,
ದೇವರಂತೆ ಪರ್ಸದಲ್ಲಿ ಸೂರ್ಯನೆದಿರ್ ಬಾಳಿದೆ,
ಕಂಡೆ ನುಡಿದ ಸಾವ, ಸಿಡಿಲ್ ನಾಡ ಪೊಯ್ವ ಮುನ್ನಮೇ!
ಎಲ್ಲಿ ಪೇಳ್ವೆನೊಂದೆ ಮಾತಿನಲ್ಲಿ, ಕೇಳು, ದರ್ಯವುಷ್,
ಪರ್ಸದಾಟವಾಗಿ ಹೋಯ್ತು: ಕಟ್ಟಿವು, ಮತ್ತೇಳೆವು.
ದರ್ಯವುಷ್—ಏನು? ರೋಗ ಕಾಡಿತೇ? ದ್ರೋಹ ತಲೆಯನೆತ್ತಿತೇ?
ಹುತೌಶ—ಎರಡೂ ಅಲ್ಲ; ಅಥೆನದ ಬಳಿ ಪಡೆಗಳೆಲ್ಲ ಅಳಿದುವು.
ದರ್ಯವುಷ್—ಆರು ನನ್ನ ಮಕ್ಕಳಲ್ಲಿ ಪಡೆಯ ಕೊಂಡು ಪೋದವನ್?
ಹುತೌಶ—ಧೃಷ್ಟತನದ ಶ್ರೀಕ್ಷಯಾರ್ಷ, ಬರಿದುಮಾಡಿ ರಾಷ್ಟ್ರಮನ್.
ದರ್ಯವುಷ್—ಕಾಲಾಳ್ಗಳೊ, ನಾವೆಯೊ, ಈ ಹುಚ್ಚು ಕೆಲಸಕೊದ್ದಿತು?
ಹುತೌಶ—ಇರ್ತೆರನುಂ ಇರ್ಪಡೆಯುಮನಿರ್ಕಳದೊಳ್ ನೂಂಕಿದನ್.
ದರ್ಯವುಷ್—ಆ ಅಳವಿಯ ಕಾಲಾಳ್ಗಳ್ ಕಡಲನೆಂತು ದಾಂಟಿದರ್?
ಹುತೌಶ—ಯಂತ್ರಗಳಿನ್ ಕಟ್ಟಿಸಿದನ್ ದಾರಿಗೊಡದ ತೆರೆಗಳನ್.
ದರ್ಯವುಷ್—ಯಂತ್ರದಿಂದ! ಬಗ್ಗದುದೇ ಬಿಟ್ಟದ ತೆರೆ ಬಾಸ್ಪೊರಸ್?
ಹುತೌಶ—ಆಹುದು. ದೈವಮಾವುದೊ ಹೊಕ್ಕು ಮನನಂದು ಬೆಮ್ಮಿತು.
ದರ್ಯವುಷ್—ಆಹಾ! ಪಿರಿಯ ದೈವಮದು—ಕೆಡಿಸಿತಲ್ಲ ಬುದ್ಧಿಯನ್!
ಹುತೌಶ—ಹೊಮ್ಮಿತೀಗ ಅದರ ಫಲ—ಅಳುವ ಪಾಡು ನಾಡಿನೊಳ್.
ದರ್ಯವುಷ್—ಕೇಳ್ವೆ, ಕೇಳ್ವೆ ಅಳಲ ಪಾಡ. ಬಿಡಿಸಿ ಹೇಳು ಕೇಡನು.
ಹುತೌಶ—ನಾವೆಯ ಪಡೆ ಮೊದಲು ಮುರಿದು ಕಾಲಾಳ್ ಪಡೆ ಮುರಿಯಿತು.
ದರ್ಯವುಷ್—ಈಟ್ಟಿಮಿರಿದ್ದು ಮುರಿದುಹೋಯ್ತೆ ಬಂದುಳಿಯದೆ ಆ ಪಡೆ?
ಹುತೌಶ—ಮಕ್ಕಳಳಿದ ಸೂಸಕೋಟೆ ಬೇಯುತಿಹುದು ಬಸಿರಿನೊಳ್.
ದರ್ಯವುಷ್—ಅಪಪ! ನಾಡ ಕಾವರೆಲ್ಲ, ಗಂಡರೆಲ್ಲ, ಹೋದರೇ?
ಹುತೌಶ—ಬ್ಯಾಕ್ಟ್ರಿಯದೊಳಗೊಬ್ಬನಿಲ್ಲ, ಮುದಿಯರಲ್ಲ ಮಡಿದೊರು.
ದರ್ಯವುಷ್—ಓ ಮಗನೇ! ತೂರಿದೆಯಾ ಪೋರ್ಬಲ್ಮೆಯ ಚಿಣ್ಣರನ್!

ಹುತಾಶ—ತಾನೊಬ್ಬನೆ—ಶ್ರೀಕ್ಷಯಾರ್ಷ—ಕಾಪಿಲ್ಲದೆ, ಕಾಪಲೆಯುತ—
ದರ್ಯವುಷ್—ಪೇಳು, ಪೇಳು—ಬದುಕಿಹನೇ? ಏನಾದನ್? ಉಳಿವುಂಟೇ?
ಹುತಾಶ—ಎರಡು ನೆಲವ ನೊಗವನಿಟ್ಟು ಬಂಧಿಸಿದೆಡೆ ಬಂದನು.
ದರ್ಯವುಷ್—ದಾಟಿದನೋ? ನಮ್ಮ ಕರೆಯು ಸೇರಿದೊಸಗೆ ಬಂದುದೋ?
ಹುತಾಶ—ಬಂದುದು, ಬಂದುದು, ಇಂದೆ ಎಲ್ಲ ಬಂದುದು.
ದರ್ಯವುಷ್—ಓ, ಹುತಾಶ, ಎನಿತುಬೇಗ ಕೇಡೆನಗಾತು! ಮಗನೆ, ಮಗನೆ,
ಪ್ರೊಯುಸೆ ದೌಸ್ ನಿನ್ನನಿಂತು! ಹಲವು ಕಾಲ ಸಲಲು, ಸಲ್ವ-
ದೆಂದು ಬಗೆದ ದೇವವಾಣಿ ಈಗಳೆ ಅದು ಹಣ್ಣಿದೇ!
ಕೇಡಿಗೋಡಲೆಳಸಲೊಬ್ಬ, ದೈವವವನ ತಳ್ಳುದು.
ಈಗ ನಮಗೆ, ನಮ್ಮ ಕೆಳೆಗೆ ಕೇಡ ಹಕ್ಕ ಹರಿವುದು.
ಅರಿಯದ ಮಗ, ಸಾಹಸಕ್ಕೆ, ಯೌವನಮದ ಸೊಕ್ಕಿನೆ,
ಕಯ್ಯನಿಟ್ಟು, ದಿವ್ಯ ಹೆಲೆಸ್ಪಾಂಟನೊತ್ತಿ ಕಟ್ಟಿದೆ
ದಾಸನಂತೆ ತೊಡರ್ಗಳಿಂದ, ಬಾಸ್ಪೊರಸಿನ ಶಕ್ತಿಯನ್
ತೆರೆಯ ತಡೆದು ಕುಗ್ಗಿಸುವೆ, ಹಿರಿಯ ಪಡೆಗೆ ತೆರವುಮಾಡಿ,
ಸೃಷ್ಟಿಸಹಜ ಭೂತಬಲವ ಮೆಟ್ಟಿ ನಾನು ಮೀರಿಸುವೆ,
ಎಂದು ಪ್ರಾಣಿ, ಸಾವ ಮರ್ತ್ಯನಾ ಅಮರ್ತ್ಯರೆಲ್ಲರೊಡನೆ,
ಆ ಪೊಸೈಡನೊಡನೆ, ಹುಚ್ಚ, ಸೆಣಸಿ ತಾನೆ ಕೆಟ್ಟನು.
ಆವ ವಿಕಾರ ಆತ್ಮಗೆಟ್ಟನಲ್ತೆ ಮಗನು? ಈಗಳೋ,
ನಾನು ತಂದ ಸಿರಿಗಳೆಲ್ಲ ಸಿಕ್ಕಿದ ಕೈ ಸೂರೆಯೋ!
ಹುತಾಶ—ಬುದ್ಧಿಶೂನ್ಯರೆಲ್ಲ ಸೇರಿ, ಹೇಳಿ, ಹೇಳಿ, ಕೇಳಿದನ್
ಧೃಷ್ಟತನದೊಳಾ ಕ್ಷಯಾರ್ಷ. ಮತ್ತೆ, ಮತ್ತೆ, ಒತ್ತುವರು—
ನೀನು ವೀರ, ದೇಶದೇಶಗಳನು ಗೆದ್ದು, ಪರ್ಲ ಕೆ
ಧನವ ತಂದೆ; ಅವನು ಕೋಣೆಯೊಳಗೆ ಬಿದ್ದ ಝುಳಪಿಸಿ,
ತಂದೆಯ ಸಿರಿಗೊಂದುಮಿಲ್ಲ ಸೇರಿಸಿದುದು—ಎಂದು ಜರೆಯೆ,
ಜಯವ ಬಯಸಿ ಪಡೆಯ ಕೊಂಡು ಹೆಲಸಿನೆಡೆಗೆ ನುಗ್ಗಿದನ್.
ದರ್ಯವುಷ್—ಬಳ್ಳಿತೆನಕಂಗೆಯ್ದರೆಲ್ಲರುಂ, ಪೆರ್ಮೆಯುದು!

ಮರೆಯದುದು ! ಇಂತಪ್ಪ ಭಂಗಮೆರಗದು ಮುನ್ನ
ಸೂಸಕ್ಕೆ, ವಿಷ್ಣುದಾ ಕುರಿ ಬೆಳೆವ ಬಯಲ್ಗೆಲ್ಲ
ಒಬ್ಬನಾಳ್ ಪೊಂಗೋಲ ಪಿಡಿದಾಳ್ವ ಪೆಂಪನಿ-
ತ್ತಂದನಿನ್ ದೇವರಾಜನ್. ಮೊದಲ್, ಮೇಡಸ್ ಆ
ಪಡೆಗೊಡೆಯ, ಮೇಧಾವಿ. ಅವನ ಮಗ ಜಾಣ್ಮೆಯಿನ್
ರಾಜ್ಯವನ್ ಸ್ಥಿರಗೆಯ್ದನಾತ್ಮಸಂಯಮಗೊಂಡು.
ಮೂರನೆಯನಾ ಕುರುಸ್, ಸೌಭಾಗ್ಯದೆರೆವೆಟ್ಟು,
ನಾಡೊಳೆತ್ತೆತ್ತಲುಂ ಲಕ್ಷ್ಮಿಯನ್ ಶಾಂತಿಯೊಡ-
ನಾಡಿಸುತ, ಲಿಡಿಯರನ್ ಫ್ರಿಗ್ಯರನ್ ರಾಜ್ಯದೊಳ್
ಕೂಡಿಸುತ, ಯವನರನ್ ಸಾಗರದ ತೆರೆವರೆಗೆ
ಒತ್ತಿಕೊಂಡಾಳಿದನ್ : ಅವ ದೇವರ ಮುನಿಸು-
ಮಾ ಸುಮತಿಯೊಳ್ ಪೊಗದು. ಅವನಣುಗ, ಕಂಬುಶನ್
ನಾಲ್ಕನೆಯ ರಣರಂಗಸಿಂಹನ್. ಅಯ್ದನೆಯನ್
ಆ ಮರ್ದಸ್, ಪರ್ಸದ ಕಳಂಕಂ, ಪಟ್ಟಮೊರೆಯ
ನಾಣ್ಗೆಡಿಸಿದೊಡರ್ತಫರ್ನ್ ಕೆಳೆಯರಿನ್ ಕೂಡಿ
ಕೊಲೆಗೆಯ್ದನರಮನೆಯೊಳ್. ಆಗೆನಗೆ ಕಟ್ಟಿದುದು
ರಾಜಪಟ್ಟಂ.—ವಿಜಯ ಸೈನ್ಯಮನ್ ದೆಸೆದೆಸೆಗೆ
ನಡಸಿದೆನ್, ದೆಸೆದೆಸೆಗೆ ಕೀರ್ತಿಯನ್ ಬೆಳಗಿದೆನ್—
ಈ ಸರ್ವನಾಶವನ್ ತಾರೆನೇ ಪರ್ಸಕ್ಕೆ !
ಕ್ಷಯಾರ್ಷನ್, ನನ್ನ ಮಗನೆಳೆಯನಾಗೆಳೆತನದ
ಬುದ್ಧಿಯನ್ ಮಾಡುವನ್, ನಾನ್ ಪೇಳ್ದ ಬುದ್ಧಿಯನ್
ಕೈಬಿಟ್ಟು. ನೀವ್ ಬಲ್ಲಿರ್, ಓ ಎನ್ನ ಮಂತ್ರಿಗಳೆ,
ನಾವೊಮ್ಮೆ ಗೆಲದೊಡೆಯು, ಸಾಮ್ರಾಜ್ಯವುಳಿಸಿದೆವು.
ಮೇಳ—ಓ ಸ್ವಾಮಿ ದರ್ಯವುಷ್, ಹೇಳೆಮಗೆ, ಕೊನೆಯೇನು—
ಈ ನಿನ್ನ ಮಾತುಗಳ ಪರಿಣಾಮ ? ಬೆಳಸುವುದು
ಮತ್ತೆಂತು ಪರ್ಸಸಾಮ್ರಾಜ್ಯದಾ ಬಲಗಳನ್ ?

ದರ್ಯವುಷ್—ಮತ್ತೊಮ್ಮೆ ಹೆಲಸಿನೆಡೆಗೆತ್ತದಿರಿ—ಮೇಡಿಕರ
ಪಡೆಯೆನಿತು ಪೃಥ್ವಿಯುಂ. ಏಕೆಂಬರೋ, ಕೇಳಿ,
ಅಲ್ಲಿ ನೆಲನೇ ತನ್ನ ಮಕ್ಕಳ್ಗೆ ಕಾದುವುದು.
ಮೇಳ—ನಿನ್ನ ನುಡಿಗೇನ್ ಪುರುಳ್? ನೆಲನೆಂತು ಕಾದುವುದು?
ದರ್ಯವುಷ್—ಬರ ಒಡಿದು ಕೊಲ್ಲುವುದು ಪಡೆ ಪೆರ್ಚಿದನಿತುಂ.
ಮೇಳ—ಒಳ್ಳೆಯಾಳ್ಗಳನಾಯ್ದು ಕಳುಹಿದೊಡೆ ಏಂ ತಿಂಬಿನ್ ?
ದರ್ಯವುಷ್—ಹೆಲಸನಲೆಯುತ್ತೀಗಳುಳಿದಿರ್ಪ ಪಡೆಗಳೊಳ್
ಒಂದು ಹಿಡಿ ಮತ್ತೆ ಮರಳದು ಬದುಕಿ ಪರ್ಸಕ್ಕೆ.
ಮೇಳ—ಏನೆಂದೆ? ಆ ಉಳಿದ ಪಾರ್ಸಿಕರ ದಳಗಳುಂ
ಬಾರವೇ ಹೆಲ್ಲೆಗಡಲನ್ ದಾಂಟಿ, ಯೂರೋಪಿನ್ ?
ದರ್ಯವುಷ್—ಕೆಲವರ್, ಪಲವರೊಳ್. ದೇವವಾಣಿಗಳೆಲ್ಲ
ದಿಟವಾಗೆ—(ಏಂದು ದಿಟವಾಗವವು ?)—ನಾವೀಗ
ಕಂಡುದೇ ಕೇಳದೇ ಮುಂದೆಯೂ ಆಗುವುದ?
ಪೊಳ್ಳಾಸೆಯಿಂದವನ್ ತಿರುಳಾಯ್ಕೆಯನಾಯ್ದು, ಆ
ಬೋಯೋಷಿಯದ ಬಯಲ ತಗ್ಗೊಳ್ ಅಸೋಪನಿನ
ದಡದಲ್ಲಿ ಚಳಿಗಾಲವನ್ ನೂಂಕೆ ಬಿಡಿಸುವನು.
ಏನವುದದರಿಂದ? ದುಷ್ಕಾರುಕನ ದುಃಖ!
ನಿಸ್ತೃಪಿಗಳ ಮದಕೆ ಕಾದಿರ್ಪ ಶಿಕ್ಷೆ!
ಹೆಲಸಿಂಗೆ ಹೋದವರು ಭಯ ಮರೆತು ಕೊಬ್ಬಿನಲಿ
ದೇವಾಲಯಂಗಳ್ಗೆ ಕಿಚ್ಚಿಕ್ಕಿ ಸೂರೆಗೆಯ್ದರ್.
ಭಕ್ತಿಯೆಂಬುದ ಕಾಣೆ—ಬಲಿಪೀಠಗಳನೊಡೆದು,
ಪ್ರತಿಮೆಗಳ ಕಿತ್ತೆಸೆದು, ಪೂಜೆ ಸಾಮಗ್ರಿಗಳ-
ನಿಟ್ಟಾಡಿ, ಹೊಲೆಗೆಯ್ದರೆಲ್ಲಮಂ. ಮಾಡಿದೀ
ಪಾಪಂಗಳುಣ್ಣದೇ ಪೋಕುಮೇ? ಉಣುತಿರ್ಪರ್,
ಇನ್ನುಮುಣುವರ್, ಕಟ್ಟಿದಾ ಬುತ್ತಿ ನವೆಯುದೆಯೆ.
ಪ್ಲಾಟಿಯದ ನಿಟ್ಟೆಗಳ ಮೆತ್ತುವುದು ನೆತ್ತರಿನ್

ಡೋರಿಕರ ಕಯ್ಪೋಟಿ. ಮೂರುತಲೆಗಳ್ಗಿದು
ಕಲಿಸುವುವು ಮಾತಿಲ್ಲದೊಟ್ಟೊಟ್ಟು ಹಣಾಹಣಿಬೆ—
ಆಳಲ್ಲಿ, ಮರ್ತ್ಯಂಗೆ, ಹಮ್ಮು ಬಗೆ, ಎಚ್ಚರಿಕೆ ಎಂದು.
ಆ ಸೊಕ್ಕು ಹೂವಾಗಿ, ಕೊರಗಿನಲಿ ತೆನೆಯಾಗಿ,
ಆಪ ಹಂಬಲುಮಳಿದ ಬೆಳೆಯಾಗಿ, ಕೊಯ್ಯುವುದು
ಪಾಪಫಲವನು, ತಿಳಿ: ನೆನೆ ಅಥೆನ್ಸನ್, ಹೆಲಸನ್.
ಆವನುಂ ಹೆಬ್ಬಯಕೆಗಳವತ್ತು, ಮಿತಿಮೀರಿ,
ಕಯ್ಗೆ ಬಾರದ ಗುರಿಗೆ ಕಟ್ಟೊಲ್ಮೆಯನ್ ತೆತ್ತು,
ಕಳೆಯಬಾರದು ದೇವರಿತ್ತೊಂದು ಭಾಗ್ಯವನ್.
ಗಗನಕ್ಕೆ ನೆಗೆದಡರುವರ ಹಮ್ಮುಗಳ ಮೆಟ್ಟಿ,
ತಕ್ಕ ಕಾಲದೆ ಕೊಬ್ಬನಿಳಿಸದಿರನಾ ಜ್ಯೂಸ್.
ಆದುದರಿನವನಿಲ್ಲಿ ಬಂದಾಗ, ಮಂತ್ರಿಗಳೆ,
ಒಳ್ಮಾತುಗಳನಾಡಿ ಬುದ್ಧಿಯನು ಹೇಳುವುದು,
ಮದ ಹೆಚ್ಚಿ ಮತ್ತೊಮ್ಮೆ ದೇವರನು ಕೆಣಕದಂತೆ.
ನೀನುಂ, ಕ್ಷಯಾರ್ಷನಾ ಮುತ್ತಜ್ಜಿ, ನಲ್ಲರಸಿ,
ಓ ಹುತಾಶಾ, ಹೋಗು, ಒಳಗಣಿನ್ ಶುಭ್ರತಮ-
ವಸ್ತ್ರವನ್ ಕೊಂಡು ಬಾ: ಎದಿರ್ಗೊಳಲು ಕಂದನನ್.
ದುಃಖದೊಳ್ ಗೀಳಿಟ್ಟ ಬಟ್ಟೆಯೊಳ್ ಬರ್ಪವನ
ಸಂತೈಸು ಮೆಲ್ನುಡಿಗಳಿನ್—ನಿನ್ನ ಮಾತೊಂದ
ಕೇಳ್ಗವನು. ನಾನಿನ್ನು ತೆರಳುವೆನು ನೆಲದಡಿಯ
ಕತ್ತಲೆಗೆ. ಓ ಮಂತ್ರಿವರ್ಯರೇ, ಮುದಿಯರೇ,
ಕೇಡು ಬಳಸಿರ್ಪುಡಂ, ಸಂತೋಷದೊಳಗಿರಿಸಿ
ಚಿತ್ತವನ್. ಸತ್ತರ್ಗೆ ಸಿರಿಯು ಸುಖವಿಲ್ಲ!

[ಮರೆಯಾಗುವನು.]

ಮೇಳ—ಹಿಂದಾದ, ಮುಂದೆ ಬರುವೆನಿತೊರಿಂದು ಕೇಡುಗಳು
ಪರ್ಷಜನಕಕಟಕಟ! ಕೇಳಿ ಎದೆ ಒಡೆದುದೇ!

ಹುತೋಶ—ಓ ದೈವವೇ, ಎನಿತು ದುಃಖಗಳು ಬಸಿರಲ್ಲಿ
ಬೆಂಕಿಯುಸು ಸುರಿವುವು! ಮಗ, ಚಕ್ರವರ್ತಿ,
ಚಿಂದಿಯುಲಿ ಬರೆ, ಬಂತು ಕಣ್ಣಾರ ಕಾಣ್ಕೆನೋ!
ಶುಭವಸ್ತ್ರಗಳ ಪೋಗಿ ಅಣಿಗೆಯ್ವೆ. ಓ ಕಂದ,
ನಿನ್ನ ತೊರೆಯೆನು ಬಂದ ಈ ದೊಡ್ಡದುಃಖದೊಳ್!

[ಕೆಳದಿಯರೊಡನೆ ಹೋಗುವಳು.]

ಮೇಳ

೧.೧

ಏನ್ ಪೆರ್ಮೆ, ಏನ್ ಚೆಲುವು, ಏನ್ ಪೆಸರ್ ಪರ್ವಂ,
ಏನ್ ಜನರ ಹರ್ಷಂ,
ನಾಡಿನುತ್ಕರ್ಷಂ,
ಮಿತ್ರರಸ, ಗೆಲುವರಸ, ಚೆನ್ನರಸ, ಮೊನ್ನರಸ ದೇವನಮನಂದು
ದರ್ಶ್ಯವುವನೆಮ್ಮ ನಾಳ್ವಂದು!

14312

೧.೨

ಧರ್ಮ ಬಳಸಿದುದೆಮ್ಮ, ಶಕ್ತಿ ಬಳಸಿದುದು,
ಸೌಖ್ಯ ಬೆಳಸಿದುದು,
ಬಾಳ ಕುಣಿಸಿದುದು,
ಉಲಿಉಲಿದು, ಸುಲಿಸುಲಿದು, ಗೆಲಿಗೆಲಿದು, ನಲಿನಲಿದು ಪೋರ ಪಡೆ ಬಂದು
ನಗಿಸಿದುದು ಮನೆಯವರನಂದು.

೨.೧

ಅವನ ಜಯಮಾಲೆ
ಎನ್ನಳವೆ ಪೊಗಳೆ ಸಾಲೆ!
ಉರಿದ ಪೊಳಲೆನಿಸಿತು!
ಬಿರಿದೆದೆಗಳೆನಿಸಿತು!
ಜೀವೊಡೆಯ ಜೀಯೆಂದ ನಾಡೊಡೆಯುರೆನಿಸಿತು!

೨.೨

ಆಡುತ್ತ ಗೆಲ್ವನ್,
ನಸುನಗುತ ನೋಡುತ್ತ ಗೆಲ್ವನ್,
ಬಲೆಗೆ ಬಲಿಯಾಗಿ
ಬಿಳದ ಹುಲಿಯಾಗಿ,
ಬಳಸುತ್ತ ಹೊಂಚುತ್ತ ಕೊಲ್ವ ಕಲಿಯಾಗಿ!

೩.೧

ಎನಿತೊಂದು ನಾಡುಗಳನಾಳಿದುದು ಸೂಸ,
ಹೊಮ್ಮುಡಿಯ ನಮ್ಮ ಸೂಸ!
ಎನಿತೊಂದು ದೀವಿಗಳನಾಳಿದುದು ನಗರಿ,
ಈ ನಮ್ಮ ರತ್ನನಗರಿ!
ಆತನಾಳಿಕೆಯಲ್ಲಿ ನೆಮ್ಮದಿಗೆ ನೆಮ್ಮಾಗಿ,
ಬಾಳಿದೆವು ಮೈತ್ರಿಯಲಿ ಬೆಸೆದು ಹೆಮ್ಮೆಗಿಲಾಗಿ,
ಮಿಥ್ರದೇವನ ಕಣ್ಣಿಗಾನಂದವಾಗಿ!
ಭೂಮಿ ನಿಮಿರಿದ ಕಡೆಯ ಕರೆಗೆ,
ಸೂರ್ಯ ಬೀಳುವ ಕಡಲ ತೆರೆಗೆ,
ಹಬ್ಬಿದುದು ನಮ್ಮ ತೋಳ್ ನಳನಳಿಸಿ ನೀಳವಾಗಿ!

೩.೨

ಹಬ್ಬಿದುದು ನಮ್ಮ ತೋಳ್ ಕಡಲಿನೊಳಗೆ,
ದೀವಿಯಿನ್ ದೀವಿಯೊಳಗೆ,
ಲೆಸ್ಬಾಸ್, ಖೀಯಾಸ್, ಸೇಮಾಸ್, ಪೇರಾಸ್,
ನ್ಯಾಕ್ಸಾಸ್, ಮಿಕೊನಾಸ್, ರ್ಹೋಡ್ಸ್,
ಲೆಮ್ನಾಸ್, ಪೇಫಾಸ್, ಸೈಪ್ರಸ್, ಸಲಮಿಸ್—
ತಾಯ ಹೆಸರನು ಕೊಂಡ ಆ ಮಗಳುದೀವಿ, -
ನಮ್ಮ ದುಃಖದ ಮೂಲದಾ ಹೆಸರ ದೀವಿ—
ಅಕ್ಕತಂಗಿಯರಂತೆ ದೀವಿ,

ಬಳ್ಳಿಗೊಂಚಲಿನಂತೆ ತೀವಿ,
ಹುಟ್ಟಿದುದು ನಮ್ಮ ತೋಳ್ ನಡನಡುಂ ಬೆದರೆ ಅಥೆನ್ಸ್ !

೪

ಆಳಿದನು ಧರ್ಮದಲಿ, ನ್ಯಾಯದಲಿ, ನೀತಿಯಲಿ,
ಬಾಳಿದರು ಪ್ರಜೆಯೆಲ್ಲ ಭಕ್ತಿಯಲಿ, ಭೀತಿಯಲಿ,
ಪರ್ಸರೆಲ್ಲಾ ಕೂಡಿ ಯೋನರೆಲ್ಲಾ !
ಶಾಂತಿಯಲಿ, ಶೌರ್ಯದಲಿ, ಕುಶಲದಲಿ, ಕಲೆಗಳಲಿ,
ಒಬ್ಬರೊಬ್ಬರ ಮೀರಿ ಬಾಳ್ದೆವಲ್ಲಾ !
ದರ್ಯವುಷ್ ತೋಳಿನಲಿ ಬೆಳೆದೆವಲ್ಲಾ !
ಆಳ ಮುಂದಾಳತುದ ನೆನೆದೆವಲ್ಲಾ !
ಇನ್ನೆಲ್ಲ ಮಾಯವಾಯ್ತು, ಹೆಬ್ಬಯಕೆ ಮುಂಚಿಹೋಯ್ತು,
ಪಡುಗಡಲಿಳಿತವಾಯ್ತು, ಮತ್ತೆ ತಲೆಯೆತ್ತದಾಯ್ತು,
ದೈವ ಮೊಗಮುರಿದೆಮ್ಮ ಕೆಟ್ಟೆವಲ್ಲಾ !

[ಕ್ಸಯಾರ್ಷ]

ಕ್ಸಯಾರ್ಷ— ಅಯ್ಯೋ, ಅಕಟಾ, ನಿರ್ಭಾಗ್ಯನ್ ನಾನ್ !
ನುಳಿವನೆ ತೋರದೆ ಪೊಯ್ದತ್ತೆನ್ನನ್
ನಿರ್ದಯ ವಿಧಿಯುದು, ಸರ್ವರ ಮುರಿದು.
ಅಕಟಾ ! ನಾನೇಮೊಗದೊಳ್ ಕಾಣ್ಬೆನ್
ನೆರೆದೀ ಹಿರಿಯರಸೀಗಳ್ ಸಭೆಯೊಳ್ !
ಆಹಾ, ದೇವಾ, ಸಾಯೆನೆ ನಾನುಂ,
ಪೋದಾ ವೀರರ್,
ಪೋದಾ ಧೀರರ್
ಸತ್ತ ಸಾವಿನಲಿ ಪಾಲನ್ ಪಡೆದೇ !

ಮೇಳ— ಅಕಟಾ, ರಾಜಾ, ಪಡೆಯೇನಾಯ್ತಯಾ ?
ಇರಿಯಲ್ ಪೋದಾ ಪಡೆಯೇನಾಯ್ತಯಾ ?
ಪರ್ಸದ ಪೂಜ್ಯತೆ ಬಯಲಾಯ್ತೋ !

ಕುಡುವಾಳಿನ್ ಬಿದಿ ಕೊಯ್ದತ್ತೇ!
ಬೆಳಸಿದ ಮಕ್ಕಳಿಗಳುವುದೆ ನಾಡು,
ಶ್ರೀಕ್ಷಯಾರ್ಷನಾ ಹೆಮ್ಮೆಯ ಜೋಡು—
ಕೋಟಿಕೋಟಿ ಜನ, ಪರ್ಸದ ಪೂವು,
ತುರುಗಿತು ಜವರಾಯನ ಬಾಯ್‌ಸೋವು!
ಪಸ್ಸದ ಮೆಯ್ಸಿರಿ, ಜಲ್‌ಜಾಣರ್,
ಕತ್ತಲೆನೆಲದೊಳ್ ಕಣ್‌ಕಾಣರ್!
ಅಯ್ಯೋ, ಅಯ್ಯೋ, ಎಲ್ಲಿ, ಎಲ್ಲಿ
ಆ ಸಮ್ಮೊಲುಮೆಯ ಬಲ್ಲಾಳ್ಗಳ್?
ಪಸ್ಸವೆ ಕಳಸೊಳ್ ಕಯ್‌ಕಾಲ್ ಮುರಿಯೆ
ಪೊಯ್ದುವಸಾರಯ್, ಓ ದೊರೆಯೇ!

೧.೧

ಕ್ಷಯಾರ್ಷ— ನಾನೇ, ನಾನೇ, ರಾಜ್ಯವನಳಿದೋನ್,
ಲಜ್ಜೆ ಕುಲಕ್ಕೆ, ನಾಡಿಗೆ ಕೇಡಲಿ,
ಅಳಿ ನನಗಾಗಿ, ಅರ್ಥತೆಗೆಟ್ಟೋನ್
ಅಳಿ ನನಗೆ!

ಮೇಳ— ರಾಜನ್ ಬರೆ, ಜಯಮಂಗಳಗೀತಂ,
ಈಗಳೊ, ರಾಜಾ, ರೋದನಗೀತಂ,
ಕಣ್ಣೀರ್ ಸುರಿಸಿ, ಸಾವಿನ ಮನೆಯೊಳು
ಅಳುವೆವಿದೋ!

೧.೨

ಕ್ಷಯಾರ್ಷ— ಅಳಿ, ಅಳಿ, ಎಲ್ಲಾ ಅಳಲುಕ್ಕುಕ್ಕೆ,
ಅಳಲಿನ ಪಾಡಿನ ತೊರೆಯುಕ್ಕುಕ್ಕೆ;
ಎನ್ನಿನ್ ತಿರುಗಿದನಾ ಮಹದೇವನ್,
ಎಮ್ಮ ಭಾಗ್ಯವನ್ ಕಾವನ್ ದೇವನ್—
ಅಳಿ ನನಗೆ!

ಮೇಳ— ಅೞುವೆವು, ಅೞುವೆವು, ಅೞಲುಕ್ಕುಕ್ಕಿ,
ಪೊೞಲಿನ, ನಾಡಿನ ಪೊರೆಯುಕ್ಕುಕ್ಕಿ,
ಕಡಲೊೞ್ ಕರಗಿದ ಮಕ್ಕೞ ನೆನೆದು,
ಕಾಡೊಳ್ ಕೊಳೆವಾ ಕಲಿಗಳ ನೆನೆದು,
ಅೞುವೆವಿದೋ !

೨.೧

ಕ್ಷಯಾರ್ಷ— ಯೋನರ್ಗೊಲಿದನ್ ಯುದ್ಧದ ದೇವನ್,
ಆ ಏರೀಸ್ !
ಯೋನರ ನಾವೆಗೆ ಬಲ್ಲನ್ ಕೊಟ್ಟನ್,
ಪರ್ಷದ ನಾವೆಗೆ ಕಾಳ್ಕಿಚ್ಚಿಟ್ಟನ್,
ಅಯೊ, ವಿಧಿಯೇ !

ಮೇಳ— ಅಪಪಾ ವಿಧಿಯೇ, ಅಯೊ ಅಯೊ ವಿಧಿಯೇ !
ಕೇೞುವೆ ನಿನ್ನನ್ ಪೇೞೆನಗೆ—
ನಿನ್ನೊಡವೋದಾ ಪಡೆವಳರೆಲ್ಲಿ ?
ಇರಿಯಲ್ ಪೋದರ್ ? ಫರನ್ದಕನೆಲ್ಲಿ ?
ಸೌಸ್ಥಾನ್, ಪೆಲಗಾನ್, ಸಮ್ಮಿತ್ರನ್, ದೊತಮನ್,
ಆ ಅಗ್ದಬತನ್, ಸೌಸಿಸ್ಕೇನೀನ್—
ಎಕ್ಬಟನದ ಪಿರಿಯರಸುಗಳೆಲ್ಲಿ ?
ಪೇೞೆನಗೆ.

೨.೨

ಕ್ಷಯಾರ್ಷ— ಟಿರಿಯದ ಪಡಗನ್ ಪಾಱಿದರ್ತೆಗ್ರ,
ಇನ್ ಪಾರರ್ !
ಸಲಮೀನ್ ಕರೆಯೊೞ್, ಕೂರ್ಗಲ್ಲಿರೆಯೊಳ್,
ಜಿದ್ದುರ್, ಸತ್ತುರ್, ತೇಲ್ದುರ್ ತೆರೆಯೊಳ್—
ಇನ್ ಬಾರರ್ !

ಮೇಳ— ಅಪಪಾ ವಿಧಿಯೇ, ಅಯೊ ಅಯೊ ವಿಧಿಯೇ !
ಕೇಳುವೆನಿನ್ನಂ, ಪೇಳೆನಗೆ.
ಗೆಲ್ಲಲ್ ಪೋದಾ ಶೂರರದೆಲ್ಲಿ ?
ರಾಜಕುಮಾರರ್ ? ಫ್ರೈನುಖಿಸ್ಸೆಲ್ಲಿ ?
ಅರಿಯೊಮರ್ದ್, ಸ್ಯೂಲ್ಕೀಸ್, ಲೀಲ್ಯಸ್, ಮೆಂಫೀಸ್,
ಆ ಮಾಸಿಸ್ತ್ರೀಸ್, ಮತ್ತಾ ಥರುಬಿಸ್,
ಹಿಸ್ತಾಸ್ಪಿಸ್, ಅರ್ತಂಬರಸೆಲ್ಲಿ ?
ಪೇಳೆನಗೆ !

೩.೧

ಕ್ಸಯಾರ್ಷ— ಅಯೊ, ಅಯೊ, ಏನ್ ಪೇಳ್ವೆನ್.
ಆ ಪಳ ಅಥೇನ್ಸ್ ಕಣ್ಣೋಳ್ ಕಂಡರ್,
ಕಂಡೊರೆ ನುಂಗುವ ಜವನನ್ ಕಂಡರ್,
ಈ ನಲಿಬಾಳನ್ ಕಡೆ ಬೀಳ್ಕೊಂಡರ್,
ಬಯಲಾದರ್.

ಮೇಳ— ಅಲ್ಲಿಯೆ ಜಟ್ಟಿಯ ಪರ್ಸದ ಕಣ್ಣು,
ನಿನ್ನ ಮಂತಣದ ನಚ್ಚಿನ ಕಣ್ಣು,
ನಿನ್ನ ಪ್ಪಣೆಯೊಳ್ ಪರ್ಸದ ಜನವ
ಕೋಟಿ ಕೋಟಿಗಳನೆಣಿಸಿಟ್ಟನವ,
ಆ ಅಲ್ಪಿಸ್ತನ ಜಟ್ಟಿಯು ಅಲ್ಲಿ ?
ಓಬರ, ಅರ್ಸಮಿ, ಪರ್ಭರಸಲ್ಲಿ ?
ಓ ಓ ದೈವವೆ, ಏನ್ ಕೇಡಾಯ್ತು !
ಪರ್ಸದ ಕಥೆ ತಾನೀ ಪಾಡಾಯ್ತು !

೩.೨

ಕ್ಸಯಾರ್ಷ— ಅಯೊ, ಅಯೊ, ಏನ್ ಕೇಳ್ವೆಯಾ !
ಕೂರಲಗಿಂದಾ ಕೊರಳನ್ ಕೊರೆವಯ್ !

ಅಣುಗರ ನೆನೆಯಿಸಿ ಕರುಳನ್ ಕೊರೆವಯ್ !
ಬೇಡ, ಬೇಡ, ಎದೆ ಏಕಿಂತಿರಿವಯ್ !
ಕೊಯಲಾದರ್ !

ಮೇಳ— ಕೇಳ್ವೆನ್, ಕೇಳ್ವೆನ್, ಮರೆವುದದೆಂತು ?
ಆ ಪೊನ್ನಾಳ್ಗಳ ಮರೆವುದದೆಂತು ?
ಮರ್ದಿಯರಸನ್ ಸ್ಥಾಂಥಸನೆಲ್ಲಿ ?
ಕೋಟಿ ಕುದುರೆಯಾ ಸತ್ರಪನೆಲ್ಲಿ ?
ನಿನ್ನ ತೇರ ಬಳಿ ಬೆಳ್ಗೊಡೆವಿಡಿದು,
ಭಕ್ತಿಯಿಂದ ಬರುವಾತನದೆಲ್ಲಿ ?
ಓ ಓ ದೈವವೆ, ಏನ್ ಸೋಲಾಯ್ತು !
ಪರ್ಸದ ಕಥೆ ತಾನೀ ಪಾಲಾಯ್ತು !

೪.೧

ಕ್ಷಯಾರ್ಷ— ಪೋದರೆಲ್ಲ ಪಡೆವಳರ್.
ಮೇಳ— ಪೋದರೆ ಪೆಸರಿಲ್ಲದೇ !
ಕ್ಷಯಾರ್ಷ— ಅಯೋ, ಅಯೋ, ಅಯೋ, ಅಯೋ—
ಮೇಳ— ಅಯೋ, ಅಯೋ, ದೈವವೇ !
ಉತ್ಸವದೊಳು ನಮ್ಮ ಬರಿಸಿ,
ಮತ್ಸರದೊಳು ತರಿವುದೇ !

೪.೨

ಕ್ಷಯಾರ್ಷ— ತರಿದುದಣ್ಣ, ತರಿದುದು.
ಮೇಳ— ತರಿದುದು ಮತ್ತೇಳಿವೇ !
ಕ್ಷಯಾರ್ಷ— ಚೂರು, ಚೂರು, ತುಂಡು, ತುಂಡು,
ಮೇಳ— ನಮ್ಮ ನಾವೆ ಮುರಿದುದೇ !
ಯವನರಲ್ಲಿ ಕಯ್ಸೆವಾಡಿ
ಪರ್ಸದ ಪಡೆ ಕೆಟ್ಟುದೇ !

೫.೧

ಕ್ಷಯಾರ್ಷ— ಎಂತಹ ಪಡೆ! ಕೆಟ್ಟೆ ನಾನು ಕೆಟ್ಟೆನು!

ಮೇಳ— ಎಂತಹ ಸಿರಿ! ಉಳಿದುದೇನು, ಉಳಿದುದು?

ಕ್ಷಯಾರ್ಷ— ಕಾಣ್ಬುದೆ ಈ ಹರುಕುಚಿಂದಿ, ಕಾಣ್ಬುದೆ?

ಮೇಳ— ಕಾಣ್ಬುದೇ, ಕಾಣ್ಬುದೇ.

ಕ್ಷಯಾರ್ಷ— ಅಂಬು ಬರಿದು—ಈ ಹೊದೆ—ಈ ಹೊದೆ?

ಮೇಳ— ಕಾಣ್ಬುದೇ, ಕಾಣ್ಬುದೇ.

ಕ್ಷಯಾರ್ಷ— ಅಂಬುಗಳಾ ಬೊಕ್ಕಸ, ಬೊಕ್ಕಸ?

ಮೇಳ— ಇದೆಯೆ ಇನ್ನು ಪರ್ವಕೆ ಬಲು ಬೊಕ್ಕಸ?

ಕ್ಷಯಾರ್ಷ— ಇದೆಯೆ—ಪೋಯ್ತು ಅಗ್ಗಳಿಲ್ಲ, ಸಿರಿಗಳು.

ಮೇಳ— ಕಲಿಗಳವರು ಯವನರು—ಕಾಳಗದಲಿ ಹುಲಿಗಳು.

೫.೨

ಕ್ಷಯಾರ್ಷ— ಅರಿದೆನಿಲ್ಲ—ಕಲಿಗಳು, ಕಲಿಗಳು.

ಮೇಳ— ಅವರರಿವುದ ಕಂಡೆಯಾ, ಕಂಡೆಯಾ?

ಕ್ಷಯಾರ್ಷ— ಕಣ್ಣನಿರಿಯೆ ಕಂಡು ಕಂಡು ಹರಿದೆನೇ!

ಮೇಳ— ಆ—ಆ, ಆ—ಆ.

ಕ್ಷಯಾರ್ಷ— ಕಡಲೊಳಿರಿತ—ನೆಲದೊಳಿರಿತ—ಓ—ಓ.

ಮೇಳ— ಓ—ಓ, ಓ—ಓ.

ಕ್ಷಯಾರ್ಷ— ನಮಗೆ ನೋವು—ಹಗೆಗೆ ನಲಿವು—ಆ—ಆ.

ಮೇಳ— ನಮ್ಮ ಬಲ ಕುಗ್ಗಿತಲಾ—ಆ—ಆ.

ಕ್ಷಯಾರ್ಷ— ಮೆಯ್ಯ ಕಾವಲೊಬ್ಬನಿಲ್ಲದಾದೆನೇ!

ಮೇಳ— ಆದನೇ—ನಮ್ಮ ಚಕ್ರಿ—ಕಾವಲಿಲ್ಲದಾದನೇ!

೬.೧

ಕ್ಷಯಾರ್ಷ— ಕಣ್ಣನೀರ ಸುರಿಸಿ ಬನ್ನಿ, ಮನೆಗೆ ನನ್ನನುಯ್ಯುತ.

ಮೇಳ— ಕಣ್ಣನೀರ ಸುರಿಸುತಿಹೆವು, ಮನೆಗೆ ನಿನ್ನನುಯ್ವೆವು.

ಕ್ಷಯಾರ್ಷ— ಅಕಟಕಟಾ, ನರಳಿ ನರಳಿ ಪರಿದುಕೊಳ್ಳಿ ಉಡುಪನು.

ಮೇಳ— ಅಕಟಕಟಾ, ನರಳಿ ನರಳಿ ಪರಿದುಕೊಳುವೆವುಡುಪನು.

೬.೨

ಕ್ಷಯಾರ್ಷ— ಜೇನುಸವಿರಸು ಕೇಳೆ, ಕೇಳೆ, ಹೇಳಿಕೊಳುತ್ತ ಅಳಲಸು.

ಮೇಳ— ಜೇನುಸವಿರಸು ಕಿತ್ತು, ಕಿತ್ತು, ಹೇಳಿಕೊಳುವೆನಳಲಸು.

ಕ್ಷಯಾರ್ಷ— ಎದೆಯು ಜಜ್ಜಿ, ಜಜ್ಜಿ, ಜಜ್ಜಿ, ಕೆಟ್ಟಿಹೆ ಹಾ ಎನ್ನುತ.

ಮೇಳ— ಎದೆಯು ಜಜ್ಜಿ, ಜಜ್ಜಿ, ಜಜ್ಜಿ, ಕೆಟ್ಟಿಹೆ ಹಾ ಎಂಬೆವು.

೭.೧

ಕ್ಷಯಾರ್ಷ— ದಾರಿ ತೋರಿ ತಾಯ ಮನೆಗೆ.

ಮೇಳ— ಇತ್ತ ಬಾ.

ಕ್ಷಯಾರ್ಷ— ಆವಮೊಗದೊಳವಳ ನೋಳ್ಪೆ ?

ಮೇಳ— ನೋಳ್ಪೆ, ಬಾ.

ಕ್ಷಯಾರ್ಷ— ನನ್ನ ನೋಡಿ ಕರೆವಳೆ ತಾಯ್ ?

ಮೇಳ— ಕರೆವಳು.

ಕ್ಷಯಾರ್ಷ— ಮೆಲ್ನುಡಿಗಳ ನುಡಿವಳೆ ತಾಯ್ ?

ಮೇಳ— ನುಡಿವಳು :

ನಲ್ನುಡಿಗಳ ನುಡಿವಳು.

೭.೨

ಕ್ಷಯಾರ್ಷ— ಮತ್ತೆ ಸೂಸ ಮೆರೆವುದೆ ಪೇಳ್ ?

ಮೇಳ— ಮೆರೆಯಲಿ.

ಕ್ಷಯಾರ್ಷ— ನಮ್ಮ ಸರ್ವ ಬೆಳೆವುದೆ ಪೇಳ್ ?

ಮೇಳ— ಬೆಳೆಯಲಿ.

ಕ್ಷಯಾರ್ಷ— ವಿಶ್ವದ ಸಾಮ್ರಾಜ್ಯಕಾರು ?

ಮೇಳ— ದೇವರೇ.

ಕ್ಷಯಾರ್ಷ— ಸಾಮ್ರಾಜ್ಯವ ಕಾವರಾರು ?

ಮೇಳ— ಧರ್ಮವೇ :

ದೈವ ಕಾವ ಧರ್ಮವೇ.

ಶ್ರೀ.

ಅರ್ಥಕೋಶ

[ಈ ನಾಟಕದಲ್ಲಿ ಬರುವ ಅಂಕಿತನಾಮಗಳು, ಮೊದಲಾದವುಗಳ ಬಗ್ಗೆ ವಿಷಯ ಸಂಗ್ರಹಣಕ್ಕೆ ಇಂಗ್ಲಿಷಿನಲ್ಲಿ ವಿಪುಲ ಸಾಧನ ಸಂಪತ್ತಿ ಇರುವುದರಿಂದ ಇಲ್ಲಿ ಆವಶ್ಯಕವಾದ ಮಾತುಗಳಷ್ಟನ್ನೆ ಕೊಟ್ಟಿದೆ. ಸಾಮಾನ್ಯವಾಗಿ, ಆಯಾ ಮಾತು ಮೊದಲ ಸಲ ಬರುವ ಸಾಲನ್ನು ಮಾತ್ರ ಸೂಚಿಸಿದೆ.]

ಮಾತು	ಸಾಲು	ಅರ್ಥ
ಅಖಿಮಿನಿಯರು	೪೯೭	ಪರ್ಶಿಯದ ರಾಜವಂಶದವರು (ಮೂಲ ಪುರುಷ: ಅಖಿಮಿನೀಸ್)
ಅಂಕ	೮೬	ಕಾಳೆಗ: (ಪ್ರಸಿದ್ಧಿಯ ಗುರುತು)
ಅಣುಗಮಕ್ಕಳ್	೪೧೨	ಪ್ರೀತಿಯ ಪ್ರಜೆಗಳು
ಅಯುಸ ಕುರುವ	೩೦೮	ಏಜಾಕ್ಸ್ ಗಡ್ಡೆ, ದ್ವೀಪ
ಅರೆ	೨೮೧	ಕಲ್ಲು, ಬಂಡೆ
ಅಲವತ್ತು	೭೧೦	ಅತಿ ಆಸೆಗೊಂಡು
ಅಹುರಮಸ್ದ	೧೮೫	ಪಾರಸಿಕರ ದೇವರು
ಅಳಲು	೨೮೯	ದುಃಖ, ವ್ಯಥೆ
ಅಳವಿ	೬೧೩	ಪರಾಕ್ರಮ
ಅಳಿಯಿತ್ತು	೨೬೭	ಹಾಳಾಯಿತು
ಅಳಿವೆಸರ್	೩೯೦	ಕೆಟ್ಟ ಹೆಸರು, ಅಪಕೀರ್ತಿ
ಅಳುಂಬ	೭೦	ಮೀರಿದ್ದು, ಅತಿಶಯ
ಅರ್ಬು	೩೫೩	ಕೂಗು, ನಾದ
ಅಲು	೩೦೭	ಕೂಗು
ಇರುಳ್	೧೪೫	ಕತ್ತಲೆ, ಅಜ್ಞಾನ
ಇಳಿದು	೧೬೬	ಬಡವು
ಇಳಿದು	೫೮೪	ಸುಲಭ
ಎಕ್ಬಟನ	೪೧	ಪರ್ಶಿಯದ ಬೇಸಗೆಯ ರಾಜಧಾನಿ
ಎರೆಯ	೧೦೯	ಒಡೆಯ, ದೊರೆ
ಎರೆವೆಟ್ಟು	೬೫೮	(ಎರೆವಟ್ಟು ? = ಆಶ್ರಯ ಎರೆ + ಬೆಟ್ಟು ? = ರಾಜ ಪರ್ವತ)
ಏರೀಸ್	೮೨೬	(ಗ್ರೀಕರ) ಯುದ್ಧ ದೇವತೆ
ಐಡೋನ್ಯೂಸ್	೫೫೩	ಪಾತಾಳಲೋಕದ ಅಧಿದೇವತೆ, ಪ್ಲೂಟೊ
ಒಡ್ಡು	೩೭೮	ಸಮೂಹ
ಒಸಗೆ	೨೨	ಸಂತೋಷದ ಸುದ್ದಿ

ಓಡ	೩೩೬	ದೋಣಿ, ಹಡಗು
ಓಲೆ	೩೨	ಕಾಗದ, ರಾಯಸ
ಕಟ್ಟಾಣಿ	೨೫೩	(ಕಡಿದು + ಅಣಿ) ಬಲವಾದ ಆಯುಧ
ಕಡಿಯ	೩೦೬	(ಕಡಿದು) ಕಡಿದಾದ ? (ಕಡಿ, ಕಳಿ) ಕಡಲ ಚಾಚು ?
ಕಪ್ಪಲು	೩೬೭	ಹಡಗು
ಕರುಮಾಡ	೬	ಉಪ್ಪರಿಗೆ
ಕಲಂ	೩೪೩	ಹಡಗು
ಕಳ	೩೮೨	ರಣರಂಗ
ಕಳಿ	೩೪೨	ಕಡಲ ಹಿನ್ನೀರು, ಚಾಚು
ಕಾಳಾಗು	೨೮೨	ಹಾಳಾಗು
ಕಿಳಿರ್	೪೪	(ಕುದುರೆ) ಕೆನೆ
ಕುತ್ತ	೪೧೫	ರೋಗ
ಕೂರ್ಪವನು	೫೭೪	ಪ್ರೀತಿಸುವವನು
ಕೂರ್ಪು	೫೬	ಕೆಚ್ಚು
ಕೆನ್ನೀರ್	೩೧೨	ರಕ್ತ
ಗಡ್ಡೆ	೩೯೩	ಸಣ್ಣ ದ್ವೀಪ
ಗೋಳು	೩೫೯	ಪಕ್ಕ, ಪಾರ್ಶ್ವ
ಜೋಡು	೩೯೯	ಕವಚ
ಡೋರಿಕರು	೨೦೧	(ಇಲ್ಲಿ) ಗ್ರೀಕರು
ತಣ್ಬೊಳೆ	೬೯೨	ತಂಪು ಹೊಳೆ
ತನಿಯಳ್	೪೫೮	ಏಕಾಕಿನಿ
ತಲೆಮೆ	೩೮೮	ಪ್ರಾಧಾನ್ಯ, ಶ್ರೇಷ್ಠತೆ
ತಲೆಯಾಳ್	೩೧೯	ನಾಯಕ
ತಿರುವು	೪೦೧	ಬಿಲ್ಲಿನ ಹಗ್ಗ, ಹೆದೆ
ತೊತ್ತುನೊಗ	೮೦	ಗುಲಾಮಗಿರಿಯ, ದಾಸ್ಯದ–ನೊಗ, ಭಾರ
ದೀವಿ	೩೧೦	ದ್ವೀಪ
ದ್ಯೌಸ್	೬೩೨	ಪಾರಸಿಕರ ದೇವರು
ದ್ಯೌಸ್ಪಿತರ್	೪೨೩	ಪಾರಸಿಕರ ದೇವರು
ನಲ್ಮೆಸಸ್	೪೪೦	ಒಳ್ಳೆಯ ಕೆಲಸ
ನಿಶಿದಿಗೆ	೫೮೦	ಸಮಾಧಿ, ಗೋರಿ
ನೆಮ್ಮು	೭೫೮	ಅವಲಂಬ, ಆಸರೆ
ನೆರ	೪೦೨	ಮರ್ಮ, ವಧ್ಯಸ್ಥಾನ
ನೆರೆ	೧೨೭	ಪ್ರವಾಹ

ನೇಸರ್	೩೪೦	ಸೂರ್ಯ
ಪದಪದರು	೭೭೩	ಆತುರಿಸು, ಮುನ್ನುಗ್ಗು
ಪದರಾಡು	೪೨೬	ಕಳವಳಿಸು, ಕಂಗೆಡು
ಪರ್ಸ	೨೨	ಪರ್ಷಿಯ
ಪಳಮೆ ಪೊಳಲ್	೪೩	ಪ್ರಾಚೀನ ನಗರ
ಪಾಯದಳ	೧೦೪	ಕಾಲಾಳು, ಪದಾತಿ
ಪಾರಿ	೧೭	ಹಾರೈಸಿ, (ಎದುರು) ನೋಡಿ
ಪಾಳಿ	೨೯೮	ಕ್ರಮ
ಪೀಯಯನ್	೩೫೬	ಜಯಘೋಷ, ಹರ್ಷನಾದ
ಪುರುಳು	೨೪೧	ಅರ್ಥ, (ಇಲ್ಲಿ: ಆಶಯ)
ಪೂಣ್	೬೪೧	ಪ್ರತಿಜ್ಞೆಮಾಡು
ಪೆರಗೆ	೧೦೪	ಹಿಂದೆ
ಪೊಂಕ	೪೮೫	ಉತ್ಸಾಹ
ಪೊಂಗೋಲ್	೩೦೧	(ಚಿನ್ನದಕೋಲು), ರಾಜದಂಡ
ಪೊಡಪು	೨೮೬	ಶಕ್ತಿ, ತೇಜಸ್ಸು
ಪೊಂದೆರೆ	೪೯೬	ಹೊನ್ನತೆರಿಗೆ
ಪೊಲ್ಲದು	೧೮	ಕೆಟ್ಟದ್ದು
ಪೊಳಲು	೩೩೦	ಪಟ್ಟಣ
ಪೊಸೈಡನ್	೬೪೨	ಗ್ರೀಕರ ಸಮುದ್ರಾಧಿದೇವತೆ
ಪೋರಾಣ್ಮನ್	೧೪	ಪಡೆವಳ, ಸೇನಾನಿ
ಪ್ಯಾನ್	೩೯೪	ಗ್ರೀಕರಲ್ಲಿ ಕುರಿಮಂದೆಗಳ ಮತ್ತು ಕುರುಬರ ಅಧಿದೇವತೆ. ಇವನಿಗೆ ಕೋಡುಗಳೂ ಆಡಿನ ಕಾಲುಗಳೂ ಇರುವುದಾಗಿ ಚಿತ್ರಿಸುವುದು ವಾಡಿಕೆ
ಬಾಸ್ಪೊರಸ್	೬೧೫	ಒಂದು ಜಲಸಂಧಿ
ಬಿಡುತೆ	೫೦೫	ಸ್ವಾತಂತ್ರ್ಯ
ಬೀಳಾಗು	೨೮೨	ವ್ಯರ್ಥವಾಗು
ಬೇಳ್	೨೧೯	ಯಾಗಮಾಡು, ಬಲಿಕೊಡು
ಮಂತಣ	೮೫೭	ಮಂತ್ರಣ, ಆಲೋಚನೆ
ಮರುಳ್	೧೪೫	ಹುಚ್ಚು
ಮರೆಥಾನ್	೨೮೮	ಗ್ರೀಸಿನ ಒಂದು ಪ್ರಾಂತ. ಕ್ರಿ. ಪೂ. ೪೯೦ ರಲ್ಲಿ ಗ್ರೀಕರಿಗೂ ಪಾರಸಿಕರಿಗೂ ಇಲ್ಲಿ ಯುದ್ಧವಾಯ್ತು
ಮಾರುಲಿ	೩೫೪	ಪ್ರತಿಧ್ವನಿ
ಮಾರ್ಪಡೆ	೫೬	ಶತ್ರುಸೈನ್ಯ
ಮಿಥ್ರ	೨೨೧	ಪಾರಸಿಕರ ದೇವರು (ಸೂರ್ಯ)

ಮುಡಿ	೫೬೪	ಕಿರೀಟ
ಮುತ್ತ	೧೯೨	ಮುದುಕರಾದ, ವೃದ್ಧ
ಮುದುಪಳಮೆ	೬೭	ವೃದ್ಧ ಪ್ರಾಚೀನ, ಪ್ರಪ್ರಾಚೀನ
ಮುನ್ನೀರು	೩೮೦	ಸಮುದ್ರ
ಮೆಂಫಿ(ಸ್)	೬೫	ಈಜಿಪ್ತಿನ ಒಂದು ದೊಡ್ಡ ಪಟ್ಟಣ
ಮೇದಿಕರು	೬೭೮	ಪಾರಸಿಕರು
ಮೊರೆ	೧೨	ಆಶ್ರಯ
ಯವನರು	೪೭೬	ಗ್ರೀಕರು
ರಾಜರಾಜ	೪೮	ಚಕ್ರವರ್ತಿ
ಸತ್ರಪ	೧೦	ಪ್ರಾಚೀನ ಪರ್ಷಿಯ ಸಾಮ್ರಾಜ್ಯದ ಪ್ರಾಂತಾಧಿಕಾರಿ
ಸಲಮಿಸ್	೨೭೮	ಗ್ರೀಕರ ಆಳಿಕೆಗೆ ಒಳಪಟ್ಟಿದ್ದ ಒಂದು ದ್ವೀಪ. ಇದರ ತೀರದಲ್ಲಿ ನಡೆದ ಯುದ್ಧದಲ್ಲಿ ಗ್ರೀಕರು ಕ್ಷಯಾರ್ಷನ ಹಡಗು ಪಡೆಯನ್ನು ಸೋಲಿಸಿದರು
ಸೂಸ	೪೧	ಪರ್ಷಿಯದ ಚಳಿಗಾಲದ ರಾಜಧಾನಿ
ಸೆಲೆ	೨೭	ಶಬ್ದ
ಸೋವು	೮೦೦	ಬೇಟೆಯಲ್ಲಿ ಮೃಗಗಳನ್ನು ಎಬ್ಬಿಸಿ ಒಂದೆಡೆ ಅಟ್ಟುವುದು; (ಇಲ್ಲಿ : ಬೇಟೆ, ಗ್ರಾಸ?)
ಸ್ಯೂಸ್	೭೧೪	ಗ್ರೀಕರ ದೇವೇಂದ್ರ
ಹರಿಗೆ	೨೫೩	ಗುರಾಣಿ
ಹರ್ಮೀಸ್	೫೩೫	ಸ್ಯೂಸ್ ದೇವನ ಮಗ, ದೇವದೂತ
ಹಲ್ಲಣ	೨೧೦	ತಡಿ, ಜೀನು
ಹಳಚು	೩೨೪	ತಾಗು, ಬಡಿ
ಹುದು	೨೦೨	ಸಮಾನ
ಹಾಯಿ	೩೨೭	ಧ್ವಜ (ಇಲ್ಲಿ : ಹಡಗು)
ಹೆಲಸ್	೨	ಗ್ರೀಸ್
ಹುದಿಗೆ	೫೫೧	ಸಮಾಧಿ, ಗೋರಿ
ಹೂಗೆಲಸಿ	೫೨೦	ಹೂವಿನ ಕೆಲಸಗಾರ (ದುಂಬಿ)
ಹೊದೆ	೮೫೩	ಬತ್ತಳಿಕೆ

14312

ನಮ್ಮ ಪ್ರಕಟನೆಗಳು

ಎ. ಎನ್. ಮೂರ್ತಿರಾವ್—

ಯೋಧನ ಪುನರಾಗಮನ	೧	೪	೦
ಪಾಶ್ಚಾತ್ಯ ಸಣ್ಣ ಕತೆಗಳು	೧	೦	೦

ಎಂ. ಗೋಪಾಲಕೃಷ್ಣ ಅಡಿಗ—

ಸುವರ್ಣ ಕೀಟ	೦	೧೨	೦
ರೈತರ ಹುಡುಗಿ	೧	೦	೦
ಜನತೆಯ ಶತ್ರು (ನಾಟಕ)	ಅಚ್ಚಿನಲ್ಲಿ		

ಶ್ರೀ—

ಇಂಗ್ಲಿಷ್ ಗೀತೆಗಳು	ಅಚ್ಚಿನಲ್ಲಿ		
ಹೊಂಗನಸುಗಳು	೦	೧೨	೦

ಜಿ. ಹನುಮಂತರಾವ್—

ಋಗ್ವೇದ ಸೂಕ್ತಗಳು	೦	೧೨	೦
ವಿಜ್ಞಾನ	೧	೪	೦

ಕ್ಷೀರಸಾಗರ—

ಕಲಹ ಕುತೂಹಲ (ನಾಟಕ)	೧	೦	೦

ಅ. ನ. ಕೃಷ್ಣರಾವ್—

ಮಂಗಳ ಸೂತ್ರ (ಕಾದಂಬರಿ)	ಅಚ್ಚಿನಲ್ಲಿ		
ಕಣ್ಣಾಮುಚ್ಚಾಲೆ (ಕಥೆಗಳು)	,,		

ವಿಶ್ವಸಾಹಿತ್ಯ

೧೨೧೦ ಕಾಂತರಾಜ ರಸ್ತೆ

ಮೈಸೂರು